**DEPARTMENT ACTIVITIES:2015-16**

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 05/10/2015 | Vachana sahithyadalli horaatada swaroopa | Special lecture | Dr.Shkar GFGC Madduru | Prof.Shivabasaviah Director Prof.Krishna murthy Hanuru |
| 2 | 08/03/2016 | Sahithya Suvarnavathi | Book Launch | Maleyuru Guruswamy | Prof.Shivabasaviah Director Prof.Krishnamurthy Hanuru Mahesh Harave |
| 3 | 30/05/2016 | Kannada Sahithya matthu Varthamanada Savalugalu | Special lecture | Prof.Padhma Shekar Registrar Sanskrit University Banglore | Prof.Shivabasaviah Director Prof.Krishnamurthy Hanuru |
| 4 | 30/05/2016 | Prasthutha Samaja matthu Vachana Sahithya | Special lecture | Banjagere Jayaprakash | Prof.Shivabasaviah Director Prof.Krishnamurthy Hanuru |

**DEPARTMENT ACTIVITIES:2016-17**

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1. | 20/12/2016 | Prachina Kannada Sahithyadha Preerane, Dooranegalu | Special lecture | Prof.N.Taranath Visitinag Proffessors, Kuvempu Adhyana Kendhra, Manasa Gangothri | Prof.Shivabasaviah Director Prof.Krishnamurthy Hanuru |
| 2 | 20/12/2016 | Vysabharatha and Kumara Vysabharatha | Special lecture | Prof.Joythi Shankar Proffessor, | Prof.Shivabasaviah Director Prof.Krishnamurthy |

| | | | | | |
|---|---|---|---|---|---|
| | | | | | Hanuru |
| 3 | 20/12/2016 | Hummerna Iliyad and Varjilana Iliyad | Special lecture | Prof.C.Naganna Visiting Proffessors, | Prof.Shivabasaviah Director<br><br>Prof.Krishnamurthy Hanuru |
| 4 | 02/04/2017 | Arivina Belaku Savithribayipule | Book Launch | Kupnalli Bairappa and Hemalatha | Prof.Shivabasaviah Director<br><br>Prof.Krishnamurthy Hanuru |
| 5 | 29/04/2017 | Kannada Patyadha Aydha Kavitheglu | | Deevendhra Varaprashadh, Mysore. | Prof.Shivabasaviah Director<br><br>Prof.Krishnamurthy Hanuru |
| 6 | 03/05/2017 | Mathina Mahakavya (Janapadha Mahakavya) | Special lecture | Prof.S.G.Siddhara mayya Sa.Si.Marula Siddhappa | Prof.Shivabasaviah Director<br><br>Prof.Krishnamurthy Hanuru |

## DEPARTMENT ACTIVITIES:2017-18

| SL NO | DATE | TITAL/ DEPARTMEN T ACTIVITIES: | PROGRA M | RESOURCE PERSONS | GUESTS |
|---|---|---|---|---|---|
| 1 | 27/07/2017 | Samuha Madhyama mathu Varthamana Rajakiya | Special lecture | Sri Ganesh Aminagada Editors. Prajavani paper, Mysor | Prof.Shivabasaviah Director<br><br>Prof.Krishnamurthy Hanuru |
| 2 | 27/09/2017 | Vachana Sahithyadhalli Krushi Roopakagalu | Special lecture | VijayaKumari S Karikal | Prof.Shivabasaviah Director<br><br>Prof.Krishnamurthy Hanuru |
| 3 | 28/03/2018 | Hosagannada Kavya | Special lecture | Prof.Varadharaju Visitinag Proffessors, | Prof.Shivabasaviah Director<br><br>Prof.Krishnamurthy |

| | | | | | |
|---|---|---|---|---|---|
| | | | | | Hanuru |
| 4 | 28/03/2018 | Bharathiya Bhasegalu | Special lecture | B.V.Vasanth Kumar | Prof.Shivabasaviah Director<br><br>Prof.Krishnamurthy Hanuru |
| 5 | 28/03/2018 | Prayogika vimarshe | Special lecture | Prof.M.Shankar | Prof.Shivabasaviah Director<br><br>Prof.Krishnamurthy Hanuru |
| 6 | 28/03/2018 | Vachana Sahithyadha Nele Bele | Special lecture | Dr.BetteGowda | Prof.Shivabasaviah Director<br><br>Prof.Krishnamurthy Hanuru |

**DEPARTMENT ACTIVITIES:2018-19**

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 08/03/2019 | Prachina Kannada Sahithyadha Parikalpanegalu | Special lecture | **Prof.N.Taranath** Visiting Professor, Kuvempu institute of kannada studies, Manasa Gangothri | Prof.Shivabasaviah Director Prof.Krishnamurthy Hanuru |
| 2 | 08/03/2019 | Paschathya Memamsheya Nelegalu | Special lecture | **Prof.Varadharaju** Visitinag Proffessors | Prof.Shivabasaviah Director<br><br>Prof.Krishnamurthy Hanuru |
| 3 | 08/03/2019 | Kannada Shasanagala Shasthriya Adhyana | Special lecture | **Prof.Manjunath** Director, Prasaranga, Mysore | Prof.Shivabasaviah Director<br><br>Prof.Krishnamurthy Hanuru |

**DEPARTMENT ACTIVITIES-2019-20**

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 08/03/2019 | Prachina Kannada Sahithyadha Parikalpanegalu | Special lecture | Prof.N.Taranath Visitinag Proffessors, Kuvempu Adhyana Kendhra, Manasa Gangothri | Prof.Shivabasaviah Director<br><br>Prof.Krishnamurthy Hanuru |
| 2 | 08/03/2019 | Paschathya Memamsheya Nelegalu | Special lecture | Prof.Varadharaju Visitinag Proffessors | Prof.Shivabasaviah Director<br><br>Prof.Krishnamurthy Hanuru |
| 3 | 08/03/2019 | Kannada Shasanagala Shasthriya Adhyana | Special lecture | Prof.Manjunath Director, Prasaranga, Mysore | Prof.Shivabasaviah Director<br>Prof.Krishnamurthy Hanuru |

# Devachandra Kannada Library





## About The Devachandra Kannada Labrary:

Our department have a good Library Named as "Devachandra Kannada Granthalaya" Devachandra was one of the most popular writer in Kannada Literature, he was born in Chamarajanagara and wrote and contribute many books in old Kannada.

In this library has founded by pro Krishnamurthy Hanuru saported by our honorable director Pro Shivabasavaiah. On this library founded as only Doners Dr. L Basavaraju, Prof NM Thalavar, Director, KIKS, Manasagangotri, mysore, Maialahalli Revanna, retired professor, University of Mysore, Prof Manjunath, Director, Prasaranga, Manasagangotri, mysore, and many more Doners was donated lots of books. Now in this library have more than 6000 books, and some magazines, and Dilly news papers

# <u>Photographs:</u>




**One day seminar inaugurated speech from our Department HOD, Prof Krishnamurhty Hanuru, resource persons prof Padhma sekhar, prof Tharanath, prof C Naganna, Prof M Varadaraju and our Director prof Shivabasavaih is here.**




**A Special Lecture from Prof Vijayakumari S Karikal KIKS, Manasaganborti, University of Mysore, at Nijaguna Sabhangana**



**Pro NM Thalavar was spoke to our students in the program of send-up and honor of Gold medal Students**



**A honor to prof Mailahalli Revanna form our Kannada department**



Dr. L Basavaraju and, Prof NM Thalavar, Director, KIKS, Manasagangotri, mysore, is Doneted to our director Prof Shivabasavaiah



Presidential Speech from our Director Prof Shivabasavaiah in the program of send-up and honor of Gold medal Students



**One day workshop Introduction speech from our HOD Prof Krishnamurthy Hanuru**



**A Special visit to our department from HM Krishnaiah, Syndicate member time in that our HOD Prof Krishnamurthy Hanuru**



**One day workshop Introduction speech from our HOD Prof Krishnamurthy Hanuru**



**A Special Lecture from Prof  M Varadaraju retarid professor, Maharani Arts and Science, Mysore at Nijaguna Sabhangana**



**A Special Lecture from Prof  M Shankar, Post Graduate centre, Hasan at Nijaguna Sabhangana**





**A Special Lecture from Prof  Tharanath N KIKS, Manasaganborti, University of Mysore, at Nijaguna Sabhangana**





**Presidential Speech from our Director Prof Shivabasavaiah in the program of One day workshop**

# Programe invitations



# Press reports



ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ; ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಅಭಿಪ್ರಾಯ

## ಜಾತಿ ವ್ಯವಸ್ಥೆ ಇರುವವರೆಗೂ ಶೋಷಣೆ

ಮುಖ್ಯಾಂಶಗಳು

- ಜಾತಿ ವ್ಯವಸ್ಥೆಯ ನಿರ್ಮೂಲನೆಯಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ
- ಶೋಷಿತರ ಬದುಕಿಗೆ ಆಶಾಕಿರಣವಾಗಿ ಬಂದ ಅಂಬೇಡ್ಕರ್



## ಆಲೋಚನಾ ಕ್ರಮ ಬದಲಾದಲ್ಲಿ ಸುಧಾರಣೆ ಸಾಧ್ಯ

ಸ್ನಾತಕೋತ್ತರ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಕಾವ್ಯಸಂಕಲನ ಲೋಕಾರ್ಪಣೆ



ದಿನಾಂಕ :- 21/12/16
ಪತ್ರಿಕೆ :- ವಿಜಯ ಕರ್ನಾಟಕ

# ಮಹಾಕಾವ್ಯಗಳ ಅಧ್ಯಯನ ಅಗತ್ಯ

## ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳು ಕುರಿತ ವಿಚಾರಗೋಷ್ಠಿ

**ವಿಕ ಸುದ್ದಿಲೋಕ**, ಚಾಮರಾಜನಗರ

ಪ್ರಾಚೀನ ಕನ್ನಡ ಸಾಹಿತ್ಯದ ಅಸ್ಮಿತೆಯನ್ನು ಗುರುತಿಸುವಲ್ಲಿ ಕವಿರಾಜಮಾರ್ಗ ಕೃತಿ ಅತ್ಯಂತ ಪ್ರಧಾನ ಪಾತ್ರ ವಹಿಸಿದೆ ಎಂದು ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಅಭಿಪ್ರಾಯಪಟ್ಟರು.

ನಗರದ ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ವಿಭಾಗದ ವತಿಯಿಂದ ಮಂಗಳವಾರ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಹಾಗೂ ಮಾದರಿಗಳು' ವಿಚಾರಸಂಕಿರಣದಲ್ಲಿ 'ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳು' ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

ಪ್ರಾಚೀನ ಕನ್ನಡ ಸಾಹಿತ್ಯದ ಅವಧಿಯಲ್ಲಿ ಅಂದರೆ (1160-1200)ಮಧ್ಯಕಾಲೀನ ವಚನಸಾಹಿತ್ಯ ಹಾಗೂ ಷಟ್ಪದಿ, ಸಾಂಗತ್ಯ ಎಂಬ ಎರಡು ಕಾಲಘಟ್ಟಗಳನ್ನು ಕಾಣಬಹುದು, ಭಾಷೆಯ ಸ್ವರೂಪದ ದೃಷ್ಟಿಯಲ್ಲಿ ಸಾಹಿತ್ಯದ ಪ್ರಕಾರಗಳಲ್ಲಿ 'ಚಂಪೂಯುಗ' ವನ್ನೇ ತೆಗೆದುಕೊಂಡರೆ, ಅಲ್ಲಿ ಧರ್ಮ ಮತ್ತು ಸಾಹಿತ್ಯ ಮುಖ್ಯವಾಗಲಿವೆ. ಧರ್ಮವನ್ನು ಅವಲೋಕಿಸಿದಾಗ, ಜೈನಯುಗ ಮುಖ್ಯವಾಗಲಿದೆ. ರಾಜಮಹಾರಾಜರು ಯುದ್ಧದಲ್ಲಿ ವಿಜಯಿಶಾಲಿಗಳಾಗಿ ಹಿಂದಿರುಗಿದ ಮೇಲೆ, ಅವರನ್ನು ಹಾಡಿಹೊಗಳಿ ಕಾವ್ಯ ರಚನೆ ಮಾಡುವುದು ಅಂದಿನ ಕಾವ್ಯ ಕಟ್ಟುವ ಕ್ರಮವಾಗಿತ್ತು.

**ವಿಭಿನ್ನ ಕೃತಿಗಳು**: ಪಂಪನ ವಿಕ್ರಮಾರ್ಜುನ ವಿಜಯ ವ್ಯಕ್ತಿಯ ಅಭಿವ್ಯಕ್ತಿಯನ್ನು ತಿಳಿಸಿದರೆ, ರನ್ನನ ಗದಾಯುದ್ಧ ದುರಂತದ ಕಾವ್ಯದಂತೆ ಗೋಚರವಾಗುತ್ತದೆ. ಕವಿರಾಜಮಾರ್ಗದಲ್ಲಿ ಮಾತ್ರ ಸಂಸ್ಕೃತದ ಬಳಕೆಯಿಲ್ಲದೇ ಕನ್ನಡಭಾಷೆಯನ್ನು ಬಳಸಿ ರಚನೆ ಮಾಡಿರುವ ಕೃತಿ, ಕನ್ನಡಕ್ಕೆ ಪ್ರಾಸಮುಖ್ಯವೇ ಹೊರತು ಖಂಡ ಪ್ರಾಸವಲ್ಲ ಎಂಬುದನ್ನು ಗುರುತಿಸುವ ಪ್ರಯತ್ನ ಕವಿರಾಜಮಾರ್ಗ ಕೃತಿ ರಚನೆಯಲ್ಲಿ ಕಂಡು ಬಂದಿದೆ ಎಂದರು.

ಪ್ರೊ. ಸಿ.ನಾಗಣ್ಣ ಮಾತನಾಡಿ, ಪಂಪ, ವ್ಯಾಸ, ವಾಲ್ಮೀಕಿ ರಚಿಸಿರುವ ಮಹಾಕೃತಿಗಳು ನಮ್ಮ ನಾಲಿಗೆಯ ಮೇಲೆ ಹೇಗೆ ಹರಿದಾಡುತ್ತಿವೆಯೋ ಹಾಗೇ ಪಾಶ್ಚಾತ್ಯ ಮಹಾಕಾವ್ಯಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಸಲಹೆ ನೀಡಿದರು.

ವ್ಯಾಸಭಾರತ ಹಾಗೂ ಕುಮಾರವ್ಯಾಸ ಭಾರತ ಕುರಿತು ಮೈಸೂರು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಸಂದರ್ಶಕ ಪ್ರಾಧ್ಯಾಪಕಿ ಜ್ಯೋತಿಶಂಕರ್, ಆಧುನಿಕ ಕನ್ನಡ ವಿಮರ್ಶೆ ಸ್ವರೂಪ ಮತ್ತು ಬೆಳವಣಿಗೆ ಕುರಿತು ಮೈಸೂರು ಮಹಾರಾಣಿ ಕಾಲೇಜಿನ ಸಂದರ್ಶಕ ಪ್ರಾಧ್ಯಾಪಕ ಮಾ.ವರದರಾಜು ವಿಚಾರಮಂಡಿಸಿದರು.

ಸಂದರ್ಶಕ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿ ಹನೂರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಅಧ್ಯಾಪಕರು, ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಿಕ ಚಿತ್ರಲೋಕ

**ಚಾಮರಾಜನಗರದ ಮೈಸೂರು ವಿವಿಯ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಹಾಗೂ ಮಾದರಿಗಳು' ವಿಚಾರ ಸಂಕಿರಣಕ್ಕೆ ಮಂಗಳವಾರ ಚಾಲನೆ ನೀಡಲಾಯಿತು. ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್.ತಾರಾನಾಥ್, ಡಾ.ಕೃಷ್ಣಮೂರ್ತಿ ಹನೂರು, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಪ್ರೊ. ನಾಗಣ್ಣ ಮತ್ತಿತರರು ಹಾಜರಿದ್ದರು.**

**ಮೈಸೂರು ವಿವಿ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.**



ದಿನಾಂಕ:- 21/12/16

ದಿನಪತ್ರಿಕೆಗಳು:- ವಿಜಯವಾಣಿ ಮತ್ತು ಪ್ರಜಾವಾಣಿ

## ವಿಚಾರ ಸಂಕಿರಣ

**ವಿಜಯವಾಣಿ ಸುದ್ದಿಜಾಲ** ಚಾಮರಾಜನಗರ ನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು ಕುರಿತು' ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಕನ್ನಡ ವಿಭಾಗದ ಆಶ್ರಯದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಕೃಷ್ಣ ಮೂರ್ತಿ ಹನೂರು ಉದ್ಘಾಟಿಸಿದರು. ಬಳಿಕ ಮಾತ ನಾಡಿ, ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು ಕುರಿತ ವಿಚಾರ ಸಂಕಿರಣ ಎಂಬುದು ಈಗಾಗಲೇ ಪಠ್ಯದಲ್ಲಿರುವ ವಿಚಾರದ ಪುನರ್‌ಮನನ ತರಗತಿಯಾಗಿದ್ದು, ಇದು ಪರೀಕ್ಷೆ ದೃಷ್ಟಿಯಿಂದ ಹೆಚ್ಚು ಅನುಕೂಲವಾಗಲಿದೆ ಎಂದರು. ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಮಾತನಾಡಿದರು. ಉಪನ್ಯಾಸಕರಾದ ಯು.ಪಿ. ತಮ್ಮೇಗೌಡ, ಎಂ.ಎಸ್. ಬಸವಣ್ಣ, ಕೆ.ಎಸ್.ಉಷಾರಾಣಿ, ಪಿ. ಮಹೇಶ್‌ಬಾಬು, ಎಂ.ಬೈರಪ್ಪ ಇದ್ದರು.

ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು ಕುರಿತ ವಿಚಾರ ಸಂಕಿರಣವನ್ನು ಅತಿಥಿಗಳು ಉದ್ಘಾಟಿಸಿದರು.

ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಅಭಿಮತ

# ಹಳಗನ್ನಡದಲ್ಲಿ ಭಾಷೆಗೆ ಪ್ರಾಶಸ್ತ್ಯ ಹೆಚ್ಚು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಳಗನ್ನಡ ಸಾಹಿತ್ಯವು ಮಹತ್ವದ ಕಾಲಘಟ್ಟವಾಗಿದೆ. ಈ ಕಾಲಘಟ್ಟಕ್ಕೆ ಆದಿಕಾವ್ಯವೆಂದು ಕರೆಯಲಾಗಿದೆ' ಎಂದು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಶೋಧನಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಿಂದ ಮಂಗಳವಾರ ಆಯೋಜಿಸಿದ್ದ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು' ಕುರಿತ ವಿಚಾರ ಸಂಕಿರಣದಲ್ಲಿ 'ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳು' ವಿಷಯ ಕುರಿತು ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಹಳಗನ್ನಡ, ನಡುಗನ್ನಡ, ಹೊಸಗನ್ನಡದ ಉದಯದ ಪೂರ್ವಾವಧಿ ಮತ್ತು ಹೊಸಗನ್ನಡ ಎಂದು ವಿಭಾಗಿಸಬಹುದು. 10ನೇ ಶತಮಾನದಿಂದ 12ನೇ ಶತಮಾನದವರೆಗಿನ ಕಾಲಘಟ್ಟವನ್ನು ಪ್ರಾಚೀನ ಕನ್ನಡ ಅಥವಾ ಹಳಗನ್ನಡ ಎಂದು ಗುರುತಿಸಲಾಗಿದೆ ಎಂದರು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ. ಈ ಕಾಲಘಟ್ಟದಲ್ಲಿ ಜೈನ ಕವಿಗಳ ಆಧಿಪತ್ಯ ಹೆಚ್ಚಾಗಿತ್ತು, ಪಂಪ, ಪೊನ್ನ, ರನ್ನ, ನಾಗಚಂದ್ರ, ಶಿವಾಕೋಟ್ಯಾಚಾರ್ಯ, ಗುಣವರ್ಮ, ಗುಣಸೇನ ಕವಿಗಳು ಜೈನ ಧರ್ಮಕ್ಕೆ ಸೇರಿದ್ದರು. ಹಾಗಾಗಿ, ಹಳಗನ್ನಡ ಸಾಹಿತ್ಯವು ಜೈನ ಧರ್ಮವನ್ನು ಅವಲಂಬಿಸಿತು ಎಂದರು.

ಸಾಹಿತ್ಯದ ಹಿನ್ನೆಲೆಯಲ್ಲಿ ಚಂಪೂಯುಗ, ಧರ್ಮದ ಹಿನ್ನೆಲೆಯಲ್ಲಿ ಜೈನಯುಗ, ಸಂಸ್ಕೃತ ಸಾಹಿತ್ಯದ ಸ್ವರೂಪದ ಪರಿಭಾಷೆಯಲ್ಲಿ ಮಾರ್ಗಯುಗ, ಇಡೀ ಸಾಮ್ರಾಜ್ಯದ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿ ಯುಗವೆಂದು ಗುರುತಿಸಲಾಗಿದೆ ಎಂದು ವಿವರಿಸಿದರು.

ಹಳಗನ್ನಡ ಯುಗದಲ್ಲಿ ಯುದ್ಧವೀರ, ದಾನವೀರ, ದಯಾವೀರ ಹಾಗೂ ಧರ್ಮವೀರನ ಬಗ್ಗೆ ಪ್ರಶಂಸನೀಯವಾಗಿ ಕಾವ್ಯಕಟ್ಟುವ ಕ್ರಮ ನೋಡಬಹುದು. ರಾಜಗುಣ ಹಾಗೂ ಯುದ್ಧದಲ್ಲಿ ಜಯಗಳಿಸಿದ ಬಗ್ಗೆ ಕಾವ್ಯ ರಚಿಸಿರುವುದನ್ನು ಈ ಅವಧಿಯಲ್ಲಿ ಹೆಚ್ಚು ಕಾಣುತ್ತೇವೆ ಎಂದು ತಿಳಿಸಿದರು.

ರಾಷ್ಟ್ರಕೂಟರ ಕಾಲದಲ್ಲಿ 'ಕವಿರಾಜ ಮಾರ್ಗ' ಕೃತಿ ರಚನೆಯ ಮೂಲಕ ಕನ್ನಡ ಸಾಹಿತ್ಯ ಆರಂಭವಾಯಿತು. ಸಂಸ್ಕೃತ ಭಾಷೆಯನ್ನು ಎದುರಿಸಿ ಕನ್ನಡದ ವ್ಯಕ್ತಿತ್ವ ಗುರುತಿಸಲು ಕವಿರಾಜ ಮಾರ್ಗ ಕೃತಿ ರಚನೆಯು ದೊಡ್ಡ ಸಾಧನೆಯಾಗಿದೆ ಎಂದು ತಿಳಿಸಿದರು.

ಹಲ್ಮಿಡಿ ಶಾಸನದಲ್ಲಿ ಕದಂಬರು, ಪಲ್ಲವರು, ಬಾಣರು, ಸ್ಥಳೀಯ ರಾಜರು ಸೇರಿದಂತೆ ಹಲವು ರಾಜವಂಶದ ಬಗ್ಗೆ ಉಲ್ಲೇಖವಿದೆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದಲ್ಲಿ ತ್ರಿಪದಿ ರಚನೆಯಾಗಿದೆ. ಇದು ಕಪ್ಪೆ ಅರಭಟ್ಟನ ಬಗ್ಗೆ ಸರಳ ಭಾಷೆಯಲ್ಲಿನ ಸ್ತುತಿಯಾಗಿದೆ ಎಂದರು.

ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಮಾತನಾಡಿ, ಸಾಹಿತ್ಯದಿಂದ ಅಂತರಂಗದ ಬೆಳವಣಿಗೆಯಾಗುತ್ತದೆ. ವಿಜ್ಞಾನದಿಂದ ಬಹಿರಂಗದ ಬೆಳವಣಿಗೆಯಾಗಲಿದೆ. ಇವೆರಡು ಜೊತೆಯಾಗಿ ಸಾಗಬೇಕಿದೆ ಎಂದು ಆಶಿಸಿದರು.

ಸಾಹಿತ್ಯ ಅಕಾಡೆಮಿಯು ಕಾಲೇಜಿನಲ್ಲಿ ಇಂಥಹ ಕಾರ್ಯಕ್ರಮ ಆಯೋಜಿಸಿರುವುದು ಅರ್ಥಪೂರ್ಣವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಎಲ್ಲ ಸ್ನಾತಕೋತ್ತರ ಕೇಂದ್ರದಲ್ಲಿಯೂ ಇಂಥ ವಿಚಾರ ಸಂಕಿರಣ ನಡೆಸಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳ ಪ್ರತಿಭೆ ಹೊರತರಲು ಅಕಾಡೆಮಿ ಸಹಾಯ ಮಾಡಬೇಕು. ಇದಕ್ಕಾಗಿ ಪ್ರತ್ಯೇಕವಾದ ಯೋಜನೆ ರೂಪಿಸಬೇಕು ಎಂದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಪ್ರೊ.ಜ್ಯೋತಿ ಶಂಕರ್, ಮಹಾರಾಣಿ ಕಲಾ ಕಾಲೇಜಿನ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಮಾ. ವರದರಾಜು, ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಶೋಧನಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ. ನಾಗಣ್ಣ ಹಾಜರಿದ್ದರು.

ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮಂಗಳವಾರ ನಡೆದ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು' ಕುರಿತ ವಿಚಾರ ಸಂಕಿರಣವನ್ನು ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಉದ್ಘಾಟಿಸಿದರು. ಪ್ರೊ.ಜ್ಯೋತಿ ಶಂಕರ್, ಪ್ರೊ.ಶಿವಬಸವಯ್ಯ, ಪ್ರೊ.ಸಿ.ನಾಗಣ್ಣ, ಪ್ರೊ.ಎನ್.ಎಸ್. ತಾರಾನಾಥ್ ಇದ್ದಾರೆ

ಪಂಪ, ರನ್ನ, ಕುಮಾರವ್ಯಾಸರಚಿಸಿರುವ ಹಳಗನ್ನಡ ಸಾಹಿತ್ಯ ಲಯಬದ್ಧ ಹಾಗೂ ಸತ್ವಭರಿತವಾದುದು. ವಿದ್ಯಾರ್ಥಿಗಳು ಅದನ್ನು ಓದಿ ಖುಷಿಪಡುವ ಹವ್ಯಾಸ ಬೆಳೆಸಿಕೊಳ್ಳಬೇಕು

**ಪ್ರೊ.ಎನ್.ಎಸ್. ತಾರಾನಾಥ್**

ಸಂದರ್ಶಕ ಪ್ರಾಧ್ಯಾಪಕ



ದಿನಾಂಕ :- 31/12/16
ಪತ್ರಿಕೆ :- ವಿಜಯ ಕರ್ನಾಟಕ

ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕಟ್ಟಡ ಉದ್ಘಾಟನೆ

# ಜಿಲ್ಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಒತ್ತು

ವಿಕ ಸುದ್ದಿಲೋಕ ಚಾಮರಾಜನಗರ

ಮೈಸೂರು ವಿಶ್ವವಿದ್ಯಾಲಯದ ಜಿಲ್ಲೆಯ ಉಪ ಕೇಂದ್ರವಾದ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನೂತನ ಕಟ್ಟಡದ ಉದ್ಘಾಟನೆ ಶುಕ್ರವಾರ ನೆರವೇರಿತು.

ಸುವರ್ಣಗಂಗೋತ್ರಿ
SUVARNAGANGOTRI

## ಜಿಲ್ಲೆಗೊಂದು ವಿವಿ ಅಗತ್ಯ

**ಚಾಮರಾಜನಗರ:** ಉನ್ನತ ಶಿಕ್ಷಣವನ್ನು ಎಲ್ಲೆಡೆ ಲಭ್ಯವಾಗುವಂತೆ ಮಾಡಲು ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪ್ರತಿ ಜಿಲ್ಲೆಗೂ ಪ್ರತ್ಯೇಕ ವಿಶ್ವವಿದ್ಯಾಲಯದ ಅಗತ್ಯವಿದೆ ಎಂದು ಮೈಸೂರು ವಿವಿಯ ಉಪ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ಅಭಿಪ್ರಾಯಪಟ್ಟರು.

ನಗರದಲ್ಲಿ ವಿವಿಯ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದರು. ''ನಾವು ಪೂರ್ಣ ಸಾಕ್ಷರತೆ ಸಾಧಿಸಲು ಇನ್ನು ಸಾಧ್ಯವಾಗಿಲ್ಲ. ಆದರೆ ಇಂಗ್ಲೆಂಡ್‌ನಲ್ಲಿ 1900ರ ವೇಳೆಗೆ ಪೂರ್ಣ ಸಾಕ್ಷರತೆ ಇತ್ತು. ಶಿಕ್ಷಣದ ವಿಚಾರದಲ್ಲಿ ನಾವು ಎಷ್ಟರಮಟ್ಟಿಗೆ ಹಿಂದುಳಿದಿದ್ದೇವೆ ಎಂಬುದನ್ನು ಈ ನಿದರ್ಶನ ಹೇಳುತ್ತದೆ,'' ಎಂದರು.

''ಇಂದು ಸರಕಾರಗಳು ಶೈಕ್ಷಣಿಕ ಪ್ರಗತಿಗೆ ಸಾಕಷ್ಟು ಅನುದಾನ ನೀಡುತ್ತಿವೆ. ಅದೇ ರೀತಿ ವಿಶ್ವವಿದ್ಯಾಲಯಗಳು ಸಹ ಹೆಚ್ಚಾಗಬೇಕು. ಬೆಂಗಳೂರು ವಿವಿಯ ವ್ಯಾಪ್ತಿಯಲ್ಲಿ 600ಕ್ಕೂ ಹೆಚ್ಚು ಕಾಲೇಜುಗಳಿವೆ. ಹೀಗಿದ್ದಾಗ ನಿರ್ವಹಣೆ ಕಷ್ಟವಾಗುತ್ತದೆ. ಉತ್ತಮ ನಿರ್ವಹಣೆ, ಗುಣಮಟ್ಟ ಹೆಚ್ಚಾಗಬೇಕಾದರೆ ವಿವಿಗಳ ವಿಕೇಂದ್ರೀಕರಣಗೊಳ್ಳಬೇಕು,'' ಎಂದು ಹೇಳಿದರು.

''ಚಾ.ನಗರ ಸ್ನಾತಕೋತ್ತರ ಕೇಂದ್ರವು ಮುಂದೆ ಪ್ರತ್ಯೇಕ ವಿವಿಯಾಗಬೇಕು. ಅದ್ದರಿಂದ ಅಗತ್ಯ ಜಾಗವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಇಲ್ಲಿಗೆ ಪ್ರತ್ಯೇಕ ವಿಜ್ಞಾನ, ಕಲಾ ವಿಭಾಗಗಳನ್ನು ತೆರೆಯಬೇಕಾಗಿದ್ದು, ತಲಾ 10 ಕೋಟಿ ರೂ. ಅನುದಾನದ ಅಗತ್ಯವಿದೆ. ಈ ಹಣವನ್ನು ಬಿಡುಗಡೆ ಮಾಡಿಸುವ ನಿಟ್ಟಿನಲ್ಲಿ ಸಚಿವರು, ಸಂಸದರು ಶ್ರಮಿಸಬೇಕು. ಪ್ರತ್ಯೇಕ ವಿವಿಗೆ ಪೂರಕವಾದ ಎಲ್ಲ ನೆರವನ್ನು ನಾವು ನೀಡಲು ಸಿದ್ಧರಿದ್ದೇವೆ ಎಂದ ಅವರು, ಇದು ಅಂಬೇಡ್ಕರ್ ಹೆಸರಿನ ಕೇಂದ್ರವಾಗಿದ್ದು, ಅವರಂತೆಯೇ ಪ್ರಜ್ವಲಿಸಲಿ,'' ಎಂದು ಆಶಿಸಿದರು.

ಚಾಮರಾಜನಗರದ ಮೈಸೂರು ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಡಾ.ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಾಮಫಲಕವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಎಸ್ ಮಹದೇವಪ್ರಸಾದ್ ಅನಾವರಣಗೊಳಿಸಿದರು. ಸಂಸದ ಆರ್.ಧ್ರುವನಾರಾಯಣ್ ಇದ್ದರು.

ಡಾ.ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



# ಜಿಲ್ಲೆಯಲ್ಲಿ ವಿವಿ ಕೊರತೆ ಇದೆ

## ಸಮಾರಂಭದಲ್ಲಿ ಸಚಿವ ಸಂಸದ ಆರ್.ಧ್ರುವನಾರಾಯಣ್ ಬೇಸರ

ದಿನಾಂಕ : 31/12/16
ಪತ್ರಿಕೆಗಳು :- ಪ್ರಜಾವಾಣಿ , ವಿಜಯವಾಣಿ

ಕೆಲ್ಲಂಬಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಹೊಸ ಕ್ಯಾಂಪಸನ್ನು ಸಚಿವ ಎಚ್.ಎಸ್.ಮಹದೇವಪ್ರಸಾದ್ ಉದ್ಘಾಟಿಸಿದರು.

ನೂತನ ಕೇಂದ್ರ ಕಟ್ಟಡಕ್ಕೆ ರಾಜ್ಯ ಸರ್ಕಾರದಿಂದ ₹ 9 ಕೋಟಿ ಅನುದಾನ

## ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ನಗರದ ಡಾ.ಬಿ. ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರವು ಜಿಲ್ಲೆಯ ವಿಶ್ವವಿದ್ಯಾನಿಲಯವಾಗಲಿ' ಎಂದು ಸಹಕಾರ ಮತ್ತು ಸಕ್ಕರೆ ಸಚಿವ ಎಚ್.ಎಸ್. ಮಹದೇವಪ್ರಸಾದ್ ಹೇಳಿದರು.



ದಿನಾಂಕ: 04-04-2017
ಪತ್ರಿಕೆ: ಪ್ರಜಾವಾಣಿ

ಹಿರಿಯ ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಅಭಿಪ್ರಾಯ

# 'ನೈಜ ಇತಿಹಾಸ ತಿಳಿಸುವ ಕೆಲಸ ಆಗಲಿ'

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ತರಗತಿಯಲ್ಲಿ ಕಲಿಯುವ ಇತಿಹಾಸ ಬದಲಾಗಬೇಕು. ವಿದ್ಯಾರ್ಥಿಗಳಿಗೆ ದೇಶದ ನೈಜ ಇತಿಹಾಸ ತಿಳಿಸುವ ಕೆಲಸವಾಗಬೇಕಿದೆ' ಎಂದು ಹಿರಿಯ ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಅಂತರಸಂತೆ ಪ್ರಕಾಶನ, ಕನ್ನಡಿಗರ ಸಹಕಾರ ಜ್ಯೋತಿ ಪತ್ರಿಕೆ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಹಾಗೂ ರಂಗತರಂಗ ಟ್ರಸ್ಟ್‌ನಿಂದ ನಡೆದ ಟಿ. ನಾಗರಾಜು ಮತ್ತು ಡಿ. ಈರೇಶ್ ನಗರ್ಲೆ ಅವರ ಸಂಪಾದಕತ್ವದ 'ಅರಿವಿನ ಬೆಳಕು ಸಾವಿತ್ರಿಬಾಯಿ ಫುಲೆ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಇಂದಿನ ಪಠ್ಯದಲ್ಲಿ ಯಾರೋ ಸೃಷ್ಟಿಸಿದ ಹಾಗೂ ವೈಭವೀಕರಿಸಿದ ಇತಿಹಾಸ ಅಳವಡಿಸಲಾಗಿದೆ. ಸಾಮಾನ್ಯರ ಇತಿಹಾಸವನ್ನು ಮರೆಮಾಚಲಾಗಿದೆ. ವಿದ್ಯಾರ್ಥಿಗಳು ಇಂಥಹ ಇತಿಹಾಸವನ್ನು ಬಿಟ್ಟು ನೈಜ ಹಾಗೂ ಸಾಮಾನ್ಯರ ಇತಿಹಾಸವನ್ನು ಹುಡುಕಿ ತಿಳಿಯಬೇಕು ಎಂದು ಸಲಹೆ ನೀಡಿದರು.

ಮೌಢ್ಯತೆಯಿಂದ ಹೆಣ್ಣಿನ ಮೇಲೆ ಹಲವು ಶೋಷಣೆ ನಡೆದಿರುವ ಬಗ್ಗೆ ಇತಿಹಾಸದಲ್ಲಿ ದಾಖಲಾಗಿದೆ. ಈ ವೇಳೆಯಲ್ಲಿ ಶಾಲೆ ಪ್ರಾರಂಭಿಸಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೋರಾಡಿದ ಸಾವಿತ್ರಿ ಬಾಯಿ ಫುಲೆ ಅವರು ವಿದ್ಯಾರ್ಥಿನಿಯರಿಗೆ ಸ್ಫೂರ್ತಿ ಎಂದು ತಿಳಿಸಿದರು.

ಶಿಕ್ಷಣದಿಂದ ಸಮಾಜದ ಅರಿವು ಪಡೆಯಲು ಸಾಧ್ಯ. ಶಿಕ್ಷಣ ಮತ್ತು ಜ್ಞಾನವನ್ನು ದಾಟಿದ್ದು ಅರಿವು. ಇದರ ಅರ್ಥ ವ್ಯಾಪಕವಾದದ್ದು, ಅರಿವು ಮತ್ತು ಬೆಳಕಿಗೆ ಕೊನೆಯಿಲ್ಲ. ಅರಿವಿನಿಂದ ಮೌಢ್ಯತೆ ಹಾಗೂ ಶೋಷಣೆಯಿಂದ ದೂರವಿರಲು ಸಾಧ್ಯ ಎಂದರು.

ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಮಾತನಾಡಿ, ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರು 19ನೇ ಶತಮಾನದ ಧೀಮಾಂತ ಮಹಿಳೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೋರಾಡಿದ ಅವರು ವಿದ್ಯಾರ್ಥಿನಿಯರಿಗೆ ಆದರ್ಶವಾಗಿದ್ದಾರೆ ಎಂದು ತಿಳಿಸಿದರು.

ಸಾವಿತ್ರಿಬಾಯಿ ಅವರು 9ನೇ ವಯಸ್ಸಿನಲ್ಲಿಯೇ ಜ್ಯೋತಿಬಾ ಫುಲೆಯವರ ಧರ್ಮಪತ್ನಿಯಾದರು. ಪತಿಯ ಜೊತೆ ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಿ ಅಕ್ಷರದಾಸೋಹಿಯಾದರು ಎಂದರು.

ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಹಲವು ಅಡ್ಡಿಯುಂಟಾಯಿತು. ಅದನ್ನು ಲೆಕ್ಕಿಸದೆ ಅವರು ಅಕ್ಷರಾಭ್ಯಾಸ ಮಾಡಿದರು. ಹೆಣ್ಣುಮಕ್ಕಳ ಶಾಲೆ ತೆರೆದು ದೀನರ, ದುಃಖಿತರ, ಶೋಷಿತರ ಪಾಲಿಗೆ ವಿದ್ಯಾ ದೇವತೆಯಾದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಉಮ್ಮತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಡಿ. ಸವಿತಾ, ರಂಗತರಂಗ ಟ್ರಸ್ಟ್‌ನ ಅಧ್ಯಕ್ಷ ಸೋಮಶೇಖರ ಬಿಸಲ್ವಾಡಿ, ಕನ್ನಡಿಗರ ಸಹಕಾರ ಜ್ಯೋತಿ ಪತ್ರಿಕೆ ಟಿ. ನಾಗರಾಜು, ಅಂತರಸಂತೆ ಪ್ರಕಾಶನದ ಡಿ. ಈರೇಶ್ ನಗರ್ಲೆ ಹಾಜರಿದ್ದರು.

ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ 'ಅರಿವಿನ ಬೆಳಕು ಸಾವಿತ್ರಿಬಾಯಿ ಫುಲೆ' ಕೃತಿಯನ್ನು ಹಿರಿಯ ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಅವರು ಲೋಕಾರ್ಪಣೆ ಮಾಡಿದರು. ಪ್ರೊ.ಶಿವಬಸವಯ್ಯ, ಡಾ.ವಿಜಯಕುಮಾರಿ ಎಸ್.ಕರಿಕಲ್ ಇತರರು ಹಾಜರಿದ್ದರು

**ಮುಖ್ಯಾಂಶಗಳು**

- ಇಂದಿನ ಪಠ್ಯದಲ್ಲಿ ಯಾರೋ ಸೃಷ್ಟಿಸಿದ, ವೈಭವೀಕರಿಸಿದ ಇತಿಹಾಸ ಅಳವಡಿಕೆ
- ದಲಿತರು ಹಾಗೂ ಶೋಷಿತರ ಪಾಲಿಗೆ ಆಶಾಕಿರಣವಾದ ಸಾವಿತ್ರಿಬಾಯಿ ಫುಲೆ

ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ ಎಂದು ಬಾಬಾ ಸಾಹೇಬ ಅಂಬೇಡ್ಕರ್ ಅವರು ಹೇಳಿದ್ದಾರೆ. ಸುಳ್ಳು ಇತಿಹಾಸ ನಂಬದೆ ಸತ್ಯವನ್ನು ಪರಿಚಯಿಸುವ ಅಗತ್ಯತೆ ಇದೆ

**ಡಾ.ಕೃಷ್ಣಮೂರ್ತಿ ಹನೂರು**
ಹಿರಿಯ ಸಾಹಿತಿ

ದಿನಾಂಕ: 04-04-2017



ದಿನಾಂಕ: 04-04-2017
ಪತ್ರಿಕೆ: ವಿಜಯ ಕರ್ನಾಟಕ

# 'ಅರಿವಿನ ಬೆಳಕು ಸಾವಿತ್ರಿಬಾಫುಲೆ' ಕೃತಿ ಬಿಡುಗಡೆ

ವಿಕ ಸುದ್ದಿಲೋಕ ಚಾಮರಾಜನಗರ

ಶಿಕ್ಷಣ, ಜ್ಞಾನದ ಜತೆಗೆ ಅದನ್ನು ಮೀರಿದ್ದು ಅರಿವು ಎಂದು ಚಾಮರಾಜನಗರ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿ ಹನೂರು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಸೋಮವಾರ ಮಧ್ಯಾಹ್ನ ಅಂತರಸಂತೆ ಪ್ರಕಾಶನ, ರಂಗತರಂಗ ಟ್ರಸ್ಟ್‌ನಿಂದ ಟಿ.ನಾಗರಾಜು ಮತ್ತು ನಗರ್ಲೆ ಡಿ.ಈರೇಶ್ ಸಂಪಾದಕತ್ವದ 'ಅರಿವಿನ ಬೆಳಕು ಸಾವಿತ್ರಿಬಾಫುಲೆ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಇಂದು ನಾವು ಯಾರೋ ಬರೆದ ಇತಿಹಾಸವನ್ನು ಕೇಳಿ ತಿಳಿದುಕೊಳ್ಳುತ್ತಿದ್ದೇವೆ. ನಾವು ಉತ್ಪ್ರೇಕ್ಷೆಯ ಇತಿಹಾಸವನ್ನು ಬಿಟ್ಟು, ಸಾಮಾನ್ಯ ಜನರ ಇತಿಹಾಸವನ್ನು ಹುಡುಕುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

200 ವರ್ಷಗಳ ಹಿಂದೆ ಸಾವಿತ್ರಿಬಾಫುಲೆ ಹೆಣ್ಣುಮಕ್ಕಳ ಶಿಕ್ಷಣಕ್ಕೆಂದು ಶಾಲೆಗಳನ್ನು ತೆರೆದು, ಉತ್ತಮ ಕೆಲಸ ಮಾಡಿದ್ದಾರೆ. ಶಿಕ್ಷಣ ಪಡೆದ ನಂತರ ಮುಂದೇನು ಮಾಡಬೇಕು ಎನ್ನುವುದು ನಿಮ್ಮ ಮುಂದೆ ಉದ್ಭವಿಸಬಹುದು. ಆ ಸಂದರ್ಭದಲ್ಲಿ ನೀವು ಪಡೆದಿರುವ ಶಿಕ್ಷಣದ ಮೂಲಕ ಮುಂದಿನ ಪೀಳಿಗೆಯು ಸರಿಯಾದ ದಾರಿಯಲ್ಲಿ ಮುನ್ನಡೆಸುವಂಥ ಮಾದರಿಯನ್ನು ತಿಳಿಸಬೇಕು ಎಂದು ಹೇಳಿದರು.

ಕೃತಿ ಕುರಿತು ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಡಾ. ವಿಜಯಕುಮಾರಿ ಎಸ್.ಕರಿಕಲ್ ಮಾತನಾಡಿ, ಅರಿತರೇ ಶರಣ, ಮರೆತರೇ ಮಾನವ ಎನ್ನುವ ಶರಣರ ವಾಣಿಯಂತೆ ಸಾವಿತ್ರಿಬಾಫುಲೆ ಅವರು ಬೆಳಕಿನೊಳಗೆ ಮಹಾ ಬೆಳಕಾಗಿದ್ದಾರೆ. ಅವರ ಕೃತಿಗಳಲ್ಲಿ ಹೊಸ ಪೀಳಿಗೆಗೆ ಸ್ಫೂರ್ತಿದಾಯಕ ಅಂತಃಸತ್ವ ಸಿಗುವ ಅಂಶಗಳನ್ನು ಚಿತ್ರಿಸಲಾಗಿದೆ. ಕೃತಿ ಪ್ರಕಟಿಸಿರುವ ಲೇಖಕರು ಪ್ರತಿ ವರ್ಷ ಜ.3 ಸಾವಿತ್ರಿಬಾಫುಲೆ ಜನ್ಮದಿನದ ಅಂಗವಾಗಿ ಪ್ರಶಸ್ತಿ ಸ್ಥಾಪಿಸಿ ನೀಡಬೇಕು ಎಂದು ಸಲಹೆ ನೀಡಿದರು.

ಉಮ್ಮತ್ತೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಡಿ.ಸವಿತಾ ಅವರನ್ನು ಸನ್ಮಾನಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಅಂತರಸಂತೆ ಪ್ರಕಾಶನ ಸಂಸ್ಥೆಯ ಟಿ.ನಾಗರಾಜು ಮತ್ತು ನಗರ್ಲೆ ಡಿ.ಈರೇಶ್, ರಂಗತರಂಗ ಟ್ರಸ್ಟ್ ಅಧ್ಯಕ್ಷ ಸೋಮಶೇಖರ ಬಿಸಲ್ವಾಡಿ ಪಾಲ್ಗೊಂಡಿದ್ದರು.

ದೇವನೂರು ಮಹಾದೇವ ಅವರು ತಮ್ಮ ಕೃತಿಯೊಂದರಲ್ಲಿ ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲಕೊಡಲಿವೆ ಎಂದು ಚಿತ್ರಿಸಿದ್ದಾರೆ. ಶಿಕ್ಷಣ, ಜ್ಞಾನವನ್ನು ಮೀರಿಸುವ ಒಂದು ಶಕ್ತಿ ಎಂದರೆ ಅದು 'ಅರಿವು' ವಚನಕಾರರು ಕೂಡಾ ಇದೇ ಪದವನ್ನು ಬಳಸಿದ್ದಾರೆ. ಕೃತಿ ಪ್ರಕಾಶಕರು ಸಹ ಅರಿವಿನ ಬೆಳಕು ಎಂಬ ಪದ ಬಳಸಿ ಕೃತಿ ಪ್ರಕಟಿಸಿರುವುದು ಸ್ವಾಗತಾರ್ಹ.

**-ಡಾ.ಕೃಷ್ಣಮೂರ್ತಿ ಹನೂರು**
ಸಂದರ್ಶಕ ಪ್ರಾಧ್ಯಾಪಕ

ವಿಕ ಚಿತ್ರಲೋಕ

ಚಾಮರಾಜನಗರದ ಡಾ.ಬಿಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಟಿ. ನಾಗರಾಜು ಮತ್ತು ನಗರ್ಲೆ ಡಿ. ಈರೇಶ್ ಅವರ ಸಂಪಾದಕತ್ವದ ಅರಿವಿನ ಬೆಳಕು ಸಾವಿತ್ರಿ ಬಾ ಫುಲೆ ಕೃತಿ ಬಿಡುಗಡೆ ಮಾಡಲಾಯಿತು.

ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ; ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಅಭಿಪ್ರಾಯ

# ಜಾತಿ ವ್ಯವಸ್ಥೆ ಇರುವವರೆಗೂ ಶೋಷಣೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ, ಮೇಲು-ಕೀಳು ಭೇದಭಾವ ಹೋಗುವುದಿಲ್ಲವೋ ಅಲ್ಲಿಯವರೆಗೂ ಶೋಷಣೆ ನಿಲ್ಲದು' ಎಂದು ಹಿರಿಯ ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಅವರ 126ನೇ ಜನ್ಮದಿನಾಚರಣೆ ಅಂಗವಾಗಿ ನಡೆದ 'ಮಾತಿನ ಮಹಾಕಾವ್ಯ' ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು 'ಬುದ್ಧನಗೆಯ ತಾಯಿನದಿ' ಕಾವ್ಯ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಸಮಾನತೆಗೆ ಮಾರಕವಾಗಿರುವ ಜಾತಿ ವ್ಯವಸ್ಥೆಯ ನಿರ್ಮೂಲನೆಯಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ದೊರೆಯಲಿದೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವಿಲ್ಲದೆ, ಕೇವಲ ರಾಜಕೀಯವಾಗಿ ಸ್ವಾತಂತ್ರ್ಯ ಕಲ್ಪಿಸಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಬೂಟಾಟಿಕೆಯಾಗಿದೆ' ಎಂದರು.

'ದೇಶದಲ್ಲಿ ಸಾವಿರಾರು ವರ್ಷದಿಂದ ನಡೆಯುತ್ತಿದ್ದ ಶೋಷಣೆಯ ನಿರ್ಮೂಲನೆಗೆ ಹಾಗೂ ಶೋಷಿತರ ನೋವಿನ ಕೂಗಿನಿಂದ ಅಂಬೇಡ್ಕರ್ ಜನಿಸಿದರು. ಶೋಷಿತರಿಗೆ ಆಶಾಕಿರಣವಾದರು. ಹೊಸ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು ಎಂದು ತಿಳಿಸಿದರು.

20ನೇ ಶತಮಾನದ ಮಹಾನ್ ಚಿಂತಕರಲ್ಲಿ ಅಂಬೇಡ್ಕರ್ ಮೊದಲಿಗರು ಎಂದ ಅವರು, ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿ ಜಗತ್ತಿನ ಪ್ರಭಾವಿ ವ್ಯಕ್ತಿಗಳು. ಇವರ ನಡುವೆ ವೈಚಾರಿಕವಾಗಿ ಹಲವು ಭಿನ್ನಾಭಿಪ್ರಾಯಗಳಿದ್ದರೂ ಅವು ಪರಸ್ಪರ ಪೂರಕವಾಗಿವೆ' ಎಂದರು.

'ಅಂಬೇಡ್ಕರ್ ಅವರು ಅಲ್ಪಸಂಖ್ಯಾತರಿಗೂ ಸಮಾನತೆ ಕಲ್ಪಿಸಿದವರು. ಮಹಿಳಾ ಸಮಾನತೆಗಾಗಿ ಶ್ರಮಿಸಿದರು. ಹಿಂದೂ ಕೋಡ್ ಬಿಲ್ ಅನುಷ್ಠಾನಕ್ಕೆ ತಂದಿಲ್ಲ ಎಂಬ ಕಾರಣಕ್ಕಾಗಿ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು' ಎಂದು ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ಅಕ್ಷರವನ್ನು ಪಡೆಯಲು ಸಾಧ್ಯವಿಲ್ಲದ ವರ್ಗದಲ್ಲಿ ಅಂಬೇಡ್ಕರ್ ಜನಿಸಿ, ವಿಶ್ವದ ಮಹಾನ್ ಜ್ಞಾನಿಯಾದರು. ದೇಶದ ವರ್ಣ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದರು' ಎಂದು ತಿಳಿಸಿದರು.

'ಹಿಂದೂ ತತ್ವ ಶ್ರೇಷ್ಠ ಎಂದು ನಂಬಿದ ಗಾಂಧೀಜಿ ಅವರನ್ನು ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ಬಿಳಿಯರು ರೈಲಿನಿಂದ ಹೊರಹಾಕಿ ಅವಮಾನಿಸಿ ದಾಗ ಅವರಿಗೆ ಭಾರತದಲ್ಲಿನ ಅಸ್ಪೃಶ್ಯತೆ ಬಗ್ಗೆ ಅರಿವಾಯಿತು. ಆದರೆ, ಅಂಬೇಡ್ಕರ್ ಹುಟ್ಟುವಾಗಲೇ ಅವಮಾನ ಮತ್ತು ಅಸ್ಪೃಶ್ಯತೆಯ ನೋವು ಅನುಭವಿಸಿದರು. ಹಾಗಾಗಿ, ಅವರು ಎಲ್ಲವನ್ನೂ ಪಡೆಯಬೇಕು ಎಂದು ಮುನ್ನುಗ್ಗಿದ್ದರು' ಎಂದರು.

'ಸಂಸ್ಕೃತ, ಇಂಗ್ಲಿಷ್ ಸೇರಿದಂತೆ ಜಗತ್ತಿನ ಹಲವು ಭಾಷೆ ಕಲಿತು ಮಹಾನ್ ಜ್ಞಾನಿಯಾದರು. ಹಿಂದೂ ಸಮಾಜದಲ್ಲಿನ ಶ್ರೇಣೀಕೃತ ಜಾತಿ ಪದ್ಧತಿಯ ವಿರುದ್ಧ ಹೋರಾಡಿದರು' ಎಂದ ಅವರು, 'ದೇಶದಲ್ಲಿ ಎಲ್ಲಿಯವರೆಗೆ ಜಾತಿ ಪದ್ಧತಿ ಇರುತ್ತದೆಯೋ ಅಲ್ಲಿಯವರೆಗೂ ಅಂಬೇಡ್ಕರ್ ಹಾಗೂ ಅವರ ಚಿಂತನೆ ಪ್ರಸ್ತುತವಾಗಿರುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ. ಕೃಷ್ಣಮೂರ್ತಿ ಹನೂರು, ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ, ಸ್ನಾತಕೋತ್ತರ ಕೇಂದ್ರದ ಉಪನಿರ್ದೇಶಕ ಪ್ರೊ.ಶಿವಬಸವಯ್ಯ, ಉಪನ್ಯಾಸಕ ಭೈರಪ್ಪ ಹಾಜರಿದ್ದರು.



ಡಾ.ಬಿ.ಆರ್. ಅಂಬೇಡ್ಕರ್ ಅವರ 126ನೇ ಜನ್ಮದಿನಾಚರಣೆಯಲ್ಲಿ 'ಬುದ್ಧನಗೆಯ ತಾಯಿನದಿ' ಕವನ ಸಂಕಲನವನ್ನು ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಬಿಡುಗಡೆ ಮಾಡಿದರು. ಭೈರಪ್ಪ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಶಿವಬಸವಯ್ಯ, ಪ್ರೊ. ಕೃಷ್ಣಮೂರ್ತಿ ಹನೂರು ಹಾಜರಿದ್ದರು

**ಮುಖ್ಯಾಂಶಗಳು**

- ಜಾತಿ ವ್ಯವಸ್ಥೆಯ ನಿರ್ಮೂಲನೆಯಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ
- ಶೋಷಿತರ ಬದುಕಿಗೆ ಆಶಾಕಿರಣವಾಗಿ ಬಂದ ಅಂಬೇಡ್ಕರ್

**ಸಮುದಾಯ ಮತ್ತು ಸಮಾಜದಲ್ಲಿನ ಸವಾಲು, ಸಮಸ್ಯೆಗಳಿಗೆ ಅಂಬೇಡ್ಕರ್ ನೀಡಿರುವ ಸಂವಿಧಾನದಡಿ ಪರಿಹಾರವಿದೆ. ಈ ನಿಟ್ಟಿನಲ್ಲಿ ಜನರು ಆಲೋಚಿಸಬೇಕು**

**ಪ್ರೊ.ಕೆ. ಮರುಳಸಿದ್ದಪ್ಪ**
ಹಿರಿಯ ಚಿಂತಕ

ಪತ್ರಿಕೆ : ಪ್ರಜಾವಾಣಿ
ದಿನಾಂಕ : 04-05-2017

# ಆಲೋಚನಾ ಕ್ರಮ ಬದಲಾದಲ್ಲಿ ಸುಧಾರಣೆ ಸಾಧ್ಯ

## ಸ್ನಾತಕೋತ್ತರ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಕಾವ್ಯಸಂಕಲನ ಲೋಕಾರ್ಪಣೆ





# ಆಲೋಚನಾ ಕ್ರಮ ಬದಲಾದಲ್ಲಿ ಸುಧಾರಣೆ ಸಾಧ್ಯ

## ಸ್ನಾತಕೋತ್ತರ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಕಾವ್ಯಸಂಕಲನ ಲೋಕಾರ್ಪಣೆ

> ಕಾವ್ಯದ ಜೀವಾಳವೇ ಅರ್ಥ, ಲಯ, ಧ್ವನಿ. ಇವು ಮೂರು ಇಂದು ಬಿಡುಗಡೆಯಾಗಿರುವ ಕಾವ್ಯಸಂಕಲನದಲ್ಲಿ ಅಂತರ್ಗತವಾಗಿವೆ. ಆರಾಧನೆ ಹಾಗೂ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ರಚನೆಗಳೇ ಜಾಸ್ತಿ ಇವೆ. 54 ಮಂದಿ ಬರೆದಿರುವ ಕಾವ್ಯಸಂಕಲನ ಅದ್ಭುತವಾಗಿ ಮೂಡಿಬಂದಿದೆ.
> – ಕೆ.ಮರುಳಸಿದ್ದಪ್ಪ, ಸಾಹಿತಿ, ಸಂಸ್ಕೃತಿ ಚಿಂತಕ

■ ವಿಕ ಸುದ್ದಿಲೋಕ ಚಾಮರಾಜನಗರ

ವಾಕ್‌ಸ್ವಾತಂತ್ರ್ಯ, ಧಾರ್ಮಿಕ, ಶಿಕ್ಷಣ ಹಕ್ಕುಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದರೂ, ತಾರತಮ್ಯ ಮುಂದುವರಿಯುತ್ತಲೇ ಇದೆ ಎಂದು ಸಾಹಿತಿ, ಸಂಸ್ಕೃತಿ ಚಿಂತಕ ಕೆ.ಮರುಳಸಿದ್ದಪ್ಪ ವಿಷಾದ ವ್ಯಕ್ತಪಡಿಸಿದರು.

ನಗರದ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 126 ನೇ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಾತಿನ ಮಹಾಕಾವ್ಯ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ಕುಪ್ಪಳ್ಳಿ ಎಂ.ಭೈರಪ್ಪ ಮತ್ತು ಮಿತ್ರರು ಸಂಪಾದಿಸಿರುವ 'ಬುದ್ಧನಗೆಯ ಮಹಾನದಿ' ಕಾವ್ಯಸಂಕಲನ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.

ದೇಶದ ಪ್ರಸ್ತುತ ಸ್ಥಿತಿ ಹೇಗಿದೆ ಎಂದರೆ ಮನುಧರ್ಮಶಾಸ್ತ್ರಕ್ಕಿಂತ ಬೇರೆ ಒಂದು ಸಂವಿಧಾನ ಬೇಕೆ ಎಂಬುದು ಬಲಪಂಥೀಯರ ವಾದವಾಗಿದೆ. ಇದರಿಂದ ಹೊರಬರಬೇಕಾದರೆ ಜನರ ಆಲೋಚನೆ ಮಾಡುವ ವಿಧಾನದಲ್ಲಿ ಮಾರ್ಪಾಡಾಗುವ ಅಗತ್ಯವಿದೆ ಎಂದರು.

ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ 40 ರಿಂದ 50 ವರ್ಷದ ಕಾಲಘಟ್ಟದಲ್ಲಿ ಇಬ್ಬರ ಆಲೋಚನೆ ವಿಧಾನಗಳು ಬೇರೆಬೇರೆಯಾಗಿವೆ. ಗಾಂಧೀಜಿ ಗ್ರಾಮಗಳು ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾಗಲಿದೆ ಎಂದು ಪ್ರತಿಪಾದಿಸಿದರೆ, ಅಂಬೇಡ್ಕರ್ ಅವರು ಗ್ರಾಮಗಳಲ್ಲಿ ಇಂದಿಗೂ ಜಾತೀಯತೆ, ಅಸ್ಪೃಶ್ಯತೆ ಇದೆ. ಇವು ಜೀವಂತವಾಗಿರುವಾಗ ಗ್ರಾಮಗಳು ಸ್ವರಾಜ್ಯ ಆಗಲು ಹೇಗೆ ಸಾಧ್ಯ ಎಂದಿದ್ದರು. ಯಂತ್ರಗಳು ಮಾನವನಪರಿಶ್ರಮವನ್ನು ತಿಂದು ಹಾಕಲಿವೆ ಎಂದು ಗಾಂಧೀಜಿ ಹೇಳಿದರೆ, ಅಂಬೇಡ್ಕರ್ 'ಆಧುನೀಕತೆಗೆ ತಕ್ಕಂತೆ ಯಂತ್ರಗಳ ಬಳಕೆ ಅಗತ್ಯವಾಗಿದೆ. ವಿಜ್ಞಾನ ಬೆಳೆಯಬೇಕಾದರೆ ಇವುಗಳು ಪರಸ್ಪರ ಪೂರಕ ಎಂಬುದಾಗಿ ಪ್ರತಿಪಾದಿಸಿದ್ದರು ಎಂದರು.

ಮಾತಿನ ಮಹಾಕಾವ್ಯ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಅಕ್ಷರ ತೆರೆಯದೇ ಇದ್ದ ಸಮುದಾಯದಲ್ಲಿ ಹುಟ್ಟಿದ ಅಂಬೇಡ್ಕರ್ ಅವರು ನಾನಾ ಸವಾಲುಗಳನ್ನು ಎದುರಿಸಿ ಮುಂದೆ ಬಂದರು. 12 ನೇ ಶತಮಾನದ ವಚನಕಾರರಾದ ಬಸವಣ್ಣ ಅವರು ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದರೂ, ಅಲ್ಲಿಯ ಕಂದಾಚಾರಗಳಿಗೆ ಬೇಸತ್ತು ಹೊರಬಂದು ಶ್ರಮಿಕವರ್ಗದವರ ಜತೆ ಸೇರಿ ಸ್ವಾಭಿಮಾನದ ಬದುಕನ್ನು ತೋರಿಸಿಕೊಟ್ಟರು. ಕೋಮುವಾದಿ ಮನಸ್ಸುಗಳು ಇಡೀ ಸಮುದಾಯವನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಲಿಪಶು ಮಾಡಲು ಯತ್ನಿಸುತ್ತಿವೆ. ಇದರ ಬಗ್ಗೆ ಜಾಗೃತಿವಹಿಸುವ ಅಗತ್ಯವಿದೆ ಎಂದರು.

ಕುಲಪುರಾಣಗಳು ಮನುಷ್ಯ ಕೇಂದ್ರಿತವಾಗಿದ್ದರೆ ಮಹಾಕಾವ್ಯಗಳು ಜೀವಕೇಂದ್ರಿತವಾಗಿರುತ್ತವೆ. ಕಾವ್ಯಗಳು ಎಷ್ಟು ಪ್ರಾಚೀನವೋ ಅಷ್ಟೇ ವರ್ತಮಾನದಲ್ಲೂ ಪ್ರಸ್ತುತವೆನಿಸುತ್ತವೆ ಎಂದರು.

ಸಂದರ್ಶಕ ಪ್ರಾಧ್ಯಾಪಕ ಕೃಷ್ಣಮೂರ್ತಿ ಹನೂರು, ವಿಮರ್ಶಾ ಲೇಖನ ಕುರಿತ ಸ್ಪರ್ಧೆಗಳಿಗೆ ಬಹುಮಾನ ವಿತರಿಸಿದರು. ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಬುದ್ಧನಗೆಯ ಮಹಾನದಿ' ಕಾವ್ಯಸಂಕಲನ ಸಂಪಾದಕ ಕುಪ್ಪಳ್ಳಿ ಎಂ.ಭೈರಪ್ಪ ವಿದ್ಯಾರ್ಥಿಗಳು ಹಾಜರಿದ್ದರು.





ಚಾಮರಾಜನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 126 ನೇ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಾತಿನಮಹಾಕಾವ್ಯ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ 'ಬುದ್ಧನಗೆಯ ಮಹಾನದಿ' ಕಾವ್ಯಸಂಕಲನ ಲೋಕಾರ್ಪಣೆ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು. (ಎರಡನೇ ಚಿತ್ರ).

---

29/09/17

# 'ಕೃಷಿ'ಯೇ ಧ್ಯಾನ–ಯೋಗವೆಂದ ವಚನಕಾರರು

## ಅಂಬೇಡ್ಕರ್ ಕೇಂದ್ರ ಕಾರ್ಯಕ್ರಮದಲ್ಲಿ ಡಾ.ವಿಜಯಕುಮಾರಿ ಕರಿಕಲ್

ಚಾಮರಾಜನಗರ,ಸೆ.೨೮– ಕೃಷಿ ಒಂದು ರೀತಿಯ ಧ್ಯಾನ ಮತ್ತು ಯೋಗವಿದ್ದಂತೆ. ಇದನ್ನು ಆಧ್ಯಾತ್ಮಿಕವಾಗಿ ಸ್ವೀಕರಿಸಬೇಕು ಮತ್ತು ಕಾಯಕನಿಷ್ಠೆ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಮಾನವ ಕುಲ ನೆಮ್ಮದಿಯಿಂದ ಇರಲು ಸಾಧ್ಯವೆಂದು ವಚನಕಾರರು ಬಹಳ ಹಿಂದೆಯೇ ಸಾರಿದ್ದಾರೆ ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಡಾ.ವಿಜಯಕುಮಾರಿ ಎಸ್.ಕರಿಕಲ್ ಹೇಳಿದರು.


ಮೈಸೂರು ವಿವಿಯ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಸಮೀಪದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ (ಸುವರ್ಣ ಗಂಗೋತ್ರಿ) ಸಭಾಂಗಣದಲ್ಲಿ 'ವಚನಗಳಲ್ಲಿ ಕೃಷಿ ರೂಪಕಗಳು' ಕುರಿತು ನಡೆದ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ವಚನ ಸಾಹಿತ್ಯದಲ್ಲಿ ಅಲ್ಲಮ ಪ್ರಭು, ಬಸವಣ್ಣ, ಕಾಡಸಿದ್ದೇಶ್ವರ, ಅರಿವಿನ ಮಾರಿ ತಂದೆ ಇನ್ನೂ ಮೊದಲಾದ ವಚನಕಾರರು ವಚನ ಸಾಹಿತ್ಯದಲ್ಲಿ ಕೃಷಿ ರೂಪಕಗಳನ್ನು ಬಳಸಿದ್ದಾರೆ. ಇವತ್ತಿನ ಆಧುನಿಕತೆಯ ಯುಗದಲ್ಲಿ ಲೌಕಿಕ ವ್ಯವಹಾರದಲ್ಲಿ ಕೃಷಿಯನ್ನು ಅನುಸರಿಸಿ ಬದುಕಬೇಕಾದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು, ಈ ಬಗ್ಗೆ ಗಂಭೀರ ಚಿಂತನೆ ನಡೆಯುತ್ತಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಚನಕಾರರು ಕಾಯಕ ಜೀವಿಗಳಾಗಿಯೇ ಜೀವಿಸಿದವರು. ಕಾಯಕವೇ ಕೈಲಾಸ ಎಂಬುದು ವಚನಕಾರರ ಕಾಯಕ ನಿಷ್ಠೆಯನ್ನು ಅಭಿವ್ಯಕ್ತಪಡಿಸುತ್ತದೆ ಎಂದರಲ್ಲದೆ, ರೈತ ಎಂಬ ಶಬ್ದ ಜಾತಿ ಸೂಚಕವಲ್ಲ ವೃತ್ತಿ ಸೂಚಕವಾಗಿದೆ ಎಂದು ತಿಳಿಸಿದರು.

ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಚಂದ್ರಶೇಖರಯ್ಯ ಮಾತನಾಡಿದರು.

ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಕೃಷ್ಣಮೂರ್ತಿ ಹನೂರು, ಕನ್ನಡ ವಿಭಾಗದ ಉಪನ್ಯಾಸಕರಾದ ಡಾ.ಭೈರಪ್ಪ, ಮಹೇಶ್‌ಬಾಬು, ಬಸವಣ್ಣ, ತಮ್ಮೇಗೌಡ, ರಾಣಿ ಮೊದಲಾದವರು ಭಾಗವಹಿಸಿದ್ದರು.




ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ವಿಶೇಷ ಉಪನ್ಯಾಸ ಮಾಲೆಯಲ್ಲಿ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿದರು. ಡಾ.ವಿಜಯಕುಮಾರಿ ಎಸ್.ಕರಿಕಲ್, ಡಾ.ಚಂದ್ರಶೇಖರಯ್ಯ, ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಮತ್ತಿತರರು ಚಿತ್ರದಲ್ಲಿದ್ದಾರೆ.

# ಚಾಮರಾಜನಗರದಲ್ಲಿ ವಿಶ್ವ ಪುಸ್ತಕ ದಿನ ಆಚರಣೆ

## ಓದುವ ಸಂಸ್ಕೃತಿ ಬೆಳೆಸಿಕೊಳ್ಳಲು ಯುವಜನಾಂಗಕ್ಕೆ ಕುಲಸಚಿವೆ ಡಿ.ಭಾರತಿ ಕರೆ

ಚಾಮರಾಜನಗರ,ಏ.೨೪- ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಯುವ ಜನಾಂಗ ಹೆಚ್ಚು ಓದುವ ಹಾಗೂ ಬರೆಯುವ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಿ.ಭಾರತಿ ಕರೆ ನೀಡಿದರು.

ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಸೋಮವಾರ ಏರ್ಪಡಿಸಲಾಗಿದ್ದ 'ಓದು ಮತ್ತು ಬರಹ ಕುರಿತು ಸಂವಾದ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮ ಬಹಳ ವಿಶೇಷವಾದುದು. ಇಂತಹ ಆಚರಣೆಗಳು ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ. ಪ್ರೇಮಿಗಳ ದಿನಾಚರಣೆ ಪರ-ವಿರೋಧಗಳ ನಡುವೆ ನಡೆಯುತ್ತದೆ. ಆದರೆ ವಿಶ್ವ ಪುಸ್ತಕ ದಿನಾಚರಣೆಗೆ ಯಾವುದೇ ಅಡ್ಡಿ ಆತಂಕಗಳಿಲ್ಲದಿದ್ದರೂ ಹೆಚ್ಚು ದಿನ ಪ್ರಚಲಿತವಾಗಿಲ್ಲ ಎಂದು ಬೇಸರಿಸಿದರು.

ಹೆಚ್ಚು ಪುಸ್ತಕಗಳನ್ನು ಓದಿದವರು ಡಾ.ಬಿ.ಆರ್.ಅಂಬೇಡ್ಕರ್. ಅವರಲ್ಲಿ ಅಗಾಧ ಪುಸ್ತಕ ರಾಶಿಯಿತ್ತು, ಅವರು ದೇಶ-ವಿದೇಶಗಳಲ್ಲಿ ಹೆಚ್ಚು ಓದು-ಬರಹದಲ್ಲಿ ತೊಡಗಿದ್ದರಿಂದಲೇ ವಿಶ್ವಜ್ಞಾನಿಯಾಗಲು ಸಾಧ್ಯವಾಯಿತು. ಅಲ್ಲದೆ ಅನೇಕ ಪದವಿ ಪಡೆಯಲು ನೆರವಾಯಿತು. ಅಂಬೇಡ್ಕರ್ ಅವರಷ್ಟು ಪದವಿ ಪಡೆದವರು ವಿಶ್ವದಲ್ಲೇ ಇಲ್ಲ ಎಂದು ನೆನೆದರು.

ಶೇ.೯೦ರಷ್ಟು ಯುವಕರು ಮೊಬೈಲ್, ಇಂಟರ್‌ನೆಟ್‌ನಲ್ಲಿ ಮುಳುಗಿದ್ದಾರೆ. ಇದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ವಿದ್ಯಾರ್ಥಿಗಳು, ಯುವ ಜನಾಂಗ ಓದು-ಬರಹ ರೂಢಿಸಿಕೊಂಡು ಒಳ್ಳೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿರಿಯ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಮುಖ್ಯ ಭಾಷಣ ಮಾಡಿ, ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದುದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಲಂಬಿಯಾದಲ್ಲಿ ಹಗಲು-ರಾತ್ರಿ ನಿರಂತರವಾಗಿ ಪುಸ್ತಕಗಳನ್ನು ಹೆಚ್ಚು ಅಭ್ಯಾಸ ಮಾಡಿದ್ದರಿಂದಲೇ ಅವರು ವಿಶ್ವಜ್ಞಾನಿಯಾದರು. ಅವರಂತೆ ವಿದ್ಯಾರ್ಥಿಗಳು ಓದು-ಬರಹ ಮೈಗೂಡಿಸಿಕೊಂಡು ವಿಶ್ವ ಮಾನವರಾಗಬೇಕು ಎಂದರು.

ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಆಶಯ ನುಡಿಗಳನ್ನಾಡಿ, ಡಾ.ರಾಜ್‌ಕುಮಾರ್ ೪ನೇ ತರಗತಿ ಓದಿದ್ದರೂ ಅವರಲ್ಲಿದ್ದ ಭಾಷೆ, ನಟನಾ ಪ್ರೌಢಿಮೆಯನ್ನು ಜಗತ್ತಿನ ಯಾವ ಕಲಾವಿದರಲ್ಲೂ ಕಾಣಲು ಸಾಧ್ಯವಿಲ್ಲ ಎಂದು ಹೇಳಿದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕ ಡಾ.ಮಹದೇವಮೂರ್ತಿ ಉಪನ್ಯಾಸ ನೀಡಿದರು. ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್ ಹರದನಹಳ್ಳಿ, ರಂಗವಾಹಿನಿ ಪ್ರಧಾನ ಕಾರ್ಯದರ್ಶಿ ಶಿವಕುಮಾರ್‌ಕೆಂಪನಪುರ, ಸಿರಿಗನ್ನಡ ಪುಸ್ತಕ ಮಳಿಗೆ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್ ಮಾಂಬಳ್ಳಿ, ಡಾ.ಕುಪ್ಪನಹಳ್ಳಿ ಭೈರಪ್ಪ ಮತ್ತಿತರರು ಹಾಜರಿದ್ದರು.



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ವಿಶ್ವಪುಸ್ತಕ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು. ಪ್ರೊ.ಕೃಷ್ಣಮೂರ್ತಿ ಹನೂರು, ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಸಿ.ಎಂ.ನರಸಿಂಹಮೂರ್ತಿ, ಬಸವರಾಜು ಇತರರು ಚಿತ್ರದಲ್ಲಿದ್ದಾರೆ.

ಹೆಚ್ಚು ಓದು-ಬರಹ ಇಲ್ಲದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವ ವ್ಯವಸ್ಥೆ ಸರಿಯಿಲ್ಲ. ಸಂದರ್ಶನ ಸಂದರ್ಭಗಳಲ್ಲಿ ಎಂ.ಎ, ಎಂ.ಫಿಲ್ ಓದಿದವರಿಗೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆದರೆ, ಕೆಲ ವಿದ್ಯಾರ್ಥಿಗಳು ಅಂಥ ಸಾಮಾನ್ಯ ಪ್ರಶ್ನೆಗಳಿಗೂ ಉತ್ತರಿಸುವಲ್ಲಿ ವಿಫಲರಾಗುತ್ತಿರುವುದು ವಿಪರ್ಯಾಸ.

-ಡಿ.ಭಾರತಿ, ಕುಲಸಚಿವೆ.

ಇಡೀ ಜಗತ್ತಿಗೆ ಹಂಚುವಷ್ಟು ಜ್ಞಾನಾರ್ಜನೆ ಭಾರತದಲ್ಲಿದ್ದರೂ ಅದು ಸರಿಯಾಗಿ ಹಂಚಿಕೆಯಾಗಲಿಲ್ಲ. ಜ್ಞಾನಾರ್ಜನೆ ಅಗ್ರಹಾರ ಬೀದಿಯ ಮನೆಗಳಲ್ಲೇ ಉಳಿದು ಬಿಟ್ಟಿತು. ಅದು ಗೋಡೆ ದಾಟಿ ಬರಲೇ ಇಲ್ಲ.

-ಪ್ರೊ.ಕೃಷ್ಣಮೂರ್ತಿ ಹನೂರು, ಹಿರಿಯ ವಿದ್ವಾಂಸ.

# ದೊರಕದ ಸಂಸ್ಕಾರಯುತ ಶಿಕ್ಷಣ

## ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಡಿ.ಭಾರತಿ ವಿಷಾದ

■ ವಿಜಯವಾಣಿ ಸುದ್ದಿಜಾಲ ಚಾಮರಾಜನಗರ

ಪ್ರಸ್ತುತ ಪುಸ್ತಕದ ಓದು, ಬರಹ ಹಾಗೂ ಗಳಿಕೆಯ ವೃತ್ತಿಯಾಗಿದೆ. ಯುವ ಜನಾಂಗಕ್ಕೆ ಸಂಸ್ಕಾರಯುತ ಶಿಕ್ಷಣ ಸಿಗುತ್ತಿಲ್ಲ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಡಿ.ಭಾರತಿ ವಿಷಾದ ವ್ಯಕ್ತಪಡಿಸಿದರು.

ನಗರ ಹೊರವಲಯದ ಬೇಡರಪುರ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಓದು ಮತ್ತು ಬರಹ ಕುರಿತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಓದು, ಬರಹ ವ್ಯಕ್ತಿಯನ್ನು ಬೆಳೆಸಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿಯೇ ಹೆಚ್ಚು ಹೊತ್ತು ಕಳೆಯಬೇಕು. ಓದುವ ಸಂಸ್ಕೃತಿಯಿಂದ ಒಳ್ಳೆಯ ಮೌಲ್ಯಗಳನ್ನು ರೂಢಿಸಿಕೊಳ್ಳಲು ಸಾಧ್ಯ. ಪ್ರಸ್ತುತ ಶಿಕ್ಷಣ ದೇಶದ ಯುವ ಜನಾಂಗದಲ್ಲಿ ಮೌಲ್ಯಗಳನ್ನು ಬೆಳೆಸುವಲ್ಲಿ ವಿಫಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತೀಯ ಪರಂಪರೆ ಶ್ರಮ ಸಂಸ್ಕೃತಿಯಾಗಿದೆ. ಅಮೆರಿಕಾದಲ್ಲಿನ ನಾಸಾ ಸೇರಿದಂತೆ ಇತರೆ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮೂವರಲ್ಲಿ ಒಬ್ಬರು ಭಾರತೀಯರಿದ್ದಾರೆ. 2016ರಲ್ಲಿ ವಿಶ್ವಸಂಸ್ಥೆಯು ವಿಶ್ವಜ್ಞಾನಿ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಗುರುತಿಸಿತು. ಅಂಬೇಡ್ಕರ್ ಅವರು ಓದು, ಬರಹ ಎರಡನ್ನು ಮಾಡಿದ್ದ ಪರಿಣಾಮ ವಿಶ್ವಜ್ಞಾನಿಯಾದರು ಎಂದರು.

ಡಾ.ಅಂಬೇಡ್ಕರ್ ಅವರು ತಮ್ಮ ಗ್ರಂಥಾಲಯದಲ್ಲಿ 50 ಸಾವಿರ ಪುಸ್ತಕವನ್ನು ಹೊಂದಿದ್ದರು. ಸಾವಿರಾರು ವರ್ಷ ಬದುಕಿ ಮಾಡುವ ಸಾಧನೆಯನ್ನು ಕಡಿಮೆ ಅವಧಿಯಲ್ಲಿ ಮಾಡಿದರು. ವಿದ್ಯಾರ್ಥಿಗಳು ಮೊಬೈಲ್‌ಗಳನ್ನು ಅಗತ್ಯವಿರುವಷ್ಟು ಮಾತ್ರ ಬಳಸಿ. ಇಂಟರ್‌ನೆಟ್, ಮೊಬೈಲ್ ಜೀವನವಲ್ಲ, ಅದಕ್ಕೂ ಮೀರಿದ ಜೀವನವನ್ನು ನಿಮ್ಮದಾಗಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಹಿರಿಯ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಎಲ್ಲ ಕ್ಷೇತ್ರಗಳಲ್ಲಿಯೂ ಹೆಣ್ಣು ಮಕ್ಕಳು ಸಾಧನೆಗೈಯುತ್ತಿರುವುದು ಸಂತಸದಾಯಕ. ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣದೆಡೆ ಮುಖಮಾಡಿರುವುದು ಅಭಿವೃದ್ಧಿಯ ಸಂಕೇತ ಎಂದರು.ಅಕ್ಷರ ಜ್ಞಾನ ಆತ್ಮ ಸಂತೋಷವನ್ನು ತಂದುಕೊಡುತ್ತದೆ. ಭಾಷೆಗಿಂತಲೂ ಅಕ್ಷರ ತುಂಬಾ ಕಷ್ಟ. ಪುಸ್ತಕ, ಜ್ಞಾನ, ಜ್ಯೋತಿ ಗಳು ಒಂದೇ ಆಗಿವೆ. ಜಿಲ್ಲೆಯಲ್ಲಿ ವೈ.ಜಿ.ಕೃಷ್ಣಮೂರ್ತಿ, ಡಾ.ರಾಜ್‌ಕುಮಾರ್, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಇತರೆ ಮಹಾನ್ ಪುರುಷರ ಜನ್ಮ ತಾಳಿರುವುದು ನಮ್ಮೆಲ್ಲರ ಹೆಮ್ಮೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ತಾಲೂಕು ಕಸಾಪ ಅಧ್ಯಕ್ಷ ಬಿ.ಬಸವರಾಜು, ಗೋವಿಂದರಾಜು, ನಟರಾಜ್, ನಂಜುಂಡಸ್ವಾಮಿ, ಸೌಭಾಗ್ಯ, ಶಿವಕುಮಾರ್ ಇತರರಿದ್ದರು.



ಚಾಮರಾಜನಗರದ ಬೇಡರಪುರ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಿದ್ದ ಓದು ಮತ್ತು ಬರಹ ಕುರಿತ ಸಂವಾದ ಕಾರ್ಯಕ್ರಮವನ್ನು ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು.



ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಓದು ಮತ್ತು ಬರಹ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.



# ಜ್ಞಾನಾರ್ಜನೆಗೆ ಓದು, ಬರಹ ಪೂರಕ

## ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ.ಭಾರತಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ವಿದ್ಯಾರ್ಥಿ ದಿಸೆಯಿಂದಲೇ ಓದು, ಬರಹದ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಇದು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾಗಿದೆ' ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ.ಭಾರತಿ ಹೇಳಿದರು.

ತಾಲ್ಲೂಕಿನ ಬೇಡರಪುರ ಗ್ರಾಮದ ಸಮೀಪದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ವಿಶ್ವಪುಸ್ತಕ ದಿನಾಚರಣೆ' ಅಂಗವಾಗಿ ಓದು ಮತ್ತು ಬರಹ ಕುರಿತು ನಡೆದ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಪುಸ್ತಕ ದಿನಾಚರಣೆ ಬಹಳ ವಿಶೇಷವಾಗಿದೆ. ಇಂತಹ ದಿನಾಚರಣೆ ಈಚಿನ ದಿನಗಳಲ್ಲಿ ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ ಎಂದರು.

ಅಂಬೇಡ್ಕರ್ ಅವರು ಹೆಚ್ಚು ಪುಸ್ತಕ ಓದುತ್ತಿದ್ದರು. ಹಾಗಾಗಿ, ಅವರು ವಿಶ್ವಜ್ಞಾನಿಯಾಗಲು ಸಾಧ್ಯವಾಯಿತು. ಹೆಚ್ಚು ಪದವಿ ಪಡೆಯಲು ನೆರವಾಯಿತು ಎಂದು ತಿಳಿಸಿದರು.

ದೇಶದಲ್ಲಿ ಶೇ 90ರಷ್ಟು ಯುವಜನರು ಮೊಬೈಲ್, ಇಂಟರ್‌ನೆಟ್‌ನಲ್ಲಿ ಕಾಲ ಕಳೆಯುತ್ತಿದ್ದಾರೆ. ಇದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇದನ್ನು ತಪ್ಪಿಸಲು ಎಲ್ಲರು ವಿದ್ಯಾರ್ಥಿ ದಿಸೆಯಿಂದಲೇ ಹೆಚ್ಚು ಓದು-ಬರಹ ರೂಢಿಸಿಕೊಂಡು ಒಳ್ಳೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಇಡೀ ಜಗತ್ತಿಗೆ ಹಂಚಿಕೆ ಮಾಡುವಷ್ಟು ಜ್ಞಾನ ಭಾರತದಲ್ಲಿದೆ. ಆದರೆ, ಅದು ಸರಿಯಾಗಿ ಬಳಕೆಯಾಗುತ್ತಿಲ್ಲ. ಜ್ಞಾನಾರ್ಜನೆ ಅಗ್ರಹಾರ ಬೀದಿಯಲ್ಲಿರುವ ಮನೆಗಳಲ್ಲಿಯೇ ಉಳಿದುಬಿಟ್ಟಿದೆ ಎಂದು ವಿಷಾದಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಲಂಬಿಯಾದಲ್ಲಿ ಹಗಲು, ರಾತ್ರಿಯ ಅರಿವಿಲ್ಲದೆ ಓದು-ಬರಹದಲ್ಲಿ ಮಗ್ನರಾಗಿದ್ದರು. ಆದ್ದರಿಂದಲೇ ಅವರು ವಿಶ್ವಜ್ಞಾನಿಯಾದರು. ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದದ್ದು, ವಿದ್ಯಾರ್ಥಿಗಳು ಧೃಡ ಮನಸ್ಸಿನಿಂದ ಜ್ಞಾನ ಮಾರ್ಗದಲ್ಲಿ ಸಾಗಿ ವಿಶ್ವ ಮಾನವರಾಗಬೇಕು ಎಂದರು.

ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್ ಹರದನಹಳ್ಳಿ, ರಂಗವಾಹಿನಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಮಾರಾಟ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್‌ಮಾಂಬಳ್ಳಿ, ಉಪನ್ಯಾಸಕರಾದ ಮಹದೇವಮೂರ್ತಿ, ಕುಪ್ಪನಹಳ್ಳಿ ಭೈರಪ್ಪ ಹಾಜರಿದ್ದರು.

ಚಾಮರಾಜನಗರ ತಾಲ್ಲೂಕಿನ ಬೇಡರಪುರ ಗ್ರಾಮದ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ 'ವಿಶ್ವಪುಸ್ತಕ ದಿನಾಚರಣೆ' ಅಂಗವಾಗಿ ಓದು ಮತ್ತು ಬರಹ ಕುರಿತು ನಡೆದ ಸಂವಾದ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು



ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಡಿ.ಭಾರತಿ ಅಭಿಮತ

# ಓದು-ಬರಹದಿಂದ ಜ್ಞಾನಾರ್ಜನೆ ವೃದ್ಧಿ

ವಿಶ್ವವಾಣಿ ಸುದ್ದಿಮನೆ ಚಾಮರಾಜನಗರ

ಹೆಚ್ಚು ಓದು-ಬರಹದಿಂದ ಪಾತಾಳದಿಂದ ಆಕಾಶದೆತ್ತರಕ್ಕೂ ಬೆಳೆಯಲು ಸಾಧ್ಯವಾಗುತ್ತದೆ ಎಂದು ಮೈಸೂರು ಮಾನಸ ಗಂಗೋತ್ರಿ ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ. ಭಾರತಿ ಹೇಳಿದರು.

ತಾಲೂಕಿನ ಬೇಡರಪುರ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವ ಪುಸ್ತಕ ದಿನಾಚರಣೆ ಬಹಳ ವಿಶೇಷ ದಿನಾಚರಣೆಯಾಗಿದೆ. ಇಂತಹ ದಿನಾಚರಣೆ ದಿನವನ್ನು ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ. ಪ್ರೇಮಿಗಳ ದಿನಾಚರಣೆ ಪ್ರಚಲಿತವಾಗಿದ್ದು, ಅನೇಕ ಪರ-ವಿರೋಧಗಳ ನಡುವೆ ನಡೆಯುತ್ತದೆ. ಆದರೆ ವಿಶ್ವ ಪುಸ್ತಕ ದಿನಾಚರಣೆಗೆ ಯಾವುದೇ ಅಡ್ಡಿ ಆತಂಕವಿಲ್ಲ ಆದರೂ ಸಹ ವಿಶ್ವ ಪುಸ್ತಕ ದಿನಾಚರಣೆ ದಿನ ಪ್ರಚಲಿತವಾಗಿಲ್ಲ ಎಂದರು.

ಏ.14ರಂದು ಅಂಬೇಡ್ಕರ್ ಜಯಂತಿ ಏ. 23ರಂದು ವಿಶ್ವ ಪುಸ್ತಕ ದಿನಾಚರಣೆ. ಲಂಡನ್ ಗ್ರಂಥಾಲಯದಲ್ಲಿ ಹೆಚ್ಚು ಪುಸ್ತಕ ತೆಗೆದುಕೊಂಡು ಓದಿದ್ದು ಡಾ. ಬಿ.ಆರ್.ಅಂಬೇಡ್ಕರ್ ಅವರಲ್ಲಿ ಅಗಾಧ ಪುಸ್ತಕ ರಾಶಿಯಿತ್ತು. ಅಂಬೇಡ್ಕರ್ ದೇಶ-ವಿದೇಶಗಳಲ್ಲಿ ಹೆಚ್ಚು ಓದು-ಬರಹ ಮಾಡಿದ್ದರಿಂದಲ್ಲೇ ಅಂಬೇಡ್ಕರ್ ವಿಶ್ವ ಜ್ಞಾನಿಯಾಗಲು ಸಾಧ್ಯವಾಯಿತು. ಅಲ್ಲದೆ ಅನೇಕ ಪದವಿ ಪಡೆಯಲು ನೆರವಾಯಿತು. ಅಂಬೇಡ್ಕರ್‌ರಷ್ಟು ಪದವಿ ಪಡೆದವರು ವಿಶ್ವದಲ್ಲೇ ಇಲ್ಲ ಎಂದರು.

ಹೆಚ್ಚು ಓದು-ಬರಹ ಇಲ್ಲದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವ ವ್ಯವಸ್ಥೆ ಸರಿಯಲ್ಲ, ಸಂದರ್ಶನ ಸಂದರ್ಭಗಳಲ್ಲಿ ಎಸ್‌ಎಸ್‌ಎಲ್‌ಸಿ ವರಗಿನ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆದರೆ ಕೆಲವು ವಿದ್ಯಾರ್ಥಿಗಳು ಸಾಮಾನ್ಯ ಪ್ರಶ್ನೆಗಳಿಗೂ ಉತ್ತರಿಸುವಲ್ಲಿ ವಿಫಲರಾಗುತ್ತಿದ್ದಾರೆ ಎಂದರು.

ವಿಶ್ವ ಪುಸ್ತಕ ದಿನಾಚರಣೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಓದುವ ಸಂಸ್ಕೃತಿ ಬೆಳೆಯಲು ಪ್ರತಿಜ್ಞೆ ಮಾಡಬೇಕು. ನಿತ್ಯ ಓದುವ. ಬರೆಯುವ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಈ ಮೂಲಕ ವಿಶ್ವ ಪುಸ್ತಕ ದಿನಾಚರಣೆ ಶುಭಾಶಯ ತಿಳಿಸಿದರು.

ಹಿರಿಯ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ ಹನೂರು ಮುಖ್ಯ ಭಾಷಣ ಕಾರರಾಗಿ ಭಾಗವಹಿಸಿ ಮಾತನಾಡಿ, ಇಡೀ ಜಗತ್ತಿಗೆ ಹಂಚುವ ಜ್ಞಾನಾರ್ಜನೆ ಭಾರತದಲ್ಲಿತ್ತು. ಆದರೆ ಆ ಜ್ಞಾನ ಸರಿಯಾಗಿ ಹಂಚಿಕೆಯಾಗಿಲ್ಲ, ಜ್ಞಾನಾರ್ಜನೆ ಅಗ್ರಹಾರ ಬೀದಿಯಲ್ಲಿರುವ ಮನೆಗಳಲ್ಲಿ ಉಳಿದು ಬಿಡ್ತು. ಅದು ಗೋಡೆ ದಾಟಿ ಬರಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಲಂಬಿಯಾದಲ್ಲಿ ಹಗಲು- ರಾತ್ರಿ ಗೊತ್ತಿಲ್ಲದೆ ಹೆಚ್ಚು ಓದು-ಬರಹ ಮಾಡಿದರಿಂದಲೇ ಅವರು ವಿಶ್ವ ಜ್ಞಾನಿಯಾದರು. ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದದ್ದು, ವಿದ್ಯಾರ್ಥಿಗಳು ಓದು-ಬರಹ ಮೈಗೂಡಿಸಿಕೊಂಡು ವಿಶ್ವ ಮಾನವರಾಗಬೇಕು ಎಂದರು.

ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಆಶಯ ನುಡಿಗಳನ್ನಾಡಿದರು. ಡಾ. ರಾಜ್‌ಕುಮಾರ್ ಅವರು 4ನೇ ತರಗತಿ ಓದಿದ್ದರೂ ಸಹ ಅವರ ಭಾಷೆ, ನಟನ ಪ್ರೌಢಿಮೆ ಜಗತ್ತಿನ ಯಾವ ಕಲಾವಿದರಲ್ಲೂ ಕಾಣಲು ಸಾಧ್ಯವಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಶ್ರೀಮಹದೇಶ್ವರ, ಮಂಟೇಸ್ವಾಮಿ, ನಿಜಗುಣಶಿವಯೋಗಿಗಳು, ಮುಪ್ಪಿನ ಷಡಕ್ಷರಿ, ಯಡಿಯೂರು ಸಿದ್ದಲಿಂಗೇಶ್ವರ, ಸಂಚಿಹೊನ್ನಮ್ಮ ಹಾಗೂ ಡಾ.ರಾಜ್‌ಕುಮಾರ್ ಅಂತಹ ಮಹನೀಯರು ಹುಟ್ಟಿರುವ ಜಿಲ್ಲೆ ನಮ್ಮದು. ಇಲ್ಲಿ ಹುಟ್ಟಿರುವ ನಾವೇ ಧನ್ಯರು ಎಂದು ಹೇಳಿದರು.

ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಧ್ಯಾಪಕ ಡಾ.ಮಹದೇವಮೂರ್ತಿ ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್‌ಹರದನಹಳ್ಳಿ, ರಂಗವಾಹಿನಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಕೆಂಪನಪುರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಮಾರಾಟ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್ ಮಾಂಬಳ್ಳಿ, ಡಾ. ಕುಪ್ಪನಹಳ್ಳಿಭೈರಪ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

### ಓದು-ಬರಹ ರೂಢಿಸಿಕೊಳ್ಳಿ

ಶೇ.90 ರಷ್ಟು ಯುವಕರು ಮೊಬೈಲ್ ಇಂಟರ್‌ನೆಟ್‌ನಲ್ಲಿ ಮುಳುಗಿದ್ದಾರೆ. ಇದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿದೆ. ಆದರಿಂದ ಕಾಲೇಜು ವಿದ್ಯಾರ್ಥಿಗಳು, ಯುವ ಜನಾಂಗವು ಹೆಚ್ಚು ಓದು-ಬರಹ ರೂಢಿಸಿಕೊಂಡು ಒಳ್ಳೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಸಮಾರಂಭವನ್ನು ಕುಲಸಚಿವೆ ಡಿ. ಭಾರತಿ ಉದ್ಘಾಟಿಸಿದರು.



# ಹೆಚ್ಚು ಓದು-ಬರಹದಿಂದ ಜ್ಞಾನಾರ್ಜನೆ ವೃದ್ಧಿ

## ವಿಶ್ವಪುಸ್ತಕ ದಿನಾಚರಣೆ ಓದು-ಬರಹ ಕುರಿತ ಸಂವಾದದಲ್ಲಿ ಮೈಸೂರು ವಿವಿ ಕುಲಸಚಿವೆ ಡಿ.ಭಾರತಿ

ಚಾಮರಾಜನಗರ, ಏ.23- ಹೆಚ್ಚು ಓದು-ಬರಹದಿಂದ ಜ್ಞಾನಾರ್ಜನೆ ವೃದ್ಧಿಸುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಡಿ.ಭಾರತಿ ಹೇಳಿದರು.

ತಾಲೂಕಿನ ಬೇಡರಪುರ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ಡಾ.ಬಿ. ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವಪುಸ್ತಕ ದಿನಾಚರಣೆ ಬಹಳ ವಿಶೇಷ ದಿನಾಚರಣೆಯಾಗಿದೆ. ಇಂತಹ ದಿನಾಚರಣೆ ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ. ಪ್ರೇಮಿಗಳ ದಿನಾಚರಣೆ ಪ್ರಚಲಿತವಾಗಿದ್ದು, ಅನೇಕ ಪರ-ವಿರೋಧಗಳ ನಡುವೆ ನಡೆಯುತ್ತದೆ. ಆದರೆ ವಿಶ್ವಪುಸ್ತಕ ದಿನಾಚರಣೆಗೆ ಯಾವುದೇ ಅಡ್ಡಿ ಆತಂಕವಿಲ್ಲ. ಆದರೂ ಸಹ ವಿಶ್ವ ಪುಸ್ತಕ ದಿನಾಚರಣೆ ಪ್ರಚಲಿತವಾಗಿಲ್ಲ ಎಂದರು.

ಏ.14ರಂದು ಅಂಬೇಡ್ಕರ್ ಜಯಂತಿ, 23ರಂದು ವಿಶ್ವ ಪುಸ್ತಕ ದಿನಾಚರಣೆ. ಲಂಡನ್ ಗ್ರಂಥಾಲಯದಲ್ಲಿ ಹೆಚ್ಚು ಪುಸ್ತಕ ತೆಗೆದುಕೊಂಡು ಓದಿದ್ದು ಡಾ.ಬಿ.ಆರ್. ಅಂಬೇಡ್ಕರ್ ಬಳಿ ಅಗಾಧ ಪುಸ್ತಕ ರಾಶಿಯಿತ್ತು. ಅಂಬೇಡ್ಕರ್ ದೇಶ-ವಿದೇಶಗಳಲ್ಲಿ ಹೆಚ್ಚು ಓದು-ಬರಹ ಕಲಿತಿದ್ದರಿಂದಲೇ ವಿಶ್ವಜ್ಞಾನಿಯಾಗಲು ಸಾಧ್ಯವಾಯಿತು. ಅಲ್ಲದೇ ಅನೇಕ ಪದವಿ ಪಡೆಯಲು ನೆರವಾಯಿತು ಎಂದರು.

ಹಿರಿಯ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ ಹನೂರು ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡಿ, ಇಡೀ ಜಗತ್ತಿಗೆ ಹಂಚುವ ಜ್ಞಾನಾರ್ಜನೆ ಭಾರತದಲ್ಲಿತ್ತು. ಆದರೆ ಆ ಜ್ಞಾನ ಸರಿಯಾಗಿ ಹಂಚಿಕೆಯಾಗಿಲ್ಲ. ಜ್ಞಾನಾರ್ಜನೆ ಅಗ್ರಹಾರ ಬೀದಿಯಲ್ಲಿರುವ ಮನೆಗಳಲ್ಲಿ ಉಳಿದುಬಿಟ್ಟಿತು. ಅದು ಗೋಡೆ ದಾಟಿ ಬರಲಿಲ್ಲ. ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದದ್ದು. ವಿದ್ಯಾರ್ಥಿಗಳು ಓದು-ಬರಹ ಮೈಗೂಡಿಸಿಕೊಂಡು ವಿಶ್ವ ಮಾನವರಾಗಬೇಕು ಎಂದರು. ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಆಶಯ ನುಡಿಗಳನ್ನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಧ್ಯಾಪಕ ಡಾ. ಮಹದೇವಮೂರ್ತಿ ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ತಾಲೂಕು ಕಸಾಪ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್ ಹರದನಹಳ್ಳಿ, ರಂಗವಾಹಿನಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಕೆಂಪನಪುರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಮಾರಾಟ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್ ಮಾಂಬಳ್ಳಿ, ಡಾ.ಕುಪ್ಪನಹಳ್ಳಿ ಭೈರಪ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಚಾ.ನಗರ ತಾಲೂಕಿನ ಬೇಡರಪುರ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಓದು-ಬರಹ ಕುರಿತು ಸಂವಾದವನ್ನು ಮೈಸೂರು ವಿವಿ ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು



29.04.18

# ಜ್ಞಾನದಿಂದ 'ವಿಶ್ವರತ್ನ'ಕ್ಕೇರಿದ ಅಂಬೇಡ್ಕರ್

## ಅಂಬೇಡ್ಕರ್ ಜನ್ಮದಿನಾಚರಣೆ ಸಮಾರಂಭದಲ್ಲಿ ಪ್ರೊ.ಬಿ.ಹನುಮಯ್ಯ ಅಭಿಮತ

ಬೇಡರಪುರ ಬಳಿಯಿರುವ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸುವರ್ಣಗಂಗೋತ್ರಿ ಆವರಣದಲ್ಲಿ ನಡೆದ ಅಂಬೇಡ್ಕರ್ ಅವರ 127 ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳು. ಲಕ್ನೋ ಬಾಬಾ ಸಾಹೇಬ್ ಅಂಬೇಡ್ಕರ್ ಕೇಂದ್ರಿಯ ವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಿ.ಹನುಮಯ್ಯ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

■ ವಿಕ ಸುದ್ದಿಲೋಕ ಚಾಮರಾಜನಗರ

ಡಾ.ಬಿ.ಆರ್.ಅಂಬೇಡ್ಕರ್ ಅವರ ಸತತ ಅಧ್ಯಯನ ಶೀಲತೆ ಭಾರತರತ್ನವಾಗಿದ್ದ ಅವರನ್ನು 'ವಿಶ್ವರತ್ನ'ದ ಮಟ್ಟಕ್ಕೇರಿಸುವಂತೆ ಮಾಡಿತು ಎಂದು ಮಂಗಳೂರುವಿವಿ ಹಾಗೂ ಲಕ್ನೋ ಬಾಬಾಸಾಹೇಬ್ ಅಂಬೇಡ್ಕರ್ ಕೇಂದ್ರಿಯ ವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಿ.ಹನುಮಯ್ಯ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಬೇಡರಪುರ ಬಳಿಯಿರುವ ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸುವರ್ಣ ಗಂಗೋತ್ರಿ ಆವರಣದಲ್ಲಿ ಶನಿವಾರ ನಡೆದ ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 127 ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ಅಂಬೇಡ್ಕರ್ ತಮ್ಮ ಅಧ್ಯಯನದ ವೇಳೆ ನಾನಾ ಜನರಿಂದ ಶೋಷಣೆಗೊಳಗಾದರು. ಆದರೂ ಛಲಬಿಡದೇ, ದಿನಕ್ಕೆ 20 ಗಂಟೆಗಳವರೆಗೂ ಓದುವ ಮೂಲಕ ನಾನಾ ಪದವಿ ಪಡೆದು, ಶೋಷಿತರು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಶಿಕ್ಷಣವೇ ಅಸ್ತ್ರ. ಅದನ್ನು ಪಡೆಯದ ಹೊರತೂ, ಅನ್ಯಮಾರ್ಗವೇ ಇಲ್ಲ ಎಂದು ಜಾಗೃತಿಮೂಡಿಸಿದರು ಎಂದು ಹೇಳಿದರು.

ಯಾವುದಾದರೊಂದು . ವಿದ್ಯಾ ಸಂಸ್ಥೆಗೆ ಅಂಬೇಡ್ಕರ್ ಅವರ ಹೆಸರನ್ನಿಟ್ಟರೇ, ಅದು ದಲಿತ ಸಮುದಾಯದವರಿಗೆ ಮಾತ್ರ ಎಂಬ ಮಾತು ಕೇಳಿಬರುತ್ತಿದೆ. ಇಂತಹ ಬೆಳವಣಿಗೆ ಸರಿಯಲ್ಲ, ಅಂಬೇಡ್ಕರ್ ಅವರ ಹೋರಾಟ ಕೇವಲ ದಲಿತ ಸಮುದಾಯದವರಿಗೆ ಸೀಮಿತವಾಗಿರಲಿಲ್ಲ, ಹಿಂದುಳಿದ ಎಲ್ಲ ಸಮುದಾಯದವರಿಗೂ ಶಿಕ್ಷಣ ಸವಲತ್ತು ಸಿಗಬೇಕು ಎಂಬುದು ಅವರ ಆಶಯವಾಗಿತ್ತು ಎಂದರು.

ಅಂಬೇಡ್ಕರ್ ದೇಶದ ಅಭಿವೃದ್ಧಿಗೆ ಅಪಾರವಾದ ಕೊಡುಗೆಗಳನ್ನು ನೀಡಿದರ ಫಲವಾಗಿ ಭಾರತರತ್ನ ಪ್ರಶಸ್ತಿ ನೀಡಲಾಯಿತು. ಅದನ್ನು ಅವರು ಬದುಕಿದ್ದಾಗ ನೀಡಲಿಲ್ಲ, ಅದನ್ನು ಹೋರಾಟ ಮಾಡಿ, ಪಡೆಯಬೇಕಾದ ಅನಿವಾರ್ಯತೆ ಉಂಟಾಯಿತು ಎಂದರು.

ಇಂದು ಎಲ್ಲ ಪಕ್ಷಗಳು ತಮಗೆ ಬೇಕಾದ ರೀತಿಯಲ್ಲಿ ಅಂಬೇಡ್ಕರ್ ಅವರನ್ನು ಬಳಕೆ ಮಾಡಿಕೊಳ್ಳುತ್ತಿವೆ. ನಂತರ ಅವರನ್ನು ನೆನಪಿನಿಂದ ದೂರಉಳಿಯುವಂತೆ ಮಾಡುತ್ತವೆ ಎಂದು ವಿಷಾಧಿಸಿ, ಗಡಿಜಿಲ್ಲೆ ಚಾಮರಾಜನಗರದಲ್ಲಿ ಅಂಬೇಡ್ಕರ್ ಅವರ ಹೆಸರಿನಲ್ಲಿ ಸುಸಜ್ಜಿತ ಸ್ನಾತಕೋತ್ತರ ಕೇಂದ್ರ ಆರಂಭವಾಗಿ, ಗುಣಮಟ್ಟದಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ವಿಚಾರ. ಕೇಂದ್ರಕ್ಕೆ ಪೂರ್ಣಾವಧಿ ಅಧ್ಯಾಪಕರನ್ನು ನೇಮಕ ಮಾಡಿ, ಮೂಲಸೌಲಭ್ಯ ಒದಗಿಸಿದರೆ ಕೇಂದ್ರ ವಿಶ್ವವಿದ್ಯಾಲಯವಾಗಿ ಮಾರ್ಪಾಡಾಗುತ್ತದೆ ಎಂದರು.

ಬೆಂಗಳೂರು ಸಂಸ್ಕೃತ ವಿವಿ ಕುಲಪತಿ ಪ್ರೊ.ಪದ್ಮಶೇಖರ್ ಮಾತನಾಡಿ, ಅಂಬೇಡ್ಕರ್ ಅವರ ಬದುಕು ಎಂಬುದೇ ಮಂತ್ರಶಕ್ತಿ. ದಲಿತ, ಹಿಂದುಳಿದ ವರ್ಗದ ನಾಯಕರಷ್ಟೇ ಅಲ್ಲದೇ ಪ್ರಸ್ತುತ ವಿಶ್ವರತ್ನವಾಗಿದ್ದಾರೆ.

ಸಂವಿಧಾನ ರಚನೆಯ ಸಂದರ್ಭದಲ್ಲಿ ಸುಮಾರು 3 ಸಾವಿರ ಪ್ರಶ್ನೆಗಳಿಗೆ ಉತ್ತರ ನೀಡಿದ್ದು ಅವರು ಹೊಂದಿದ್ದ ಜ್ಞಾನಕ್ಕೆ ಸಾಕ್ಷಿಯಾಗಿದೆ. ವಾದ ಪ್ರತಿವಾದಗಳಿಗೆ ಸೊಪ್ಪುಹಾಕದ ಅಂಬೇಡ್ಕರ್ ಶಿಕ್ಷಣ, ಸಂಘಟನೆಗೆ ಹೆಚ್ಚು ಒತ್ತು ನೀಡಿದರು. ಅವರ ಆಲೋಚನೆಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಬೌದ್ಧಬಿಕ್ಕುಗಳ ಮಹಾಸಂಘದ ಕಾರ್ಯದರ್ಶಿ ಬಂತೇಬೋಧಿದತ್ತ ತೇರಾ, ಮೈಸೂರು ನಗರಪಾಲಿಕೆ ಸದಸ್ಯ ಪುರುಷೋತ್ತಮ್, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ, ರಾಜ್ಯಶಾಸ್ತ್ರ ಸಂದರ್ಶಕ ಪ್ರಾಧ್ಯಾಪಕ ಪರಮಶಿವಯ್ಯ ಸೇರಿದಂತೆ ಅಧ್ಯಾಪಕರು ಹಾಜರಿದ್ದರು.

> ನಾವು ಅಂದುಕೊಂಡ ಗುರಿತಲುಪಲು ದೊಡ್ಡಮಟ್ಟದ ಸಿದ್ಧತೆಯನ್ನು ಈಗಿನಿಂದಲೇ ಮಾಡಿಕೊಳ್ಳಬೇಕು. ಜತೆಗೆ ಸರಳವಾಗಿ ಬದುಕುವುದನ್ನು ಕಲಿಯಬೇಕು. ಜೀವನದಲ್ಲಿ ಆಶಾವಾದಿಗಳಾಗಬೇಕೆ ಹೊರತೂ, ನಿರಾಶಾವಾದಿಗಳಾಗಬಾರದು.
> -ಪ್ರೊ. ಪದ್ಮಶೇಖರ್, ಬೆಂಗಳೂರು ಸಂಸ್ಕೃತ ವಿವಿ ಕುಲಪತಿ.

# ಆಡಳಿತಗಾರರಿಗೆ ಸಾಮಾಜಿಕ ಬದ್ಧತೆ ಅಗತ್ಯ

## ನಾಡು, ನುಡಿ, ಗಡಿಸಮಸ್ಯೆ ನಿವಾರಣೆ ಆಡಳಿತ-ಸಾಂಸ್ಕೃತಿಕ ಶಾಖೆಯ ಜವಾಬ್ದಾರಿ: ಪ್ರೊ.ಮಲೆಯೂರು



ಚಾಮರಾಜನಗರದ ಹೊರವಲಯದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ಸಾವಿತ್ರಿಬಾಯಿಬಾಫುಲೆ ಗ್ರಂಥಾಲಯ ನಾಮಫಲಕ ಅನಾವರಣ ಮಾಡಿದ ಗಣ್ಯರು.

**ವಿಕ ಸುದ್ದಿಲೋಕ** ಚಾಮರಾಜನಗರ

ನಾಡು, ನುಡಿ, ಗಡಿಸಮಸ್ಯೆ ನಿವಾರಣೆ ಮಾಡುವುದು ಆಡಳಿತ ಮತ್ತು ಸಾಂಸ್ಕೃತಿಕ ಶಾಖೆಯ ಪ್ರಮುಖ ಜವಾಬ್ದಾರಿ ಎಂದು ಸಾಹಿತಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮಲೆಯೂರು ಗುರುಸ್ವಾಮಿ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ಕನ್ನಡ ವಿಭಾಗದ ವತಿಯಿಂದ ಆಯೋಜಿಸಿದ್ದ 63 ನೇ ಕನ್ನಡರಾಜ್ಯೋತ್ಸವ, ಸಾವಿತ್ರಿಬಾಯಿ ಬಾಫುಲೆ ಗ್ರಂಥಾಲಯ ನಾಮಫಲಕ ಅನಾವರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

''ಸ್ವಾತಂತ್ರ್ಯಾನಂತರವೂ ಆದ್ಯತೆಯೇ ದೊರೆಯದ ಕ್ಷೇತ್ರಗಳೆಂದರೆ ಅದು ಶಿಕ್ಷಣ ಹಾಗೂ ಸಾಂಸ್ಕೃತಿಕ ಶಾಖೆ,''ಎಂದರು.

''ಅಧಿಕಾರ, ತಾನು ಗಳಿಸಿದ ಸಂಪತ್ತು ಎಂದಿಗೂ ಮಾಜಿಗಳೇ, ಆದರೆ ನಾವು ಬಳಕೆ ಮಾಡಿದಷ್ಟು ಹೆಚ್ಚಳವಾಗುವ ಜ್ಞಾನಸಂಪತ್ತು ಶಾಶ್ವತ. ನಾಡು ನುಡಿಗಳ ಸಮಸ್ಯೆ ನಿವಾರಣೆ ಮಾಡುವ ಆಡಳಿತಶಾಹಿಗೆ ನೈತಿಕ ಭಯ ವಿರಬೇಕು. ಅದರಂತೆ ಅವರು ಕೆಲಸಮಾಡಬೇಕು. ಮೊದಲನೆಯದಾಗಿ ಆಡಳಿತಗಾರರು ಸಾಮಾಜಿಕ ಬದ್ಧತೆ ರೂಢಿಸಿಕೊಳ್ಳಬೇಕು,'' ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ. ಕೃಷ್ಣಮೂರ್ತಿ ಹನೂರು, ''ಕನ್ನಡ ರಾಜ್ಯೋತ್ಸವ ಆಚರಿಸುವುದರ ಜತೆಗೆ ಗಡಿಸಮಸ್ಯೆಗಳು ಕರ್ನಾಟಕವನ್ನು ಆವರಿಸಿಕೊಂಡಿವೆ. ಇದು ಚಾಮರಾಜನಗರದ ಸಮಸ್ಯೆಯಲ್ಲ, ರಾಯಚೂರು, ಕೋಲಾರ, ಬೀದರ್, ಬೆಳಗಾವಿ ಜಿಲ್ಲೆಗಳಲ್ಲೂ ಇದೆ. ಇನ್ನು ಬುಡಕಟ್ಟು ಜನರನ್ನೇ ತೆಗೆದುಕೊಂಡರೆ ಅವರ ಭಾಷೆಯೇ ಬೇರೆ. ಶಾಲೆಗಳಲ್ಲಿ ಬೋಧಿಸುವ ಕನ್ನಡ ಸೇರಿದಂತೆ ಇತರೇ ಭಾಷೆಗಳು ಅವರನ್ನು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿಸಿವೆ. ಇನ್ನು ಭಾಷಾ ಸಮಸ್ಯೆ ನಿವಾರಣೆಯಾಗುವುದು ಹೇಗೆ?,''ಎಂದು ಪ್ರಶ್ನಿಸಿದರು.

''ಕುವೆಂಪು, ಕೋಟ ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಂಥವರು ಸ್ಥಳೀಯವಾಗಿ ಕಾವ್ಯ ರಚಿಸಿ ವಿಶ್ವಮಟ್ಟದಲ್ಲಿ ಪ್ರಸಿದ್ಧಿಯಾದರು. 19 ನೇ ಶತಮಾನದಲ್ಲಿ ಇಂಗ್ಲಿಷ್ ವಿದ್ವಾಂಸ ಬಿ.ಎಲ್. ರೈಸ್ ಕರ್ನಾಟಕದಾದ್ಯಂತ ಪ್ರವಾಸ ಮಾಡಿ, ಶಾಸನಗಳ ಬಗ್ಗೆ ಮಾಹಿತಿ ಕಲೆಹಾಕಿ, ಓದುವಂತೆ ಜಾಗೃತಿ ಮೂಡಿಸಿದರು. ಇಂದು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹಳಗನ್ನಡ ಓದುವುದು ಬೇಡ ಎಂಬ ಕೂಗು ಎದ್ದಿರುವುದು ಆತಂಕಕಾರಿ ಬೆಳವಣಿಗೆ,''ಎಂದು ವಿಷಾದಿಸಿದರು.

ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಎಂ.ಟಿ.ಮಂಜುನಾಥ್, ''ಚಾಮರಾಜನಗರ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಎಲ್ಲ ಸೌಲಭ್ಯವಿದ್ದು, ಮುಂದಿನ ದಿನಗಳಲ್ಲಿ ಇದು ವಿಶ್ವವಿದ್ಯಾನಿಲಯವಾಗುವ ಎಲ್ಲಲಕ್ಷಣಗಳನ್ನು ಹೊಂದಿದೆ. ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಮೈಸೂರು ವಿವಿ ಪ್ರಸಾರಾಂಗ 2 ಲಕ್ಷ ರೂ.ಗಳ ಪುಸ್ತಕಗಳನ್ನು ನೀಡಿದೆ. ಅಮೂಲ್ಯವಾದ ಜ್ಞಾನ ಸಂಪತ್ತನ್ನು ಹೆಚ್ಚಳ ಮಾಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ,''ಎಂದರು.

ಕಾರ್ಯಕ್ರಮದಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಅವರು ಗ್ರಂಥಾಲಯಕ್ಕೆ ಜಿಲ್ಲೆಯ 250 ಕವಿಗಳನ್ನು ಒಳಗೊಂಡು ರಚಿಸಿರುವ ಸಾಹಿತ್ಯ ಸುವರ್ಣಾವತಿ ಸೇರಿದಂತೆ ನಾನಾ ಪುಸ್ತಕಗಳನ್ನು ದೇಣಿಗೆಯಾಗಿ ನೀಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ಕೇಂದ್ರದ ಆವರಣದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿದರು.

ಮೈಸೂರು ಸಂತ ಫಿಲೋಮಿನಾ ಕಾಲೇಜಿನ ಪ್ರಾಂಶುಪಾಲೆ ಡಾ.ರೂತ್ ಶಾಂತಕುಮಾರಿ, ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.

> ರಾಜ್ಯದ ಗಡಿಭಾಗಗಳಲ್ಲಿ ಕನ್ನಡ ನೆಲಜಲ ಭಾಷೆ ಸಮಸ್ಯೆ ಆವರಿಸಿದ್ದು, ಇದು ಸರಕಾರಗಳ ನಡುವಣ ಸಮಸ್ಯೆ. ಗಡಿಯಲ್ಲಿ ಕನ್ನಡ ಮಾತ ನಾಡುವ ವಾತಾವರಣ ನಿರ್ಮಾಣವಾಗಬೇಕು. ಸರಕಾರಗಳ ಜತೆ ಸಾರ್ವಜನಿಕರು ಇದಕ್ಕೆ ಕೈಜೋಡಿಸಿದಾಗ ಅನೇಕ ಸಮಸ್ಯೆ ನಿವಾರಣೆ ಯಾಗುತ್ತವೆ.
>
> **-ಡಾ.ಕೃಷ್ಣಮೂರ್ತಿ ಹನೂರು,**
> ಸಂದರ್ಶಕ ಪ್ರಾಧ್ಯಾಪಕರು.

# ಗುಣಮಟ್ಟದ ಶಿಕ್ಷಣ ನೀಡಲು ವಿವಿ ಸ್ಥಾಪನೆಯಾಗಲಿ

## ಪ್ರಸರಾಂಗ ನಿರ್ದೇಶಕ ಮಂಜುನಾಥ ಅಭಿಪ್ರಾಯ | ಗ್ರಂಥಾಲಯ ನಾಮಫಲಕ ಅನಾವರಣ

ವಿಜಯವಾಣಿ ಚಿತ್ರ



ನಗರದ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಉದ್ಘಾಟಿಸಿದರು.

ವಿಜಯವಾಣಿ ಸುದ್ದಿಜಾಲ
ಚಾಮರಾಜನಗರ

ಪ್ರತಿ ಜಿಲ್ಲೆಗಳಲ್ಲಿಯೂ ವಿಶ್ವವಿದ್ಯಾಲಯ ಗಳು ಸ್ಥಾಪನೆಯಾದಾಗ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಜಿ.ಮಂಜುನಾಥ ಅಭಿಪ್ರಾಯಪಟ್ಟರು.

ನಗರದ ಹೊರವಲಯದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಕನ್ನಡ ರಾಜ್ಯೋತ್ಸವ, ನಿಜಗುಣ ಸಭಾಂಗಣ ಹಾಗೂ ಸಾವಿತ್ರಿ ಬಾಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಸಮಾರಂಭದಲ್ಲಿ ಮಾತನಾಡಿದರು.

ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ವಿಶ್ವವಿದ್ಯಾಲಯ ಇದ್ದರೂ ಕುಲಪತಿಗಳ ನೇಮಕವಾಗದ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ಕುಂಠಿತಗೊಳ್ಳುತ್ತಿದೆ. ರಾಜ್ಯದ ಗಡಿ ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯ ನಿರ್ಮಾಣವಾದರೆ ಆ ಭಾಗದ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲಿದೆ ಎಂದರು.

ಸ್ನಾತಕೋತ್ತರ ಕೇಂದ್ರದಲ್ಲಿ ನೂತನವಾಗಿ ಆರಂಭವಾಗಿರುವ ಗ್ರಂಥಾಲಯಕ್ಕೆ ಪ್ರಸರಾಂಗದಿಂದ 2 ಲಕ್ಷ ರೂ.ಗಳ ಪುಸ್ತಕಗಳನ್ನು ನೀಡಲಾಗಿದ್ದು, ಇದರಲ್ಲಿ ಕುವೆಂಪು, ದ.ರಾ. ಬೇಂದ್ರೆ ಸೇರಿದಂತೆ ಇತರೆ ಮಹಾನ್ ಕವಿಗಳು ಬರೆದಿರುವ ಪುಸ್ತಕಗಳಿವೆ. ಇವುಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುವ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ರಾಜ್ಯದ ಗಡಿ ಜಿಲ್ಲೆಗಳಲ್ಲಿ ಕನ್ನಡದ ಸಮಸ್ಯೆ ಹೆಚ್ಚಾಗಿದೆ. ಅನ್ಯ ಭಾಷೆಗಳು ರಾಜ್ಯದೊಳಗೆ ಪ್ರವೇಶ ಮಾಡುತ್ತವೆ. ಆದರೆ ಕನ್ನಡ ಭಾಷೆ ಹೊರಗೆ ಹೋಗಲ್ಲ. ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ನೆರೆ ರಾಜ್ಯಗಳಿಂದ ಜನರು ಇಲ್ಲಿಗೆ ಬಂದು ಬದುಕು ಕಟ್ಟಿಕೊಳ್ಳುತ್ತಾರೆ. ಆದರೆ ಇಲ್ಲಿಂದ ಹೋಗುವಾಗ ಎಲ್ಲವನ್ನು ಖಾಲಿ ಮಾಡಿ ಹೋಗುತ್ತಾರೆ ಎಂದರು.

ವಿಶ್ವವಿದ್ಯಾಲಯವು ಹೊಸಗನ್ನಡವನ್ನು ಜಾರಿಗೊಳಿಸುವ ಉದ್ದೇಶದಿಂದ ಹಳೆಗನ್ನಡವನ್ನು ತೆಗೆಯಲು ಪ್ರಯತ್ನಿಸುತ್ತಿದೆ. ಹಳೆಗನ್ನಡವು ಶಾಸನಗಳನ್ನು ಓದಲು ಹಾಗೂ ಭಾಷಾ ಪ್ರೌಢಿಮೆಯನ್ನು ಬೆಳೆಸಲು ಸಹಕಾರಿಯಾಗಿದ್ದು, ಇದನ್ನು ತೆಗೆಯಬಾರದು ಎಂದರು.

ಸಾಹಿತಿ ಮಲೆಯೂರು ಗುರುಸ್ವಾಮಿ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿಕ್ಷಣ ಇಲಾಖೆಗಳು ಕನ್ನಡ ಭಾಷೆಯ ಉಳಿವಿಗೆ ಪ್ರಾಮುಖ್ಯತೆ ನೀಡಬೇಕು. ಜಿಲ್ಲೆಯವರಾದ ಡಾ.ರಾಜಕುಮಾರ್ ಅವರ ಸ್ಮಾರಕ ನಿರ್ಮಾಣ ಹಾಗೂ ರಸ್ತೆಗಳಿಗೆ ಅವರ ಹೆಸರು ಇಡಬೇಕು ಎಂದು ಒತ್ತಾಯಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಪ್ರಾಂಶುಪಾಲರಾದ ಡಾ.ರೂತ್ ಶಾಂತಕುಮಾರಿ, ಇತರರಿದ್ದರು.





ಕರ್ನಾಟಕ ರಾಜ್ಯೋತ್ಸವ, ನಿಜಗುಣ ಸಭಾಂಗಣ ಉದ್ಘಾಟನೆ: ಪ್ರೊ.ಎಂ.ಜಿ.ಮಂಜುನಾಥ್ ಆಗ್ರಹ

# ಗಡಿಜಿಲ್ಲೆಗೆ ವಿಶ್ವವಿದ್ಯಾಲಯ ಸ್ಥಾಪಿಸಲಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಗಡಿಜಿಲ್ಲೆಯಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪನೆಯಾದರೆ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ಜಿ. ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಡಾ.ಬಿ. ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ, ನಿಜಗುಣ ಸಭಾಂಗಣ ಮತ್ತು ಸಾವಿತ್ರಿಬಾಯಿ ಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರತಿ ಜಿಲ್ಲೆಯಲ್ಲೂ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ಇದರಿಂದ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಮುಖ್ಯವಾಗಿ ಗಡಿಜಿಲ್ಲೆಗಳಲ್ಲಿ ಇಂತಹ ಕೆಲಸಗಳು ನಡೆಯಬೇಕಿದೆ. ಕೆಲವೆಡೆ ಒಂದೇ ಊರಿನಲ್ಲಿ ನಾಲ್ಕು ವಿ.ವಿ. ಗಳಿರುತ್ತವೆ. ಆದರೆ, ಕುಲಪತಿಗಳೇ ನೇಮಕ ಆಗಿರುವುದಿಲ್ಲ. ಅಂತಹ ಕಟ್ಟಡಗಳು ಪ್ರಯೋಜನಕ್ಕೆ ಬಾರದೆ ವ್ಯರ್ಥವಾಗುತ್ತವೆ ಎಂದರು.

**₹2 ಲಕ್ಷ ಮೌಲ್ಯದ ಪುಸ್ತಕ:** 'ನಮ್ಮ ಪ್ರಸಾರಾಂಗವು ವಿಶ್ವವಿದ್ಯಾಲಯದಿಂದ ಅನುಮತಿ ಪಡೆದೇ ಸ್ನಾತಕೋತ್ತರ ಕೇಂದ್ರಗಳಿಗೆ ಪುಸ್ತಕ ನೀಡಬೇಕು. ಈ ಬಾರಿ ಕೇಂದ್ರಕ್ಕೆ ₹2 ಲಕ್ಷ ಮೌಲ್ಯದ ಪುಸ್ತಕಗಳನ್ನು ನೀಡಲಾಗಿದೆ' ಎಂದರು.

ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಕೃಷ್ಣಮೂರ್ತಿ ಹನೂರು ಮಾತನಾಡಿ, 'ಗಡಿನಾಡಿನಲ್ಲಿ ಕನ್ನಡದ ಸಮಸ್ಯೆ ಇದೆ. ಅನ್ಯಭಾಷೆ ರಾಜ್ಯದೊಳಗೆ ಪ್ರವೇಶ ಪಡೆಯುತ್ತದೆ. ಆದರೆ, ಕನ್ನಡ ಭಾಷೆ ಗಡಿಬಿಟ್ಟು ಆಚೆ ಹೋಗುವುದಿಲ್ಲ. ಇದು ಚಾಮರಾಜನಗರ ಮಾತ್ರವಲ್ಲ, ಮಡಿಕೇರಿ, ಕೋಲಾರದಂತಹ ಗಡಿ ಪ್ರದೇಶಗಳಲ್ಲೂ ಇದೇ ಸ್ಥಿತಿ ಇದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಮಲೆಯೂರು ಗುರುಸ್ವಾಮಿ ಮಾತನಾಡಿ, 'ರಾಜಕಾರಣಿಗಳು ಕನ್ನಡ ಭಾಷೆ ಉಳಿವಿಗೆ ಪ್ರಾಮುಖ್ಯ ನೀಡಿದ್ದರೆ ರಾಜ್ಯದಲ್ಲಿ ಕನ್ನಡದ ಸಮಸ್ಯೆ ಬಗೆಹರಿಸಲು 60 ವರ್ಷ ಬೇಕಿರಲಿಲ್ಲ' ಎಂದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಮೈಸೂರು ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲರಾದ ಡಾ.ಶಾಂತಕುಮಾರಿ ಇದ್ದರು.

**ಹಳೆಗನ್ನಡ ಬೇಡ, ಹೊಸ ಕನ್ನಡದಲ್ಲೇ ಪತ್ರಗಳನ್ನು ನೀಡಬೇಕು ಎಂದು ವಿ.ವಿ.ಗಳು ಹೇಳುತ್ತಿವೆ. ಹೀಗಾದರೆ, ಶಾಸನಗಳನ್ನು ಓದುವವರು ಯಾರು?**
ಪ್ರೊ.ಕೃಷ್ಣಮೂರ್ತಿ ಹನೂರು ಕನ್ನಡ ವಿಭಾಗದ ಮುಖ್ಯಸ್ಥ

ಸ್ನಾತಕೋತ್ತರ ಕೇಂದ್ರದ ಸಾವಿತ್ರಿಬಾಯಿ ಫುಲೆ ಗ್ರಂಥಾಲಯಕ್ಕೆ ಪ್ರೊ.ಎಂ.ಜಿ. ಮಂಜುನಾಥ ಪುಸ್ತಕಗಳನ್ನು ನೀಡಿದರು

## ರಾಜ್‌ಕುಮಾರ್ ಸ್ಮಾರಕ ಮಾಡಲಿಲ್ಲ

'ಕನ್ನಡದ ವರನಟ ಡಾ.ರಾಜ್‌ಕುಮಾರ್ ಅವರಂತಹ ಕಲಾವಿದರು ಭರತ ಖಂಡದಲ್ಲೇ ಇಲ್ಲ. ಮುಂದೆಯೂ ಹುಟ್ಟುವುದಿಲ್ಲ. ಅವರು ನಮ್ಮ ಜಿಲ್ಲೆಯವರು. ಆದರೆ, ಜಿಲ್ಲಾ ಕೇಂದ್ರದಲ್ಲಿ ಅವರ ಸ್ಮಾರಕವೂ ನಿರ್ಮಾಣವಾಗಲಿಲ್ಲ. ಯಾವುದೇ ರಸ್ತೆಗಳಿಗೂ ಅವರ ಹೆಸರನ್ನು ಇಟ್ಟಿಲ್ಲ' ಎಂದು ಮಲೆಯೂರು ಗುರುಸ್ವಾಮಿ ಬೇಸರ ವ್ಯಕ್ತಪಡಿಸಿದರು.

'ರಾಜ್‌ಕುಮಾರ್ ಅವರು ಜಿಲ್ಲಾ ಕೇಂದ್ರದ ಸಂತೇಮರಹಳ್ಳಿ ವೃತ್ತದಿಂದ ಸತ್ತಿ ರಸ್ತೆಯಲ್ಲಿ ನಡೆದಾಡುತ್ತಿದ್ದರು. ಇದೇ ಮಾರ್ಗವಾಗಿ ಅವರ ಊರಿಗೆ (ಗಾಜನೂರು) ಹೋಗುತ್ತಿದ್ದರು. ಅವರ ನೆನಪಿಗಾಗಿ ಸಂತೇಮರಹಳ್ಳಿ ವೃತ್ತಕ್ಕೆ ಅವರ ಹೆಸರನ್ನು ಇಡಬೇಕು' ಎಂದು ಒತ್ತಾಯಿಸಿದರು.

## ಚಾಮರಾಜನಗರ ವಿ.ವಿ ಸ್ಥಾಪನೆ ಆಗಲಿ

ಗಡಿಜಿಲ್ಲೆಯಲ್ಲಿ 50 ಎಕರೆ ಜಾಗವಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮುಂದೊಂದು ದಿನ 'ಚಾಮರಾಜನಗರ ವಿಶ್ವವಿದ್ಯಾಲಯ' ಸ್ಥಾಪನೆ ಆಗಬೇಕು. ಇಲ್ಲಿ 10ಕ್ಕೂ ಹೆಚ್ಚು ವಿಭಾಗಗಳಿವೆ. ಇನ್ನೂ 15 ವಿಭಾಗಗಳನ್ನು ಸ್ಥಾಪಿಸುವುದು ಕಷ್ಟವಲ್ಲ. ರಾಜಕಾರಣಿಗಳು, ಸ್ಥಳೀಯರು ಬದ್ಧತೆ ತೋರಿಸಬೇಕು. ಹೋರಾಟ ಮಾಡಿ ವಿ.ವಿ.ಯನ್ನು ಪಡೆಯುವ ಹಂಬಲ ಇರಬೇಕು ಎಂದು ಎಂ.ಜಿ.ಮಂಜುನಾಥ್ ಹೇಳಿದರು.

ಪತ್ರಿಕೆ: ಪ್ರಜಾವಾಣಿ
ದಿನಾಂಕ: 15/11/18

# ವಿದ್ಯಾರ್ಥಿಗಳು ಭಾಷಾ ಬದ್ಧತೆ ಮೆರೆಯಲಿ

## ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕನ್ನಡ ರಾಜ್ಯೋತ್ಸವದಲ್ಲಿ ಪ್ರೊ.ಮ.ಗುರುಸ್ವಾಮಿ

ಚಾಮರಾಜನಗರ,ನ.೧೪-ವಿದ್ಯಾರ್ಥಿಗಳು ಶಿಕ್ಷಣದ ಮಹತ್ವ ಅರಿತುಕೊಳ್ಳಬೇಕು. ಸಾಮಾಜಿಕ ಜವಾಬ್ದಾರಿ, ಭಾಷಾ ಬದ್ಧತೆಯನ್ನು ಮೆರೆಯಬೇಕು ಎಂದು ವಿದ್ವಾಂಸ ಪ್ರೊ.ಮಲೆಯೂರು ಗುರುಸ್ವಾಮಿ ಹೇಳಿದರು.

ಸಮೀಪದ ಸುವರ್ಣ ಗಂಗೋತ್ರಿ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ವತಿಯಿಂದ ಬುಧವಾರ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಹಾಗೂ ನಿಜಗುಣ ಸಭಾಂಗಣ ಮತ್ತು ಸಾವಿತ್ರಿ ಬಾಯಿಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಜ್ಞಾನದ ಬಯಕೆ ಹೆಚ್ಚಾಗಬೇಕು. ಆಗ ಮಾತ್ರ ಉನ್ನತ ಶಿಕ್ಷಣಕ್ಕೆ ಮಹತ್ವ ಬರುತ್ತದೆ ಎಂದು ಗುರುಸ್ವಾಮಿ ನುಡಿದರು. ಸಾವಿತ್ರಿ ಬಾಯಿ ಫುಲೆ ಅವರು ಪೂರ್ವದಲ್ಲೇ ಶಿಕ್ಷಣದ ಮಹತ್ವ ಸಾರಿದವರು. ಹಾಗೆಯೇ ನಿಜಗುಣ ಶಿವಯೋಗಿಗಳು ವಿಶ್ವಕೋಶವಿದ್ದಂತೆ. ಇಂತಹ ಮಹನೀಯರ ಹೆಸರನ್ನು ಗ್ರಂಥಾಲಯಕ್ಕೆ ಮತ್ತು ಸಭಾಂಗಣಕ್ಕೆ ನಾಮಕರಣ ಮಾಡಿರುವುದು ಅರ್ಥಪೂರ್ಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಸ್ನಾತಕೋತ್ತರ ವಿದ್ಯಾರ್ಥಿಗಳು ಓದಿಗೆ ಸೀಮಿತರಾಗದೆ ಸಾಧಕರಾಗಬೇಕು. ಶ್ರಮವಹಿಸಿ ವ್ಯಾಸಂಗ ಮಾಡುವ ಮೂಲಕ ಶಿಕ್ಷಣದಲ್ಲಿ ಉನ್ನತಿ ಸಾಧಿಸಬೇಕು ಎಂದು ತಿಳಿಹೇಳಿದರು.

ಇದೇವೇಳೆ ಸಾವಿತ್ರಿ ಬಾಯಿಫುಲೆ ಗ್ರಂಥಾಲಯಕ್ಕೆ ೨ ಲಕ್ಷ ರೂ.ಗಳ ಪುಸ್ತಕಗಳನ್ನು ಪ್ರೊ.ಮಂಜುನಾಥ್ ನೀಡಿ ಸ್ನಾತಕೋತ್ತರ ವಿದ್ಯಾರ್ಥಿಗಳು ಪುಸ್ತಕಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಕೃಷ್ಣಮೂರ್ತಿ ಹನೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮೈಸೂರಿನ ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲರಾದ ಡಾ.ರೂತ್ ಶಾಂತಕುಮಾರಿ ಸಾವಿತ್ರಿ ಬಾಯಿ ಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಮಾಡಿದರು. ಕನ್ನಡ ವಿಭಾಗದ ಉಪನ್ಯಾಸಕರಾದ ಮಹೇಶ್ ಬಾಬು, ಬಸವಣ್ಣ, ತಮ್ಮೇಗೌಡ, ಗುರುರಾಜು, ರಾಣಿ ಮತ್ತಿತರರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಜ್ಞಾನದ ಬಯಕೆ ಹೆಚ್ಚಾಗಬೇಕು. ಆಗ ಮಾತ್ರ ಉನ್ನತ ಶಿಕ್ಷಣಕ್ಕೆ ಮಹತ್ವ ಬರುತ್ತದೆ.
- ಪ್ರೊ.ಮ.ಗುರುಸ್ವಾಮಿ

ಚಾಮರಾಜನಗರ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಮಾತನಾಡಿದರು. ಪ್ರೊ. ಕೃಷ್ಣಮೂರ್ತಿ ಹನೂರು, ಪ್ರೊ. ಶಿವಬಸವಯ್ಯ, ಡಾ. ರೂತ್ ಶಾಂತಕುಮಾರ ಚಿತ್ರದಲ್ಲಿದ್ದಾರೆ.

ಪತ್ರಿಕೆ: ಆಂದೋಲನ
ದಿನಾಂಕ: 15/11/18

# ಹೊಸ ಸಾಹಿತ್ಯದಿಂದ ಚಳವಳಿಗೆ ಮರುಜೀವ

**ವಿಕ ಸುದ್ದಿಲೋಕ** ಚಾಮರಾಜನಗರ

**ಸಾಹಿತಿ ಪ್ರೊ. ಎಚ್. ಗೋವಿಂದಯ್ಯ ಅಭಿಮತ**

ಸಾಹಿತ್ಯ, ಕಾವ್ಯಾದ ಗೊಂದಲದಿಂದ ಯಾರು ಹೊರಗೆ ಬರುತ್ತಾರೋ ಅವರು ಹೊಸ ಸಾಹಿತ್ಯ ಚಳವಳಿ ಕಟ್ಟಿಕೊಡಲು ಸಾಧ್ಯವಲ್ಲದೇ ಹೊಸ ಸಾಹಿತ್ಯ ಚಳವಳಿ ಕಟ್ಟಿದಾಗ ಮಾತ್ರ ದಲಿತ ಚಳವಳಿಗೆ ಪುನರ್ಜೀವ ಬರಲು ಸಾಧ್ಯ ಎಂದು ಸಾಹಿತಿ ಪ್ರೊ. ಎಚ್. ಗೋವಿಂದಯ್ಯ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿಜಗುಣ ಶಿವಯೋಗಿ ಸಭಾಂಗಣದಲ್ಲಿ ಸಾಹಿತ್ಯ ಅಕಾಡೆಮಿ, ನವದೆಹಲಿ ಚಾಮರಾಜನಗರ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಸಹಯೋಗದಲ್ಲಿ ನಡೆದ 'ದಲಿತ ಚೇತನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದಲಿತ ಕಾವ್ಯಾಮತ್ತು ಸಾಹಿತ್ಯದ ಬಗ್ಗೆ ಗಂಬೀರವಾದ ಚರ್ಚೆಗಳು ಇದುವರೆಗೂ ನಡೆದಿಲ್ಲ, ಈಗ ಆ ಬಗ್ಗೆ ಗಂಭೀರವಾದ ಚರ್ಚೆಗಳು ನಡೆಸಲು ಸಕಾಲ. ಈಗಲೂ ಅದು ಸಾಧ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಕೆಟ್ಟದಿನಗಳು ಕಾದಿವೆ ಎಂದರು.

ದಲಿತ ಪರಂಪರೆ ಕಾವ್ಯಗಳು: ''ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿ ಕುರಿತ ಕಾವ್ಯಾಗಳು ದಲಿತ ಪರಂಪರೆಯವು. ದಲಿತರು ಈ ಎರಡು ಮಹಾಕಾವ್ಯಗಳಿಗೆ ನಮಿಸಿ ಶರಣಾಗಬೇಕು. ಈ ಮಹಾಕಾವ್ಯಗಳು ದಲಿತ ಪರಂಪರೆಯವಾಗಿದ್ದರೂ, ಅವುಗಳ ಕಡೆಗೆ ದಲಿತರು ತಿರುಗಿಯೂ ನೋಡಿಲ್ಲ, ಅದಕ್ಕೆ ನಮಿಸಿ ಶರಣಾಗಿ ನಮ್ಮ ಅಕ್ಷರ ಅಹಂಕಾರವನ್ನು ಬದಿಗಿಟ್ಟು ಒಳಗೆ ಹೋದಾಗ ಅದರ ಸಾರ ತಿಳಿಯಲಿದೆ ಎಂದರು.

ನೋವು ಅನಾವರಣ: ಪ್ರಾಧ್ಯಾಪಕ ಎನ್. ಕೃಷ್ಣಮೂರ್ತಿ ಹನೂರು ಮಾತನಾಡಿ, ''ಮಲೆ ಮಹದೇಶ್ವರ ಮಹಾಕಾವ್ಯ ಮತ್ತು ಮಂಟೇಸ್ವಾಮಿ ಮಹಾಕಾವ್ಯಗಳಲ್ಲಿರುವ ಹಾಡುಗಳು ನೋವಿನ ಸಂಗತಿಗಳನ್ನು ತಿಳಿಸುತ್ತದೆ. ಆದರೆ, ದಕ್ಷಿಣ ಭಾಗದ ಕರ್ನಾಟಕದಲ್ಲಿ ಆ ಕಲೆಗಳು ಉಳಿದಿಲ್ಲ'' ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ, ಕವಿ, ಸಂಸ್ಕೃತಿ ಚಿಂತಕ ಮಹಾದೇವ ಶಂಕನಪುರ, ಮೈಸೂರು ಸಂಶೋಧಕ ಎಸ್.ಕೆ. ಮಂಜುನಾಥ, ಬಂಗಾರಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಎಚ್. ಎನ್. ಪುಷ್ಪಲತಾ ಹಾಜರಿದ್ದರು.



ಚಾಮರಾಜನಗರ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ದಲಿತ ಚೇತನ ಕಾರ್ಯಕ್ರಮದಲ್ಲಿ ಮೈಸೂರು ಹಿರಿಯ ಕವಿ ಪ್ರೊ. ಎಚ್. ಗೋವಿಂದಯ್ಯ ಮಾತನಾಡಿದರು.

# ಹೊಸ ತಲೆಮಾರಿಗೆ ಕುಮಾರಪ್ಪ ಚಿಂತನೆ ಅವಶ್ಯ

## ಅಂಬೇಡ್ಕರ್ ಕೇಂದ್ರದಲ್ಲಿ ನಡೆದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮೈ.ವಿ.ವಿ. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಜಿ.ಎಂ. ಬಸವರಾಜು ಅಭಿಮತ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಪ್ರಕೃತಿಯನ್ನು ಶೋಷಿಸದೆ ಅದರ ಕೊಡುಗೆಗಳನ್ನು ಬಳಸಿಕೊಳ್ಳಬೇಕೆಂಬುದು ಕುಮಾರಪ್ಪನವರ ನಿಲುವಾಗಿತ್ತು. ಭಾರತದ ಹೊಸ ತಲೆಮಾರಿಗೆ ಕುಮಾರಪ್ಪ ಮತ್ತು ಗಾಂಧಿ ಚಿಂತನೆಗಳು ಅತ್ಯವಶ್ಯಕ ಎಂದು ಮೈವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಜಿ.ಎಂ. ಬಸವರಾಜು ಹೇಳಿದರು.

ನಗರದ ಸಮೀಪವಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ಗಾಂಧಿ ಅರ್ಥಶಾಸ್ತ್ರ ತಂದವರು ಕುಮಾರಪ್ಪ:** ಭಾರತವೂ ಸೇರಿದಂತೆ ಆಧುನಿಕ ಜಗತ್ತು ಗುರುತಿಸಿರುವ ಗಾಂಧಿ ಆರ್ಥಶಾಸ್ತ್ರವನ್ನು ಪ್ರಯೋಗ ಮತ್ತು ಫಲಿತಾಂಶಗಳ ಮೂಲಕ ಜಾರಿಗೆ ತಂದವರು ಜೆ.ಸಿ. ಕುಮಾರಪ್ಪ. ಈ ಮೂಲಕ ಗಾಂಧೀಜಿಯವರ ಚಿಂತನೆಗಳಿಗೆ ಮೂರ್ತ ಸ್ವರೂಪ ನೀಡಿ ಗಾಂಧಿ ಅರ್ಥಶಾಸ್ತ್ರ ಎಂಬ ಜ್ಞಾನ ಶಾಖೆಯನ್ನು ಅಸ್ತಿತ್ವಕ್ಕೆ ತಂದವರು ಜೆ.ಸಿ. ಕುಮಾರಪ್ಪ. ಆಧುನಿಕ ಜಗತ್ತು ಅವಲಂಬಿಸಿದ್ದ ವಸ್ತುಗಳ ಬದಲಾಗಿ ಪರ್ಯಾಯ ವಸ್ತುಗಳ ಹುಡುಕಾಟದಲ್ಲಿ ತೊಡಗಿ ಕೃಷಿಯಲ್ಲಿ ರಸಾಯನಿಕ ಗೊಬ್ಬರಗಳ ಬದಲಾಗಿ ಹಸಿರೆಲೆ ಗೊಬ್ಬರ, ಸೀಮೆಎಣ್ಣೆ ಬದಲಾಗಿ, ನೈಸರ್ಗಿಕವಾಗಿ ಹೊಂಗೆ, ಬೇವು ಬೀಜಗಳಿಂದ ತಯಾರಿಸಿದ ತೈಲಗಳನ್ನು ದೀಪಗಳಿಗೆ ಬಳಸಲು ಉತ್ತೇಜನ ನೀಡಿದರು ಎಂದು ತಿಳಿಸಿದರು.

**ಸುಧಾರಿತ ನೇಗಿಲು ಅವಿಷ್ಕಾರ:** ಟ್ರ್ಯಾಕ್ಟರ್ ಬದಲಾಗಿ ರೈತರಿಗೆ ಅನೇಕ ಸುಧಾರಿತ ನೇಗಿಲು ಗಳನ್ನು ಆವಿಷ್ಕರಿಸಿದರು. ಸಾಬೂನು ಬಳಸುವ ಬದಲು ವನಸ್ಪತಿ ಬಳಸಲಾರಂಭಿಸಿದರು. ಉರವಲಿ ನಂತೆ ಬಳಕೆಯಾಗುತ್ತಿದ್ದ ಕಬ್ಬಿನ ಸಿಪ್ಪೆಯನ್ನು ಕಾಗದ ಉತ್ಪಾದನೆಗೆ ಬಳಸಿ ಇತರರಿಗೆ ಪ್ರೇರಣೆಯಾದರು ಎಂದರು.

**ತಂತ್ರಜ್ಞಾನ 10 ವರ್ಷಕ್ಕೆ ದ್ವಿಗುಣ:** ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತ ಮುಖ್ಯ ಗ್ರಂಥ ಪಾಲಕ ಡಾ. ಸಿ.ಪಿ. ರಾಮಶೇಷ ಗೃಹ ಪುಸ್ತಕ ಭಂಡಾರ ಕುರಿತು ಮಾತನಾಡಿ, ಸಂಶೋಧನೆಗಳಿಗೆ ಬಹಳ ಮುಖ್ಯವಾಗಿ ಮುದ್ರಿತ ಗ್ರಂಥಗಳ ಅವಶ್ಯಕ. ಪ್ರತಿಯೊಂದು ಪುಸ್ತಕ ವ್ಯಕ್ತಿತ್ವ ರೂಪುಗೊಳ್ಳಲು ಸಹಾಯ ಮಾಡುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಪ್ರತಿ 10 ವರ್ಷಕ್ಕೆ ದ್ವಿಗುಣಗೊಳ್ಳುತ್ತದೆ. ಓದು ನಿರಂತರ ಒಂದು ತಪಸ್ಸು ಇದ್ದಂತೆ ಹಾಗೂ ಒಂದು ಸಾಹಸ ಇದ್ದಂತೆ ಅದಕ್ಕೆ ಮುಕ್ತಾಯ ಇರುವುದಿಲ್ಲ ಎಂದರು.

ವಿದ್ಯುನ್ಮಾನಗಳ ಅಭಿವೃದ್ಧಿಯಾದ ಮೇಲೆ ಗ್ರಂಥಾಲಯಗಳಲ್ಲಿ ಪುಸ್ತಕ ಓದುವುದು ಕಡಿಮೆಯಾಗುತ್ತಾ ಬಂದಿದ್ದು, ಪುಸ್ತಕ ಪ್ರಾಧಿಕಾರ ಹಾಗೂ ಸರ್ಕಾರ ವೈಯಕ್ತಿಕ ಗ್ರಂಥ ಸಂಗ್ರಹಕ್ಕೆ ಯೋಜನೆಗಳನ್ನು ರೂಪಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮವನ್ನು ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಕೃಷ್ಣಮೂರ್ತಿ ಹನೂರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದೀನಬಂಧು ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ್, ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಜಿ. ಮಂಜುನಾಥ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಇದ್ದರು.



ಚಾಮರಾಜನಗರದ ಸಮೀಪವಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮೈ.ವಿ.ವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಜಿ.ಎಂ. ಬಸವರಾಜು ಮಾತನಾಡಿದರು.

### ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ್ ಅಭಿಮತ

# ಜ್ಞಾನದ ಪ್ರಸಾರಕ್ಕಾಗಿ ಪ್ರಚಾರೋಪನ್ಯಾಸ

■ ವಿಜಯವಾಣಿ ಸುದ್ದಿಜಾಲ ಚಾಮರಾಜನಗರ

ಜ್ಞಾನವನ್ನು ಪ್ರಸಾರ ಮಾಡುವ ಉದ್ದೇಶದಿಂದ ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ್ ತಿಳಿಸಿದರು.

ನಗರದ ಹೊರವಲಯದ ಬೇಡರಪುರ ಬಳಿ ಇರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾಲಯ 100 ವರ್ಷಗಳಿಂದಲೂ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಪ್ರೊ.ರಾಲೋ ಅವರು ಅಮೆರಿಕ ವಿಶ್ವವಿದ್ಯಾಲಯದ ಸಮ್ಮೇಳನದಲ್ಲಿ ಭಾಗವಹಿಸಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಇದಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸ್ಪಂದನೆ ದೊರಕಿತು ಎಂದು ತಿಳಿಸಿದರು.



ಬೇಡರಪುರ ಬಳಿಯ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಿದ್ದ ಪ್ರಚಾರೋಪನ್ಯಾಸದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಎಂ.ಜಿ.ಬಸವರಾಜು ಮಾತನಾಡಿದರು. ಮಂಜುನಾಥ್, ಜಯದೇವ, ಸಿ.ಪಿ.ರಾಮಶೇಷ ಇದ್ದರು.

> ಪ್ರಚಲಿತ ವಿದ್ಯಮಾನಗಳನ್ನು ತಿಳಿಯಲು ಪತ್ರಿಕೆಗಳು ಅವಶ್ಯಕ. ಸಾಹಿತ್ಯ ಆಕರಗಳು, 160 ವಿದೇಶಿ ಹಾಗೂ 530 ದೇಶೀಯ ನಿಯತಕಾಲಿಕೆಗಳನ್ನು ತರಿಸಲಾಗುತ್ತಿತ್ತು. ಈಗ ಅವುಗಳನ್ನು ತರಿಸುತ್ತಿಲ್ಲ. ಮುದ್ರಿತ ಗ್ರಂಥಗಳು ಹಾಗೂ ಪತ್ರಿಕೆಗಳು ನಮಗೆ ಆನಂದ ನೀಡುತ್ತವೆ. ಸಂಶೋಧಕರಿಗೆ ಮುದ್ರಿತ ಗ್ರಂಥಗಳು ಬಹಳ ಮುಖ್ಯ.
>
> । ಡಾ.ಸಿ.ಪಿ.ರಾಮಶೇಷ ನಿವೃತ್ತ ಮುಖ್ಯ ಗ್ರಂಥಪಾಲಕ, ಮೈಸೂರು ವಿವಿ

ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಹಿಂದೆ ಜ್ಞಾನದ ಪ್ರಸಾರ ಹಾಗೂ ವಿಚಾರ ವಿನಿಮಯಗಳು ಹಳ್ಳಿಗಳಲ್ಲಿ ಹೆಚ್ಚಾಗಿ ನಡೆಯುತ್ತಿತ್ತು. ಇಂದು ವಿಶ್ವವಿದ್ಯಾಲಯಗಳು ಸಂಶೋಧನಾಂಗ, ಬೋಧನಾಂಗ ಹಾಗೂ ಪ್ರಸಾರಾಂಗ ಎಂಬ ಮೂರು ಜ್ಞಾನದ ಪ್ರಚಾರವನ್ನು ಕೈಗೊಂಡಿವೆ ಎಂದು ತಿಳಿಸಿದರು.

ಗೃಹಪುಸ್ತಕ ಭಂಡಾರ ಕುರಿತು ಉಪನ್ಯಾಸ ನೀಡಿದ ನಿವೃತ್ತ ಮುಖ್ಯ ಗ್ರಂಥಪಾಲಕ ಡಾ.ಸಿ.ಪಿ.ರಾಮಶೇಷ, ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ನಿಘಂಟುಗಳನ್ನು ಇಟ್ಟುಕೊಂಡು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಜಿ.ಬಸವರಾಜು, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ದೀನಬಂಧು ಸಂಸ್ಥೆಯ ಪ್ರೊ.ಜಿ.ಎಸ್.ಜಯದೇವ ಇತರರಿದ್ದರು.

# ಅಂಬೇಡ್ಕರ್ ಬದುಕು ಎಲ್ಲರಿಗೂ ದಾರಿದೀಪ

### ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಪರಿನಿರ್ವಾಣ ದಿನಾಚರಣೆಯಲ್ಲಿ ಪ್ರೊ.ಶಿವಬಸವಯ್ಯ ಅಭಿಮತ

ಚಾಮರಾಜನಗರ, ಡಿ.9 - ಡಾ.ಬಿ.ಆರ್.ಅಂಬೇಡ್ಕರ್‌ರ ಜೀವನವೇ ಎಲ್ಲರಿಗೂ ದಾರಿದೀಪ. ಹೀಗಾಗಿ ಇಂತಹ ಶ್ರೇಷ್ಠರ ಆದರ್ಶಗಳನ್ನು ಯುವ ಸಮುದಾಯ ಅಳವಡಿಸಿಕೊಳ್ಳಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸುವರ್ಣ ಗಂಗೋತ್ರಿ ಆವರಣದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 63ನೇ ಮಹಾ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ದೇಶದಲ್ಲಿ ನೆಲೆಯೂರಿದ್ದ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಹಾಗೂ ಅಸಮಾನತೆ ವಿರುದ್ಧ ಹೋರಾಡಿ, ಪ್ರತಿಯೊಬ್ಬರಿಗೂ ಸಮಾನ ಹಕ್ಕು ಸ್ಥಾಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಜಗತ್ತಿನಲ್ಲೇ ಮಾದರಿಯಾದ ಸಂವಿಧಾನ ರಚಿಸಿ, ತನ್ಮೂಲಕ ದೇಶಕ್ಕೊಂದು ದಿಕ್ಸೂಚಿ ತೋರಿಸಿದ್ದಾರೆ. ಸಾಮಾಜಿಕ ಹೋರಾಟಗಾರರಾಗಿ, ದಾರ್ಶನಿಕ, ತತ್ವಜ್ಞಾನಿ, ಆರ್ಥಿಕ ಹಾಗೂ ಕಾನೂನು ತಜ್ಞರಾಗಿ ಅಂಬೇಡ್ಕರ್ ದೇಶಕ್ಕೆ ನೀಡಿದ ಕೊಡುಗೆ ಅಪಾರ. ಮುಂದಿನ ಪೀಳಿಗೆಗೆ ಅವರ ಬದುಕು ಅನುಕರಣೀಯ ಎಂದರು.

ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಅಂಬೇಡ್ಕರ್ ದೇಶದ ಅನನ್ಯ ಚೇತನಗಳಲ್ಲಿ ಒಬ್ಬರು. ಭಾರತದ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಇಂಥ ಅಪ್ರತಿಮರು ಎಲ್ಲರಿಗೂ ಮಾದರಿ. ಹೀಗಾಗಿ ವಿದ್ಯಾರ್ಥಿಗಳು ಅಂಬೇಡ್ಕರ್ ವಿಚಾರಧಾರೆಗಳನ್ನು ಜೀವನದಲ್ಲಿ ರೂಢಿಸಿಕೊಂಡು, ಅವರ ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.

ಕನ್ನಡ ಉಪನ್ಯಾಸಕ ಬಸವಣ್ಣ ಅಂಬೇಡ್ಕರ್ ಕುರಿತು ಮಾತನಾಡಿದರು. ಅರ್ಥಶಾಸ್ತ್ರ ಉಪನ್ಯಾಸಕ ಮಲ್ಲಿಕಾರ್ಜುನ ಸ್ವಾಮಿ ಬುದ್ಧವಂದನೆಯನ್ನು ಬೋಧಿಸಿದರು. ಉಪನ್ಯಾಸಕರಾದ ಸೌಮ್ಯ, ಡಾ.ಸುನಿಲ್‌ಕುಮಾರ್, ಎಂ.ಮಹೇಶ್‌ಕುಮಾರ್, ಸಂಗಪ್ಪ, ಚೇತನ್, ವಾಣಿಶ್ರೀ, ಬಾಲಕೃಷ್ಣ, ಸಚಿನ್, ಚಾಮರಾಜು, ಮಹದೇವಮೂರ್ತಿ, ಪಿ.ರಾಣಿ ಮತ್ತಿತರರು ಭಾಗವಹಿಸಿದ್ದರು.



ಚಾಮರಾಜನಗರ ಸಮೀಪದ ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 63ನೇ ಮಹಾ ಪರಿನಿರ್ವಾಣ ದಿನ ಆಚರಿಸಲಾಯಿತು. ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಉಪನ್ಯಾಸಕರಾದ ಬಸವಣ್ಣ, ಡಾ.ಮಲ್ಲಿಕಾರ್ಜುನಸ್ವಾಮಿ, ಸೌಮ್ಯ, ಡಾ.ಸುನಿಲ್‌ಕುಮಾರ್, ಎಂ.ಮಹೇಶ್‌ಕುಮಾರ್ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು ಮಿತ್ರ

ಮಂಗಳವಾರ 13 ಮಾರ್ಚ್ 2018

### ಮೈಸೂರು ವಿವಿ 98ನೇ ಘಟಿಕೋತ್ಸವ

# 207 ಮಂದಿಗೆ 348 ಚಿನ್ನದ ಪದಕ, 168 ನಗದು ಪುರಸ್ಕಾರ

ಮೈಸೂರು, ಮಾ.12(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 207 ಮಂದಿ 348 ಚಿನ್ನದ ಪದಕ ಹಾಗೂ 168 ನಗದು ಬಹುಮಾನಗಳಿಗೆ ಭಾಜನರಾದರು.

ಈ ಪೈಕಿ ಎಂಎಸ್‌ಸಿ ರಸಾಯನಶಾಸ್ತ್ರ ವಿಭಾಗದ ಸಿ.ಎನ್.ಶಾಂಭವಿ ಸೇರಿದಂತೆ ಅನೇಕರು ಹೆಚ್ಚು ಪದಕ ಮತ್ತು ನಗದು ಬಹುಮಾನ ಮುಡಿಗೇರಿಸಿಕೊಳ್ಳುವ ಮೂಲಕ ಶೈಕ್ಷಣಿಕ ಸಾಧನೆ ಮೆರೆದರು. ಸೋಮವಾರ ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಘಟಿಕೋತ್ಸವದಲ್ಲಿ ಪದಕ ಮತ್ತು ನಗದು ಬಹುಮಾನದೊಂದಿಗೆ ಸಾಧನೆ ತೋರಿದವರ ಸಂಭ್ರಮ ಮನೆ ಮಾಡಿತ್ತು.

ಪದಕಗಳು ಮತ್ತು ಬಹುಮಾನಗಳನ್ನು ಬಾಚಿಕೊಳ್ಳುವಲ್ಲಿ ಶೇ.70ರಷ್ಟು ವಿದ್ಯಾರ್ಥಿನಿಯರೇ ಆಗಿರುವುದು ವಿಶೇಷ. ಈ ಪೈಕಿ ಸ್ನಾತಕೋತ್ತರ ವಿಜ್ಞಾನ ವಿಭಾಗದಲ್ಲಿ ಮೈಸೂರು ವಿವಿಯ ಮಾನಸಗಂಗೋತ್ರಿಯ ರಸಾಯನ ಶಾಸ್ತ್ರ ವಿಭಾಗದ ಸಿ.ಎನ್.ಶಾಂಭವಿ ಹೆಚ್ಚು ಪದಕ ಮತ್ತು ಬಹುಮಾನ ಪಡೆದ ಕೀರ್ತಿಗೆ ಭಾಜನರಾಗಿದ್ದಾರೆ. ಪದವಿ ಹಂತದ ವಿಜ್ಞಾನ ವಿಭಾಗದಲ್ಲಿ ಟೆರಿಷಿಯನ್ ಕಾಲೇಜಿನ ಬಿಎಸ್‌ಸಿ (ಪಿಸಿಎಂ) ವಿದ್ಯಾರ್ಥಿನಿ ಡಿ.ಪಿ.ಮಾನಸ ಹೆಚ್ಚು ಪದಕ ಮತ್ತು ಬಹುಮಾನ ತಮ್ಮದಾಗಿಸಿಕೊಂಡಿದ್ದಾರೆ.

ಸ್ನಾತಕೋತ್ತರ ಕಲಾ ವಿಭಾಗದಲ್ಲಿ ಚಾಮರಾಜನಗರದ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿನಿ ಕೆ.ಜಿ.ವನಜಾ ಹಾಗೂ ಪದವಿ ಹಂತದ ಕಲಾ ವಿಭಾಗದಲ್ಲಿ ಮರಿಮಲ್ಲಪ್ಪ ಕಾಲೇಜಿನ ವಿದ್ಯಾರ್ಥಿನಿ ಆರ್.ಧನಲಕ್ಷ್ಮೀ ಹೆಚ್ಚು ಪದಕ ಮತ್ತು ಬಹುಮಾನ ಪಡೆದುಕೊಂಡಿದ್ದಾರೆ.

> “ ಶೈಕ್ಷಣಿಕ ಸಾಧನೆ ಮಾಡಬೇಕೆಂಬ ಗುರಿ ಇತ್ತು. ಹೀಗಾಗಿ ಏಕಾಗ್ರತೆ ಮತ್ತು ಆಸಕ್ತಿಯಿಂದ ಓದುವುದನ್ನು ರೂಢಿಸಿಕೊಂಡಿದ್ದೆ. ನನ್ನ ಶೈಕ್ಷಣಿಕ ಸಾಧನೆಗೆ ಪೋಷಕರೇ ಬೆನ್ನೆಲುಬು. ಪೋಷಕರು ಅಂತಹ ವಿದ್ಯಾವಂತರೇನಲ್ಲ. ನಮ್ಮ ತಂದೆ ಎಸ್‌ಎಸ್‌ಎಲ್‌ಸಿಯಷ್ಟೇ ಓದಿದ್ದು, ವ್ಯವಸಾಯದೊಂದಿಗೆ ಊರಿನಲ್ಲಿ ಹೋಟೆಲ್ ನಡೆಸುತ್ತಿದ್ದಾರೆ. ಪಿಹೆಚ್.ಡಿ ಮಾಡಬೇಕು, ಜತೆಗೆ ಐಐಟಿಗೆ ಸೇರಬೇಕೆಂಬ ಆಕಾಂಕ್ಷೆ ಇದೆ. ಬೋಧನಾ ಕ್ಷೇತ್ರ ನನ್ನ ಆಸಕ್ತಿಯಾಗಿದ್ದು, ಮೂಲ ವಿಜ್ಞಾನವನ್ನು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ಪಸರಿಸಬೇಕು ಎಂಬ ಅಭಿಲಾಷೆಯೂ ಇದೆ.
>
> –ಸಿ.ಎನ್.ಶಾಂಭವಿ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ ಘಟಿಕೋತ್ಸವದಲ್ಲಿ ಹೆಚ್ಚು ಪದಕ ಮತ್ತು ನಗದು ಬಹುಮಾನ ಗಳಿಸಿದ ವಿದ್ಯಾರ್ಥಿನಿಯರಾದ (ಎಡದಿಂದ) ಕೆ.ಜಿ.ವನಜಾ, ವರ್ಷಾ ರಾಜ್‌ಕುಮಾರ್, ಡಿ.ಪಿ.ಮಾನಸ, ಸಿ.ಎನ್.ಶಾಂಭವಿ, ಆರ್.ಧನಲಕ್ಷ್ಮೀ ಅವರನ್ನು ಚಿತ್ರದಲ್ಲಿ ಕಾಣಬಹುದು.

> “ ಶೈಕ್ಷಣಿಕ ಸಾಧನೆಯ ಹಿಂದಿನ ಪ್ರೇರಣೆ ಪ್ರಶಸ್ತಿಯಲ್ಲ. ಪ್ರಾಮಾಣಿಕ ಮತ್ತು ಪರಿಶ್ರಮದಿಂದ ಓದಿನಲ್ಲಿ ತೊಡಗಿಕೊಳ್ಳುತ್ತಿದ್ದೆ. ಪ್ರಶಸ್ತಿಗೆಂದು ಓದದೇ ಜ್ಞಾನಕ್ಕಾಗಿ ಓದಿದೆ. ಇದೀಗ ತಂತಾನೇ ಪ್ರಶಸ್ತಿ ಒಲಿದು ಬಂದಿದೆ. ನನ್ನ ಈ ಸಾಧನೆಗೆ ಪೋಷಕರು ಮಹತ್ವದ ಪಾತ್ರ ವಹಿಸಿದ್ದಾರೆ. ಪಿಯುನಲ್ಲೂ ಶೇ.90ರಷ್ಟು ಅಂಕ ಗಳಿಸಿ, ತೇರ್ಗಡೆಯಾಗಿದ್ದೇನೆ. ಬಿಎಸ್‌ಸಿ ವೇಳೆಯಲ್ಲಿ ನನ್ನ ಶೈಕ್ಷಣಿಕ ಚಟುವಟಿಕೆ ಗಮನಿಸಿದ್ದ ಶಿಕ್ಷಕರು ಹೇಳುತ್ತಿದ್ದಂತೆ ಇಂದು ಹಲವು ಪ್ರಶಸ್ತಿಗಳು ಸಂದಿದ್ದು, ತುಂಬಾ ಸಂತಸ ಉಂಟು ಮಾಡಿದೆ.
>
> –ಡಿ.ಪಿ.ಮಾನಸ

> “ ಕುಟುಂಬ ಸದಸ್ಯರ ಬೆಂಬಲದಿಂದ ಇಂದು ಈ ಮಟ್ಟಕ್ಕೇರಿದ್ದೇನೆ. ಮುಂದೆ ಕೆಎಎಸ್, ಐಎಎಸ್ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬೇಕೆಂಬ ಹಂಬಲವಿದೆ. ಆದರೆ ಇದಕ್ಕೆ ಅಗತ್ಯವಿರುವ ತರಬೇತಿಗೆ ದುಬಾರಿ ಶುಲ್ಕ ಭರಿಸುವಷ್ಟು ನಮ್ಮ ಕುಟುಂಬ ಆರ್ಥಿಕವಾಗಿ ಸಬಲವಾಗಿಲ್ಲ. ನಮ್ಮ ಕುಟುಂಬದಲ್ಲಿ ಇಷ್ಟು ಓದಿದ್ದು ನಾನೊಬ್ಬಳೆ. ಪ್ರತಿದಿನ 4 ತಾಸು ಓದುತ್ತಿದ್ದೆ. ಪರೀಕ್ಷಾ ಸಂದರ್ಭದಲ್ಲಿ ಮಾತ್ರ 8 ಗಂಟೆ ಅಧ್ಯಯನದಲ್ಲಿ ತೊಡಗುತ್ತಿದ್ದೆ.
>
> –ಕೆ.ಜಿ.ವನಜಾ

**ಸಿ.ಎನ್.ಶಾಂಭವಿ:** ಮೈಸೂರು ವಿವಿ ಮಾನಸಗಂಗೋತ್ರಿಯ ರಸಾಯನಶಾಸ್ತ್ರದ ವಿಭಾಗದಲ್ಲಿ (ಎಂಎಸ್‌ಸಿ) ಸಿ.ಎನ್.ಶಾಂಭವಿ ತೋರಿದ ಶೈಕ್ಷಣಿಕ ಸಾಧನೆಗೆ 13 ಚಿನ್ನದ ಪದಕಗಳು ಹಾಗೂ 4 ನಗದು ಬಹುಮಾನಗಳು ಸಂದಿವೆ. ಮೂಲತಃ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಚಿಕ್ಕಬಾಗಿಲು ಗ್ರಾಮದ ಶಾಂಭವಿ, ನಾಗರಾಜು ಮತ್ತು ರಾಜಮ್ಮ ದಂಪತಿಯ ಹಿರಿಯ ಪುತ್ರಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕೆಎಂ ದೊಡ್ಡಿಯ ಭಾರತೀ ಕಾಲೇಜಿನಲ್ಲಿ ಬಿಎಸ್‌ಸಿ ವ್ಯಾಸಂಗ ಮಾಡಿರುವ ಇವರು ಪದವಿಯನ್ನು 3 ಪದಕ ಮತ್ತು 3 ನಗದು ಬಹುಮಾನದೊಂದಿಗೆ ಪೂರೈಸಿದ ಹಿರಿಮೆಗೂ ಪಾತ್ರರಾಗಿದ್ದಾರೆ.

**ಡಿ.ಪಿ.ಮಾನಸ:** ಟೆರಿಷಿಯನ್ ಕಾಲೇಜಿನ ಪಿಸಿಎಂನಲ್ಲಿ ಡಿ.ಪಿ.ಮಾನಸ ಅವರ ಶೈಕ್ಷಣಿಕ ಸಾಧನೆಗೆ 7 ಚಿನ್ನದ ಪಕದ ಹಾಗೂ 9 ನಗದು ಬಹುಮಾನ ದಕ್ಕಿವೆ. ಮೈಸೂರು ಲಲಿತಮಹಲ್ ನಗರದ ನಿವಾಸಿಯಾದ ಇವರು ಡಿ.ಪ್ರಕಾಶ್ ಮತ್ತು ವೈ.ಎನ್.ನೀಲು ದಂಪತಿ ಪುತ್ರಿ, ಪ್ರಸ್ತುತ ಇವರ ಮಾನಸಗಂಗೋತ್ರಿಯಲ್ಲಿ ಎಂಎಸ್‌ಸಿ ರಸಾಯನಶಾಸ್ತ್ರ ವಿಭಾಗದಲ್ಲಿ ವ್ಯಾಸಂಗ ಮುಂದುವರೆಸಿದ್ದಾರೆ.

**ಕೆ.ಜಿ.ವನಜಾ:** ಚಾಮರಾಜನಗರದ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರದ ಕನ್ನಡ ವಿಭಾಗದಲ್ಲಿ ಕೆ.ಜಿ.ವನಜಾ ಅವರ ಸಾಧನೆಗೆ 8 ಪದಕ ಮತ್ತು 4 ನಗದು ಬಹುಮಾನ ಒಲಿದಿವೆ. ಇವರು ಚಾಮರಾಜನಗರ ಜಿಲ್ಲೆಯ ಕಾಗಲವಾಡಿ ಗ್ರಾಮದ ಎನ್.ಗುರುಸ್ವಾಮಿ ಮತ್ತು ಡಿ.ವಿ.ರತ್ನಮ್ಮ ದಂಪತಿ ಪುತ್ರಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಕಾಗಲವಾಡಿ ಗ್ರಾಮದಲ್ಲಿ ಪೂರೈಸಿದ ಇವರು ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪಿಯು ಹಾಗೂ ಪದವಿ ಶಿಕ್ಷಣ ಪಡೆದರು.

**ಆರ್.ಧನಲಕ್ಷ್ಮೀ:** ಮೈಸೂರಿನ ಮರಿಮಲ್ಲಪ್ಪ ಪ್ರಥಮ ದರ್ಜೆ ಕಾಲೇಜಿನ ಬಿಎ ವ್ಯಾಸಂಗದಲ್ಲಿ ಆರ್.ಧನಲಕ್ಷ್ಮೀ ತೋರಿದ ಶೈಕ್ಷಣಿಕ ಸಾಧನೆಗೆ 9 ಚಿನ್ನದ ಪದಕ ಹಾಗೂ 8 ನಗದು ಬಹುಮಾನಗಳು ಸಂದಿವೆ. ಇದೀಗ ಇವರು ಮಾನಸ ಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ತಮ್ಮ ವಿದ್ಯಾಭ್ಯಾಸ ಮುಂದುವರೆಸಿದ್ದಾರೆ.

# ಪದವಿ ಸ್ವೀಕರಿಸಿದ 27502 ಅಭ್ಯರ್ಥಿಗಳು

## 575 ಮಂದಿಗೆ ಪಿಎಚ್‌ಡಿ ಪ್ರದಾನ



**ಮೈಸೂರು:** ಶತಮಾನೋತ್ಸವ ಸಂಭ್ರಮ ಆಚರಿಸಿಕೊಂಡ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೋಮವಾರ ಜರುಗಿದ 98ನೇ ಘಟಿಕೋತ್ಸವದಲ್ಲಿ ವಿವಿ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲ ವಜುಭಾಯಿ ರೂಢಾಬಾಯಿ ವಾಲಾರ ಅನುಪಸ್ಥಿತಿಯಲ್ಲಿ 575 ಪಿಎಚ್.ಡಿ ಸೇರಿ 27502 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವಿಶ್ವವಿದ್ಯಾನಿಲಯದ ಕಾರ್ಯಸೌಧ ದಲ್ಲಿ ಸೋಮವಾರ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ವಾಲಾ, ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಗೈರುಹಾಜರಿಯಲ್ಲೇ ಲೋಕಾ ಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಪದವಿ ಪ್ರದಾನ ಮಾಡಿ ದರು. ಮೂರು ದಶಕಗಳ ಬಳಿಕ ಗೌರವ ಡಾಕ್ಟರೇಟ್‌ಅನ್ನು ಯಾರಿಗೂ ಕೊಡ ಮಾಡಲಿಲ್ಲ. ವಿವಿ ಸಿಂಡಿಕೇಟ್ ಸಭೆಯಲ್ಲಿ ಪರಿಣಿತರ ಸಮಿತಿ ಕಳುಹಿಸಿದ್ದ ಪಟ್ಟಿಗೆ ಕೊನೆಯ

4ನೇ ಪುಟಕ್ಕೆ ▸▸

ಮೈಸೂರು ವಿವಿಯ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ನಿವೃತ್ತ ನ್ಯಾ.ಎನ್.ಸಂತೋಷ್ ಹೆಗ್ಡೆ ಅಭಿಮತ

# ಸಮಾಜ ಹೊಂದಿರುವ ಧೋರಣೆ ಭ್ರಷ್ಟಾಚಾರಕ್ಕೆ ಕಾರಣ

**ವಿಶ್ವವಾಣಿ ಸುದ್ದಿಮನೆ ಮೈಸೂರು**

ದೇಶದಲ್ಲಿ ಭ್ರಷ್ಟಾಚಾರ ಈ ಪ್ರಮಾಣದಲ್ಲಿ ಬೆಳೆಯಲು ಭ್ರಷ್ಟಾಚಾರದ ಬಗ್ಗೆ ಸಮಾಜ ಹೊಂದಿರುವ ಧೋರಣೆಯೇ ಕಾರಣ. ಇವತ್ತಿನ ಸಮಾಜಕ್ಕೆ ನ್ಯಾಯಯುತವಾದ ಸಂಪತ್ತು ಯಾವುದು, ಅನ್ಯಾಯದ ದ್ರವ್ಯ ಯಾವುದು ಎಂಬ ವಿವೇಚನೆಯೇ ಇಲ್ಲದಂತಾಗಿದೆ ಎಂದು ನಿವೃತ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದರು. ಸಮಾಜದಲ್ಲಿ ಯಾರೊಬ್ಬರೂ ಭ್ರಷ್ಟಾಚಾರ ಒಂದು ಕೇಡು ಎಂದು ಬಗೆಯುವುದೇ ಇಲ್ಲ.

ಎಲ್ಲಿಯವರೆಗೆ ಸಮಾಜ ನ್ಯಾಯಯುತ ಸಂಪತ್ತು ಮತ್ತು ನ್ಯಾಯ ಬಾಹಿರ ಸಂಪತ್ತಿನ ನಡುವಿನ ವ್ಯತ್ಯಾಸವನ್ನು ಗುರುತಿಸುವುದಿಲ್ಲವೋ ಅಲ್ಲಿಯವರೆಗೆ ನಾವು ಭ್ರಷ್ಟಚಾರದ ವಿರುದ್ಧದ ನಮ್ಮ ಸಮರದಲ್ಲಿ ಜಯಗಳಿಸಲು ಸಾಧ್ಯವಾಗದು ಎಂದು ಅಭಿಪ್ರಾಯಪಟ್ಟರು.

ಇವತ್ತಿನ ಸಮಾಜ ಅಲ್ಲೋಲಕಲ್ಲೋಲದ ಪರ್ವದಲ್ಲಿ ಸಾಗುತ್ತಿದೆ.ನಮಗೆ ಮಾರ್ಗದರ್ಶಕರಾಗಿ ಒಬ್ಬ ಮುತ್ಸದ್ದಿಯೂ ಇಲ್ಲ. ರಾಜಕಾರಣಿಗಳು ಯಥೇಚ್ಛವಾಗಿದ್ದಾರೆ. ಆದರೆ, ಮುತ್ಸದ್ದಿಗಳ ಕೊರತೆಯಿದೆ ಎಂದು ವಿಷಾದಿಸಿದರು. ಇಂದು ಸಮಾಜ ಧರ್ಮ, ಜಾತಿ, ಶ್ರೀಮಂತಿಕೆ ಮತ್ತು ಬಡತನವೆಂಬ ದ್ವಂದ್ವಗಳಲ್ಲಿ ಸಿಲುಕಿಕೊಂಡಿದೆ. ಈ ರಾಷ್ಟ್ರದ ಭಾವಿ ರಕ್ಷಕರು ನೀವೇ. ಹಾಗಾಗಿ, ರಾಷ್ಟ್ರದ ಸೂತ್ರ ಹಿಡಿಯಲು ನೀವೆಲ್ಲ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಕರೆ ನೀಡಿದರು.

**ಅಸಮಾನತೆ ತೊಡೆದು ಹಾಕಿ:** ಸಾಮಾಜಿಕ ಸ್ತರವೇಶಕ್ಕೆ ನೀವೆಲ್ಲ ಪ್ರವೇಶ ಮಾಡುತ್ತಿರುವುರಿ, ಇಂಥ ತಾರತಮ್ಯವುಳ್ಳ ಸಮಾಜದ ಅಸಮಾನತೆಗಳನ್ನು ತೊಡೆದುಹಾಕಿ ಹಸಿವು ಮತ್ತು ಕಣ್ಣೀರನ್ನು ಹೋಗಲಾಡಿಸುವ ದಿಸೆಯಲ್ಲಿ ಕಂಕಣಬದ್ಧರಾಗಬೇಕು ಎಂದರು.

**ಮೌಲ್ಯಾಧಾರಿತ ಸಮಾಜ ನಿರ್ಮಾಣ:** ಮೌಲ್ಯಾಧಾರಿತ ಸಮಾಜ ನಿರ್ಮಾಣ ಮಾಡಬೇಕು. ನಮ್ಮ ಸಂವಿಧಾನದಲ್ಲಿ ಕೊಡಮಾಡಿರುವಂಥ ಮೌಲ್ಯಗಳವು. ಭಾರತದ ಸಂವಿಧಾನವೆಂಬುದು ಕೇವಲ ಹಕ್ಕುಗಳ ಮಸೂದೆಯಲ್ಲ, ಅದು ಒಂದು ಪವಿತ್ರವಾದ ದಸ್ತಾವೇಜು.

ಯಾವುದೇ ಧರ್ಮಗ್ರಂಥದಷ್ಟೇ ಪವಿತ್ರ ಅದು. ಭಾರತದ ಐಕ್ಯತೆ ಕಾಪಾಡಿ,ಧಾರ್ಮಿಕ ಹಾಗೂ ಭಾಷಿಕ ಸೌಹಾರ್ದತೆ ಬೆಳೆಸಿಕೊಳ್ಳಬೇಕು .

ನೀವು ಎಷ್ಟೇ ಬಿಡುವಿಲ್ಲದವರಾಗಿದ್ದರೂ ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸುವ ದಿಸೆಯಲ್ಲಿ ಸ್ವಲ್ಪ ಆಲೋಚಿಸಿ ಎಂದರು. ದೇಶ ಸಾಧಿಸಿರುವ ಬೆಳವಣಿಗೆಯಿಂದ ಏನು ಪ್ರಯೋಜನವಾದಂತಾಯಿತು. ವಾಸ್ತವವಾಗಿ ನಗರ ಪ್ರದೇಶದವರು ಮತ್ತು ಗ್ರಾಮೀಣ ಜನ, ಶ್ರೀಮಂತರು-ಬಡವರ ನಡುವೆ ಇಷ್ಟೊಂದು ವ್ಯತ್ಯಾಸವಿದೆ.

ಈ ಅಂತರವನ್ನು ಕಡಿಮೆ ಮಾಡಬೇಕು ಎಂದರು. ಸಿರಿವಂತಿಕೆಯೆಂಬುದು ಯಶಸ್ಸಿನ ದ್ಯೋತಕ ಎಂದು ಇಂದಿನ ಸಮಾಜ ಪುರಸ್ಕರಿಸುತ್ತದೆ. ಸಿರಿವಂತಿಕೆ ಪ್ರಾಪ್ತವಾದದ್ದು, ಹೇಗೆ ಎಂಬುದರ ಬಗ್ಗೆ ಅದು ತಲೆಕೆಡಿಸಿಕೊಳ್ಳುವುದಿಲ್ಲ. ಶ್ರಮದಿಂದ ದುಡಿದು ನ್ಯಾಯಯುತವಾಗಿ ಶ್ರೀಮಂತರಾದವರೂ ಒಂದೇ.

ಅಡ್ಡದಾರಿ ಹಿಡಿದು ಹಣ ಸಂಪಾದಿಸಿದವರೂ ಒಂದೇ. ಈ ರೀತಿ ಸಮಾಜದಲ್ಲಿ ವಿವೇಚನೆ ಗೈರು ಹಾಜರಾಗಿರುವುದರಿಂದ ಜನರು ಹೆಚ್ಚು ಭ್ರಷ್ಟಾಚಾರದ ಕಡೆ ವಾಲುತ್ತಿದ್ದಾರೆ ಎಂದು ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ ತೊಂಬತ್ತೆಂಟನೆಯ ವಾರ್ಷಿಕ ಘಟಿಕೋತ್ಸವದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು.

## ಮಾನವಶಾಸ್ತ್ರ ವಿಭಾಗದಲ್ಲಿ 1 ಚಿನ್ನ

ಪದವಿ, ಪದಕ, ನಗದು ಬಹುಮಾನ ನನ್ನ ಮುಂದಿನ ಗುರಿಯನ್ನು ನನಸಾಗಿಸಲು ಪ್ರೋತ್ಸಾಹದಾಯಕವಾಗಿದೆ. ನಿರೀಕ್ಷೆಯಿರಲಿಲ್ಲ ಆ ಕಾರಣಕ್ಕಾಗಿ ಹೆಚ್ಚು ಸಂತಸವಾಗುತ್ತಿದೆ ಎಂದು ಮೈಸೂರು ವಿವಿ ಮಾನವಶಾಸ್ತ್ರ ವಿಭಾಗದಲ್ಲಿ 1 ಚಿನ್ನದ ಪದಕ, 1 ನಗದು ಬಹುಮಾನ ಸ್ವೀಕರಿಸಿದ ಪಿರಿಯಾಪಟ್ಟಣ ತಾಲೂಕಿನ ತೆಂಗಿನಕುಪ್ಪೆ ರಾಮೇಗೌಡ, ರತ್ನಮ್ಮ ದಂಪತಿಗಳ ಪುತ್ರ ಟಿ.ಆರ್.ಸುನೀಲ್ ಸಂತಸವ್ಯಕ್ತಪಡಿಸಿದರು.

## ಚಿನ್ನದ ಪದಕ ಸಿಗುವ ನಿರೀಕ್ಷೆಯಿರಲಿಲ್ಲ

ಪಠ್ಯಪುಸ್ತಕಗಳ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದೆ. ಅದರೊಂದಿಗೆ ಪ್ರಾಯೋಗಿಕವಾಗಿ ಅಭ್ಯಾಸ ಮಾಡಿದ್ದರಿಂದ ನೇರವಾಗಿಬಿಎಸ್ಸಿ ಪದವಿಯಲ್ಲಿ 7 ಚಿನ್ನದ ಪದಕ ಹಾಗೂ 9 ನಗದು ಬಹುಮಾನಗಳ ಪಡೆಯಲು ಸಾಧ್ಯವಾಯಿತು ಎಂದು ಡಿ.ಪಿ.ಮಾನಸ ಸಂತಸ ವ್ಯಕ್ತಪಡಿಸಿದರು. ಅಪ್ಪ ಪ್ರಕಾಶ್, ಅಮ್ಮ ನೀಲು ಅವರ ಒಬ್ಬಳೆ ಮಗಳು ಹಾಗಾಗೀ ನನ್ನ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದರು. ಮೈಸೂರಿನ ಲಲಿತಮಹಲ್‌ನಗರದವರಾಗಿದ್ದು, ತಂದೆ ಪ್ರಕಾಶ್ ತಿ.ನರಸಿಪುರದ ವಿದ್ಯೋದಯ ಕಾಲೇಜಿನ ಶಿಕ್ಷಕರಾಗಿದ್ದಾರೆ. ನನಗೆ ಬಿಎಸ್ಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಬಂದಿದ್ದು, ಖುಷಿಯಾಗಿತ್ತು. ಚಿನ್ನದ ಪದಕ ಸಿಗುವ ನಿರೀಕ್ಷೆಯಿರಲಿಲ್ಲ ತುಂಬ ಸಂತಸವಾಗುತ್ತಿದೆ ಎಂದು ತಿಳಿಸಿದರು.

## ಅಪ್ಪನ ಆಸೆ ಈಡೇರಿಸಿದ ಸಂತಸ

ನನ್ನ ಓದಿನ ಪರಿಶ್ರಮಕ್ಕೆ ಫಲ ಸಿಕ್ಕಿದೆ. ನನ್ನ ಓದಿಗೆ ಸ್ಫೂರ್ತಿಯಾದ ಗೆಳತಿ ತ್ರಿವೇಣಿ ಪ್ರೋತ್ಸಾಹ ಹೆಚ್ಚು ಹಾಗಾಗೀ ನನ್ನ ಪದಕವನ್ನು ಅವಳ ಹೆಸರಿನಲ್ಲಿ ಪಡೆಯಲು ನಾನು ಬಯಸುತ್ತೇನೆ ಎಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ 4 ಚಿನ್ನದ ಪದಕ ಹಾಗೂ 1 ನಗದು ಬಹುಮಾನ ಪಡೆದುಕೊಂಡ ಅಕ್ಷತಾ.ಜೆ ಸಂತಸವನ್ನು ವ್ಯಕ್ತಪಡಿಸಿದರು. ಮಧ್ಯಮ ಕುಟುಂಬ ನನ್ನ ಹಾಗೂ ಅಕ್ಕನ ವಿದ್ಯಾಭ್ಯಾಸಕ್ಕೆ ಅಪ್ಪ ಹೆಚ್ಚು ಶ್ರಮಿಸುತ್ತಿದ್ದರು. ಅದರಂತೆಯೇ ಅಕ್ಕ ಉತ್ತಮ ಶಿಕ್ಷಣ ಪಡೆದುಕೊಂಡರು ಅಕ್ಕನಿಗಿಂತ ನನ್ನ ಓದಿನ ಮೇಲೆ ಅಪ್ಪ ಹಾಗೂ ಅಮ್ಮ ಇಬ್ಬರಿಗೂ ಹೆಚ್ಚಿನ ನೀರಿಕ್ಷೆಯಿತು.

## ಬಡತನದಲ್ಲಿಯೇ ಅರಳಿದ ಚಿನ್ನದ ಹುಡುಗಿ

ಕನ್ನಡ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಚಾಮರಾಜನಗರ ಜಿಲ್ಲೆಯ ಕಾಗಲವಾಡಿ ಗ್ರಾಮದ ನಿವಾಸಿ ಎಸ್.ಗುರುಸ್ವಾಮಿ, ಡಿ.ವಿ.ರತ್ನಮ್ಮ ಅವರ ಕಿರಿಯ ಪುತ್ರಿ ಕೆ.ಜಿ.ವನಜಾ ಅವರು 8 ಚಿನ್ನದ ಪದಕ, 4 ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡರು. ರೇಷ್ಮೆ ಇಲಾಖೆ ನಿವೃತ್ತ ನೌಕರರ ಮಗಳಾದ ಇವರು ಅಪ್ಪನ ನಿವೃತ್ತಿ ಭತ್ಯದ ಹಣದಲ್ಲಿಯೇ ಅಮ್ಮನ ಕೂಲಿಯ ಹಣ ಹಾಗೂ ವಿಶೇಷ ಚೇತನ ಅಣ್ಣನ ಆರೋಗ್ಯ ಹೀಗೆ ಕುಟುಂಬಕ್ಕೆ ಆಧಾರವಾದ ನಿವೃತ್ತಿವೇತನದ ಹಣದಲ್ಲಿಯೇ ಉತ್ತಮ ಶಿಕ್ಷಣ ಪಡೆದವರಾಗಿದ್ದಾರೆ.



ಚಿನ್ನದ ಪದಕ ಮುಡಿಗೇರಿಸಿಕೊಂಡ ವನಿತೆಯರು.

| | | |
|---|---|---|
| NAME | Dr. A.Krishna Murthy |  |
| DESIGNATION | Visiting professor | |
| EDUCATIONAL QUALIFICATION | M.A. Ph.D., | |
| EXPERIENCE | | |
| E-MAIL | | |
| AREA OF SPECIALISATION | | |
| PROFILE | | |

| | | |
|---|---|---|
| NAME | BASVANNA M.S |  |
| DESIGNATION | Guest faculty | |
| EDUCATIONAL QUALIFICATION | M.A.,B.Ed.,M.Phil (Ph.D), NET, K.SET | |
| EXPERIENCE | | |
| E-MAIL | | |
| AREA OF SPECIALISATION | | |
| PROFILE | | |

| | | |
|---|---|---|
| NAME | **Dr. MAHESHBABU. P** |  |
| DESIGNATION | Guest faculty | |
| EDUCATIONAL QUALIFICATION | M.A., M.Ed., NET, Ph.D | |
| EXPERIENCE | | |
| E-MAIL | maheshbabu.p2012@gmail.com | |
| AREA OF SPECIALISATION | | |
| PROFILE | | |

| | | |
|---|---|---|
| NAME | **GURURAJU B** | |
| DESIGNATION | Guest faculty | |
| EDUCATIONAL QUALIFICATION | M.A., B.Ed.,(Ph.D).,PGDMCJ.,DIT., NET | |
| EXPERIENCE | | |
| E-MAIL | gururajchakri1@gmail.com | |
| AREA OF SPECIALISATION | | |
| PROFILE | | |

| NAME | **Dr. R. SHASHIKALA** | |
|---|---|---|
| DESIGNATION | Guest faculty | |
| EDUCATIONAL QUALIFICATION | MA ( kannada),BEd, MPhil, PGDF,Ph.D ( Kannada) | |
| EXPERIENCE | | |
| E-MAIL | | |
| AREA OF SPECIALISATION | | |
| PROFILE | | |

**ACCADEMIC YEAR 2015-16**

**1. STUDENTS DETAILS:**

| | **SC** | | **ST** | | **CAT1** | | **2A** | | **2B** | | **3A** | | **3B** | | **GM** | | **TOTAL** | | **GRAND TOTAL** |
|---|---|---|---|---|---|---|---|---|---|---|---|---|---|---|---|---|---|---|---|
| | F | M | F | M | F | M | F | M | F | M | F | M | F | M | F | M | F | M | |
| 1st year | 9 | 2 | 3 | 0 | 1 | 0 | 0 | 0 | 0 | 0 | 1 | 0 | 8 | 0 | 0 | 0 | 22 | 2 | **24** |

**2. STUDENTS ACHIVEMENTS:**

| **SL NO** | **NAME** | **JRF/NET/K-set/Medals/Rank** |
|---|---|---|
| 1 | BHAVANI K M | NET, 1 Gold medals |
| 2 | CHAITRA M | NET, K-SET |
| 3 | SUNEETHA M | NET, K-SET |

| | | |
|---|---|---|
| 4 | SHAILASHREE | 1 Gold medal |
| 5 | VANAJA K. G | NET, 1 rank in the university 8 Gold medals, 4 cash prize |
| 6 | SHRUTHI TG | 6 Rank in the University |

| SL NO | NAME | GOVERNMENT/ NON GOVERNMENT JOB |
|---|---|---|
| 1 | CHAITRA M | Guest Teacher at govt primary School , Mallaiahnapura |
| 2 | JYOTHI S | Guest Teacher at govt primary School , Ramasamudra |
| 3 | NANDINI | Guest Teacher at govt primary School , Chamarajanagara |
| 4 | SUNEETHA M | Guest Teacher at govt primary School , Kellamballi |

## 3. DEPARTMENT ACTIVITIES:

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 05/10/2015 | Vachana sahithyadalli horaatada swaroopa | Special lecture | Dr.Shkar GFGC Madduru | Prof.Shivabasaviah Director Prof.Krishna murthy Hanuru |
| 2 | 08/03/2016 | Sahithya Suvarnavathi | Book Launch | Maleyuru Guruswamy | Prof.Shivabasaviah Director Prof.Krishnamurthy Hanuru Mahesh Harave |
| 3 | 30/05/2016 | Kannada Sahithya matthu Varthamanada Savalugalu | Special lecture | Prof.Padhma Shekar Registrar Sanskrit University | Prof.Shivabasaviah Director Prof.Krishnamurthy Hanuru |

| | | | | | |
|---|---|---|---|---|---|
| | | | | Banglore | |
| 4 | 30/05/2016 | Prasthutha Samaja matthu Vachana Sahithya | Special lecture | Banjagere Jayaprakash | Prof.Shivabasaviah Director Prof.Krishnamurthy Hanuru |

**4. DEPARTMENT MEETINGS:**

| SL NO | DATE | AGENDA |
|---|---|---|
| 1 | 08/09/2015 | • Introduced CBCS Scheme to Students<br>• Work allotment for odd semester, Attendance, Time table |
| 2 | 11/10/2015 | • Work allotment for C1 Test timetable, Seminars<br>• Evaluation of C1 Test Papers and Assignments |
| 3 | 03/11/2015 | • Prefer to covering of Posen's |
| 4 | 04/12/2015 | • Work allotment for C1 Test timetable, Seminars<br>• Evaluation of C1 Test Papers and Assignments |
| 5 | 08/12/2015 | • C2 Test timetable |
| 6 | 23/12/2015 | • work allotment for internals marks,<br>• Open elective subjects and project works Disribution |
| 7 | 09/02/2016 | • Work allotment syllabus distributions for even semester and Time table<br>• C1 And C2 Test Timetable and C1 Assignments and Seminars |
| 8 | 16/03/2016 | • C1 Test timetable, C2 presentations and Seminars |
| 9 | 28/04/2016 | • Workshops |
| 10 | 10/05/2016 | • C2 Test timetable and Farewell day |
| 11 | 03/06/2016 | • Work allotment of internal marks, open elective and specialization papers |

**5. FACULTY DETAILS:**

| SL NO | NAME | QUALIFICATION | DESIGNATION | EXPEREANCE |
|---|---|---|---|---|
| 1 | Prof Krishnamurty Hanuru | M.A, Ph.D, NET | Visiting Professor | 40 years |
| 2 | Thammegowda U.P | M.A, B.Ed, K-SET | Guest Faculty | NILL |
| 3 | Basavanna M.S | M.A, B.Ed, M.Phil NET,K-SET | Guest Faculty | NILL |
| 4 | Umesh R | M.A, B.Ed, NET | Guest Faculty | NILL |

## ACCADEMIC YEAR 2016-17

### 1. STUDENTS DETAILS:

| | SC | | ST | | CAT1 | | 2A | | 2B | | 3A | | 3B | | GM | | TOTAL | | GRAND TOTAL |
|---|---|---|---|---|---|---|---|---|---|---|---|---|---|---|---|---|---|---|---|
| | F | M | F | M | F | M | F | M | F | M | F | M | F | M | F | M | F | M | |
| 1st year | 5 | 6 | 0 | 1 | 6 | 1 | 1 | 1 | 0 | 0 | 0 | 0 | 3 | 0 | 1 | 0 | 16 | 9 | 25 |
| 2 nd | 9 | 2 | 3 | 0 | 1 | 0 | 0 | 0 | 0 | 0 | 1 | 0 | 8 | 0 | 0 | 0 | 22 | 2 | 24 |

| | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| year | | | | | | | | | | | | | | | | | | | |

## 2. STUDENTS ACHIVEMENTS:

| SL NO | NAME | JRF/NET/K-set |
|---|---|---|
| 1 | BHAGYA. D | NET/ JRF |
| 2 | DEVANNA. H.S | K-SET |
| 3 | SUNEETHA L.S | NET, K-SET |
| 4 | PAVAN KUMAR. S | 1 Gold Medal |

| SL NO | NAME | GOVERNMENT/ NON GOVERNMENT JOB |
|---|---|---|
| 1 | MAHADEVASWAMY. K.S | Department of Agriculture, Ch, Nagara |
| 2 | PREMKUMAR. H.B | Guest Teacher at govt primary School, Hongalavadi |

## 3. DEPARTMENT ACTIVITIES:

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1. | 20/12/2016 | Prachina Kannada Sahithyadha | Special lecture | Prof.N.Taranath Visitinag Proffessors, Kuvempu Adhyana | Prof.Shivabasaviah Director |

| | | | | | |
|---|---|---|---|---|---|
| | | Preerane, Dooranegalu | | Kendhra, Manasa Gangothri | Prof.Krishnamurthy Hanuru |
| 2 | 20/12/2016 | Vysabharatha and Kumara Vysabharatha | Special lecture | Prof.Joythi Shankar Proffessor, | Prof.Shivabasaviah Director<br><br>Prof.Krishnamurthy Hanuru |
| 3 | 20/12/2016 | Hummerna Iliyad and Varjilana Iliyad | Special lecture | Prof.C.Naganna Visiting Proffessors, | Prof.Shivabasaviah Director<br><br>Prof.Krishnamurthy Hanuru |
| 4 | 02/04/2017 | Arivina Belaku Savithribayipul e | Book Launch | Kupnalli Bairappa and Hemalatha | Prof.Shivabasaviah Director<br><br>Prof.Krishnamurthy Hanuru |
| 5 | 29/04/2017 | Kannada Patyadha Aydha Kavitheglu | | Deevendhra Varaprashadh, Mysore. | Prof.Shivabasaviah Director<br><br>Prof.Krishnamurthy Hanuru |
| 6 | 03/05/2017 | Mathina Mahakavya (Janapadha Mahakavya) | Special lecture | Prof.S.G.Siddharama yya Sa.Si.Marula Siddhappa | Prof.Shivabasaviah Director<br><br>Prof.Krishnamurthy Hanuru |

## 4. DEPARTMENT MEETINGS:

| SL NO | DATE | AGENDA |
|---|---|---|
| 1 | 28/08/2016 | • Reporting the duty and workload distribution |
| 2 | 02/09/2016 | • Work allotment syllabus distributions for even semester and Time table |
| 3 | 27/10/2016 | • Work allotment for C1 Test timetable, C1 presentations and Seminars |

| | | |
|---|---|---|
| 4 | 02/12/2016 | • Decided to Organizing a special lecture and inviting a Good resource Scholar |
| 5 | 26/12/2016 | • work allotment for internals marks , Open elective subjects and project works |
| 6 | 24/01/2017 | • Work allotment for even semester Time table, C1 And C2 Test Timetable and C1 Assignments and Seminars |
| 7 | 27/02/2017 | • C1 Test timetable, C2 presentations and Seminars |
| 8 | 02/03/2017 | • State level workshop on GST |
| 9 | 27/04/2017 | • C2 Test timetable and farewell day |
| 10 | 15/05/2017 | • work allotment of internal marks, open elective and specialization papers |

## 5. FACULTY DETAILS:

| SL NO | NAME | QUALIFICATION | DESIGNATION | EXPEREANCE |
|---|---|---|---|---|
| 1 | Prof Krishnamurty Hanuru | M.A, Ph.D, NET | Visiting Professor | 41 YEARS |
| 2 | Thammegowda U.P | M.A, B.Ed, NET | Guest Faculty | 1 YEAR |
| 3 | Basavanna M.S | M.A, B.Ed, M.Phil NET, K-SET | Guest Faculty | 1 YEAR |
| 4 | Maheshbabu P | M.A, B.Ed, NET | Guest Faculty | 6 YEAR |
| 5 | M. Bairappa | M.A, PGDE, NET | Guest Faculty | NILL |
| 6 | Usharani. R | M.A, NET | Guest Faculty | NILL |

## ACCADEMIC YEAR 2017-18

### 1. STUDENTS DETAILS:

| | SC | | ST | | CAT 1 | | 2A | | 2B | | 3A | | 3B | | GM | | TOTAL | | GRAND TOTAL |
|---|---|---|---|---|---|---|---|---|---|---|---|---|---|---|---|---|---|---|---|
| | F | M | F | M | F | M | F | M | F | M | F | M | F | M | F | M | F | M | |
| 1st year | 11 | 3 | 4 | 1 | 1 | 0 | 0 | 0 | 0 | 0 | 0 | 0 | 5 | 0 | 0 | 0 | 21 | 4 | 25 |
| 2nd year | 5 | 6 | 0 | 1 | 6 | 1 | 1 | 1 | 0 | 0 | 0 | 0 | 3 | 0 | 1 | 0 | 16 | 9 | 25 |

### 2. STUDENTS ACHIVEMENTS:

| SL NO | NAME | JRF/NET/K-set |
|---|---|---|
| 1 | JYOTHI. M | K-SET |

| SL NO | NAME | GOVERNMENT/ NON GOVERNMENT JOB |
|---|---|---|
| 1 | MEGHA K | Nrupathunga Kannada Higer Primary School, Ramakrishna nagara, Mysore |
| 2 | KAVYA. N | CEC, Mobility India, Chandakavadi, Ch, nagara |

### 3. DEPARTMENT ACTIVITIES:

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 27/07/2017 | Samuha Madhyama mathu Varthamana Rajakiya | Special lecture | Sri Ganesh Aminagada Editors. Prajavani paper, Mysor | Prof.Shivabasaviah Director<br><br>Prof.Krishnamurthy Hanuru |
| 2 | 27/09/2017 | Vachana Sahithyadhalli Krushi Roopakagalu | Special lecture | VijayaKumari S Karikal | Prof.Shivabasaviah Director<br><br>Prof.Krishnamurthy Hanuru |
| 3 | 28/03/2018 | Hosagannada Kavya | Special lecture | Prof.Varadharaju Visitinag Proffessors, | Prof.Shivabasaviah Director<br><br>Prof.Krishnamurthy Hanuru |
| 4 | 28/03/2018 | Bharathiya Bhasegalu | Special lecture | B.V.Vasanth Kumar | Prof.Shivabasaviah Director<br><br>Prof.Krishnamurthy Hanuru |
| 5 | 28/03/2018 | Prayogika vimarshe | Special lecture | Prof.M.Shankar | Prof.Shivabasaviah Director<br><br>Prof.Krishnamurthy Hanuru |
| 6 | 28/03/2018 | Vachana Sahithyadha Nele Bele | Special lecture | Dr.BetteGowda | Prof.Shivabasaviah Director<br><br>Prof.Krishnamurthy Hanuru |

## 4. DEPARTMENT MEETINGS:

| SL NO | DATE | AGENDA |
|---|---|---|
| 1 | 20/08/2017 | • Work allotment for odd semester, Attendance, Time table,<br>• C1 And C2 Test Timetable and C1 Assignments and Seminars<br>• Decided to Organizing a special lecture and inviting a Good resource Scholar |
| 2 | 25/09/2017 | • Decided to Organizing a special lecture for vachana literature<br>• Decided to Organizing A Training to NET and KSET Exam |
| 3 | 24/10/2017 | • Decided to Celebrate Kannada Rajyothsava Programe on November 03 2017 |
| 4 | 16/11/2017 | • Work allotment for C2 Test timetable |
| 5 | 24/11/2017 | • work allotment for internals marks , Open elective subjects and project works |
| 6 | 03/01/2018 | • Work allotment for even semester Time table, C1 And C2 Test Timetable and C1 Assignments and Seminars |
| 7 | 07/02/2018 | • C1 Test timetable, C2 presentations and Seminars |
| 8 | 10/04/2018 | • C2 Test timetable |
| 8 | 20/04/2018 | • Farewell day |
| 9 | 30/04/2018 | • work allotment of internal marks, open elective and specialization papers |

## 5. FACULTY DETAILS:

| SL NO | NAME | QUALIFICATION | DESIGNATIO N | EXPEREANCE |
|---|---|---|---|---|
| 1 | Prof Krishnamurty Hanuru | M.A, Ph.D, NET | Visiting Professor | 42 YEARS |
| 2 | Thammegowda U.P | M.A, B.Ed, K-SET | Guest Faculty | 2 YEAR |
| 3 | Basavanna M.S | M.A, B.Ed, M.Phil NET, K-SET | Guest Faculty | 2 YEAR |

| | | | | |
|---|---|---|---|---|
| 4 | Maheshbabu P | M.A, B.Ed, NET | Guest Faculty | 7 YEAR |
| 5 | M. Bairappa | M.A, PGDE, NET | Guest Faculty | 1 YEAR |
| 6 | Rani. P | MA, B.Ed, NET | Guest Faculty | NILL |

## ACCADEMIC YEAR 2018-19

### 1. STUDENTS DETAILS:

| | SC | | ST | | CAT1 | | 2A | | 2B | | 3A | | 3B | | GM | | TOTAL | | GRAND TOTAL |
|---|---|---|---|---|---|---|---|---|---|---|---|---|---|---|---|---|---|---|---|
| | F | M | F | M | F | M | F | M | F | M | F | M | F | M | F | M | F | M | |
| 1st year | 5 | 4 | 3 | 1 | 0 | 0 | 2 | 1 | 0 | 0 | 1 | 0 | 7 | 0 | 0 | 0 | 22 | 6 | 28 |
| 2 nd year | 11 | 3 | 4 | 1 | 1 | 0 | 0 | 0 | 0 | 0 | 0 | 0 | 5 | 0 | 0 | 0 | 21 | 4 | 25 |

### 2. STUDENTS ACHIVEMENTS:

| SL NO | NAME | NET/K-SET/JRF |
|---|---|---|
| 1 | Priyanka R | NET |

### 3. DEPARTMENT ACTIVITIES:

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 08/03/2019 | Prachina Kannada Sahithyadha Parikalpanegalu | Special lecture | **Prof.N.Taranath** Visiting Professor, Kuvempu institute of kannada studies, Manasa Gangothri | Prof.Shivabasaviah Director Prof.Krishnamurthy Hanuru |
| 2 | 08/03/2019 | Paschathya | Special | **Prof.Varadharaju** | Prof.Shivabasavia |

| | | | | | |
|---|---|---|---|---|---|
| | | Memamsheya Nelegalu | lecture | Visitinag Proffessors | h<br>Director<br><br>Prof.Krishnamurthy Hanuru |
| 3 | 08/03/2019 | Kannada Shasanagala Shasthriya Adhyana | Special lecture | **Prof.Manjunath** Director, Prasaranga, Mysore | Prof.Shivabasaviah<br>Director<br><br>Prof.Krishnamurthy Hanuru |

## 4. DEPARTMENT MEETINGS:

| SL NO | DATE | AGENDA |
|---|---|---|
| 1 | 20/08/2018 | • Work allotment for odd semester, Attendance, Time table<br>• C1 Test Timetable and C1 Assignments and Seminars |
| 2 | 20/09/2018 | • Work allotment for C1 Test timetable,<br>• C2 presentations and Seminars<br>• Organizing Fresher programme |
| 3 | 12/10/2018 | • Decided to Complete the syllabus in particular period |
| 4 | 16/11/2018 | • Work allotment for C2 Test timetable |
| 5 | 23/11/2018 | • work allotment for internals marks,<br>• Open elective subjects and project works |
| 6 | 03/01/2019 | • Work allotment for even semester Time table,<br>• C2 Test Timetable and C2 Assignments and Seminars |
| 7 | 15/02/2019 | • Decided to Complete the syllabus in particular period |
| 8 | 15/03/2019 | • C2 Test timetable, C2 presentations and Seminars |
| 9 | 10/04/2019 | • work allotment of internal marks, open elective and specialization papers and Farewell day |
| 10 | 30/04/2019 | • C1 and C2 Internal marks online entry |

## 5. FACULTY DETAILS:

| SL NO | NAME | QUALIFICATION | DESIGNATION | EXPEREANCE |
|---|---|---|---|---|
| 1 | Prof Krishnamurty | M.A, Ph.D, NET | Visiting Professor | 43 YEARS |

| | | | | |
|---|---|---|---|---|
| | Hanuru | | | |
| 2 | Thammegowda U.P | M.A, B.Ed, K-SET | Guest Faculty | 2YEAR |
| 3 | Basavanna M.S | M.A, B.Ed, M.Phil NET, K-SET | Guest Faculty | 3YEAR |
| 4 | Maheshbabu P | M.A, B.Ed, NET | Guest Faculty | 8 YEAR |
| 5 | Rani. P | MA, B.Ed, NET | Guest Faculty | 1 YEAR |
| 6 | Gururaju. B | MA, B.Ed, NET | Guest Faculty | 5 YEAR |

## ACCADEMIC YEAR 2019-20

### 1. STUDENTS DETAILS:

| | SC | | ST | | CAT1 | | 2A | | 2B | | 3A | | 3B | | GM | | TOTAL | | GRAND TOTAL |
|---|---|---|---|---|---|---|---|---|---|---|---|---|---|---|---|---|---|---|---|
| | F | M | F | M | F | M | F | M | F | M | F | M | F | M | F | M | F | M | |
| 1st year | 1 | 6 | 1 | 1 | 1 | 2 | 0 | 0 | 0 | 0 | 0 | 0 | 8 | 2 | 0 | 0 | 11 | 12 | 23 |
| 2 nd year | 5 | 4 | 3 | 1 | 0 | 0 | 2 | 1 | 0 | 0 | 0 | 0 | 7 | 0 | 0 | 0 | 21 | 6 | 27 |

### 2. STUDENTS ACHIVEMENTS:

| SL NO | NAME | NET/K-SET/JRF |
|---|---|---|
| 1 | --------- | ---------- |

### 3. DEPARTMENT ACTIVITIES:

| SL NO | DATE | TITAL/ DEPARTMENT ACTIVITIES: | PROGRAM | RESOURCE PERSONS | GUESTS |
|---|---|---|---|---|---|
| 1 | 08/03/2019 | Prachina Kannada Sahithyadha | Special lecture | Prof.N.Taranath Visitinag Proffessors, | Prof.Shivabasaviah Director |

| | | | | | |
|---|---|---|---|---|---|
| | | Parikalpanegalu | | Kuvempu Adhyana Kendhra, Manasa Gangothri | Prof.Krishnamurthy Hanuru |
| 2 | 08/03/2019 | Paschathya Memamsheya Nelegalu | Special lecture | Prof.Varadharaju Visitinag Proffessors | Prof.Shivabasaviah Director<br><br>Prof.Krishnamurthy Hanuru |
| 3 | 08/03/2019 | Kannada Shasanagala Shasthriya Adhyana | Special lecture | Prof.Manjunath Director, Prasaranga, Mysore | Prof.Shivabasaviah Director<br>Prof.Krishnamurthy Hanuru |

## 4. DEPARTMENT MEETINGS:

| SL NO | DATE | AGENDA |
|---|---|---|
| 1 | 16/08/2019 | • Work allotment for odd semester, Attendance, Time table<br>• C1 Test Timetable and C1 Assignments and Seminars<br>• Founding a Good Kannada library Named as 'Devachandra Kannada Library' |
| 2 | 17/09/2019 | • Work allotment for C1 Test timetable, C2 presentations<br>• Organizing a Seminars as L Basavaraju marga<br>• Organizing Fresher programme |
| 3 | 13/10/2019 | • Decided to Complete the syllabus in particular period |
| 4 | 16/11/2018 | • Work allotment for C2 Test timetable |
| 5 | 11/12/2019 | • work allotment for internals marks,<br>• Open elective subjects and project works |
| 6 | 03/01/2019 | • Work allotment for even semester Time table,<br>• C1 Test Timetable and C2 Assignments and Seminars |
| 7 | 15/02/2019 | • Organizing a special seminar to students |
| 8 | 15/03/2019 | • C1 Test timetable, C2 presentations and Seminars |
| 9 | 10/04/2019 | • work allotment of internal marks online entry |

## 5. FACULTY DETAILS:

| SL NO | NAME | QUALIFICATION | DESIGNATI ON | EXPEREANCE |
|---|---|---|---|---|
| 1 | Prof Krishnamurty Hanuru | M.A, Ph.D, NET | Visiting Professor | 44 YEARS |
| 2 | Basavanna M.S | M.A, B.Ed, M.Phil NET, K-SET | Guest Faculty | 4 YEAR |
| 3 | Maheshbabu P | M.A, B.Ed, NET, Ph.D | Guest Faculty | 9 YEAR |
| 4 | Rani. P | MA, B.Ed, NET | Guest Faculty | 2 YEAR |
| 5 | Gururaju. B | MA, B.Ed, NET | Guest Faculty | 6 YEAR |
| 6 | One more Faculty is Required | | | |

# Devachandra Kannada Library






## About The Devachandra Kannada Labrary:

Our department have a good Library Named as “Devachandra Kannada Granthalaya” Devachandra was one of the most popular writer in Kannada Literature, he was born in Chamarajanagara and wrote and contribute many books in old Kannada.

In this library has founded by pro Krishnamurthy Hanuru saported by our honorable director Pro Shivabasavaiah. On this library founded as only Doners Dr. L Basavaraju, Prof NM Thalavar, Director, KIKS, Manasagangotri, mysore, Maialahalli Revanna, retired professor, University of Mysore, Prof Manjunath, Director, Prasaranga, Manasagangotri, mysore, and many more Doners was donated lots of books. Now in this library have more than 6000 books, and some magazines, and Dilly news papers

# Photographs:




**One day seminar inaugurated speech from our Department HOD, Prof Krishnamurhty Hanuru, resource persons prof Padhma sekhar, prof Tharanath, prof C Naganna, Prof M Varadaraju and our Director prof Shivabasavaih is here.**




**A Special Lecture from Prof Vijayakumari S Karikal KIKS, Manasaganborti, University of Mysore, at Nijaguna Sabhangana**



**Pro NM Thalavar was spoke to our students in the program of send-up and honor of Gold medal Students**



**A honor to prof Mailahalli Revanna form our Kannada department**



**Dr. L Basavaraju and, Prof NM Thalavar, Director, KIKS, Manasagangotri, mysore, is Doneted to our director Prof Shivabasavaiah**



**Presidential Speech from our Director Prof Shivabasavaiah in the program of send-up and honor of Gold medal Students**



**One day workshop Introduction speech from our HOD Prof Krishnamurthy Hanuru**



**A Special  visit to our department  from HM Krishnaiah, Syndicate member time in that our HOD Prof Krishnamurthy Hanuru**



**One day workshop Introduction speech from our HOD Prof Krishnamurthy Hanuru**



**A Special Lecture from Prof  M Varadaraju retarid professor, Maharani Arts and Science, Mysore at Nijaguna Sabhangana**



**A Special Lecture from Prof  M Shankar, Post Graduate centre, Hasan at Nijaguna Sabhangana**



**A Special Lecture from Prof  Tharanath N KIKS, Manasaganborti, University of Mysore, at Nijaguna Sabhangana**



**Presidential Speech from our Director Prof Shivabasavaiah in the program of One day workshop**

**<u>Naming Programs:</u>**

- **Our Honarabl directore prof Shivabasavaih has named to our campus as "Suvarnagangotri" suforiting guide from prof Krishnamurthy Hanuru, HOD Department of Kannada**
- **Our Honarabl directore prof Shivabasavaih has named to Main library as "Savitrhi bai Pule Gramthalaya" suforiting guide from prof Krishnamurthy Hanuru, HOD Department of Kannada**
- **Our Honarabl directore prof Shivabasavaih has named to Main library as seminar hall as "Nijanuna Sabhangana" suforiting guide from prof Krishnamurthy Hanuru, HOD Department of Kannada**

# Programe invitations












# Press reports

ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ; ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಅಭಿಪ್ರಾಯ

## ಜಾತಿ ವ್ಯವಸ್ಥೆ ಇರುವವರೆಗೂ ಶೋಷಣೆ



ಮುಖ್ಯಾಂಶಗಳು

- ಜಾತಿ ವ್ಯವಸ್ಥೆಯ ನಿರ್ಮೂಲನೆಯಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ
- ಶೋಷಿತರ ಬದುಕಿಗೆ ಆಶಾಕಿರಣವಾಗಿ ಬಂದ ಅಂಬೇಡ್ಕರ್



# ಆಲೋಚನಾ ಕ್ರಮ ಬದಲಾದಲ್ಲಿ ಸುಧಾರಣೆ ಸಾಧ್ಯ

## ಸ್ನಾತಕೋತ್ತರ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಕಾವ್ಯಸಂಕಲನ ಲೋಕಾರ್ಪಣೆ

ದಿನಾಂಕ :- 21/12/16
ಪತ್ರಿಕೆ :- ವಿಜಯ ಕರ್ನಾಟಕ

# ಮಹಾಕಾವ್ಯಗಳ ಅಧ್ಯಯನ ಅಗತ್ಯ

## ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳು ಕುರಿತ ವಿಚಾರಗೋಷ್ಠಿ

■ **ವಿಕ ಸುದ್ದಿಲೋಕ**, ಚಾಮರಾಜನಗರ

ಪ್ರಾಚೀನ ಕನ್ನಡ ಸಾಹಿತ್ಯದ ಅಸ್ಮಿತೆಯನ್ನು ಗುರುತಿಸುವಲ್ಲಿ ಕವಿರಾಜಮಾರ್ಗ ಕೃತಿ ಅತ್ಯಂತ ಪ್ರಧಾನ ಪಾತ್ರ ವಹಿಸಿದೆ ಎಂದು ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್.ತಾರಾನಾಥ್ ಅಭಿಪ್ರಾಯಪಟ್ಟರು.

ನಗರದ ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ವಿಭಾಗದ ವತಿಯಿಂದ ಮಂಗಳವಾರ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಹಾಗೂ ಮಾದರಿಗಳು' ವಿಚಾರಸಂಕಿರಣದಲ್ಲಿ 'ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳು' ಕುರಿತ ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

ಪ್ರಾಚೀನ ಕನ್ನಡ ಸಾಹಿತ್ಯದ ಅವಧಿಯಲ್ಲಿ ಅಂದರೆ (1160-1200)ಮಧ್ಯಕಾಲೀನ ವಚನಸಾಹಿತ್ಯ ಹಾಗೂ ಷಟ್ಪದಿ, ಸಾಂಗತ್ಯ ಎಂಬ ಎರಡು ಕಾಲಘಟ್ಟಗಳನ್ನು ಕಾಣಬಹುದು, ಭಾಷೆಯ ಸ್ವರೂಪದ ದೃಷ್ಟಿಯಲ್ಲಿ ಸಾಹಿತ್ಯದ ಪ್ರಕಾರಗಳಲ್ಲಿ 'ಚಂಪೂಯುಗ' ವನ್ನೇ ತೆಗೆದುಕೊಂಡರೆ, ಅಲ್ಲಿ ಧರ್ಮ ಮತ್ತು ಸಾಹಿತ್ಯ ಮುಖ್ಯವಾಗಲಿವೆ. ಧರ್ಮವನ್ನು ಅವಲೋಕಿಸಿದಾಗ, ಜೈನಯುಗ ಮುಖ್ಯವಾಗಲಿದೆ. ರಾಜಮಹಾರಾಜರು ಯುದ್ಧದಲ್ಲಿ ವಿಜಯಿಶಾಲಿಗಳಾಗಿ ಹಿಂದಿರುಗಿದ ಮೇಲೆ, ಅವರನ್ನು ಹಾಡಿಹೊಗಳಿ ಕಾವ್ಯ ರಚನೆ ಮಾಡುವುದು ಅಂದಿನ ಕಾವ್ಯ ಕಟ್ಟುವ ಕ್ರಮವಾಗಿತ್ತು.

**ವಿಭಿನ್ನಕೃತಿಗಳು:** ಪಂಪನ ವಿಕ್ರಮಾರ್ಜುನ ವಿಜಯ ವ್ಯಕ್ತಿಯ ಅಭಿವ್ಯಕ್ತಿಯನ್ನು ತಿಳಿಸಿದರೆ, ರನ್ನನ ಗದಾಯುದ್ಧ ದುರಂತದ ಕಾವ್ಯದಂತೆ ಗೋಚರವಾಗುತ್ತದೆ. ಕವಿರಾಜಮಾರ್ಗದಲ್ಲಿ ಮಾತ್ರ ಸಂಸ್ಕೃತದ ಬಳಕೆಯಿಲ್ಲದೇ ಕನ್ನಡಭಾಷೆಯನ್ನು ಬಳಸಿ ರಚನೆ ಮಾಡಿರುವ ಕೃತಿ, ಕನ್ನಡಕ್ಕೆ ಪ್ರಾಸಮುಖ್ಯವೇ ಹೊರತು ಖಂಡ ಪ್ರಾಸವಲ್ಲ ಎಂಬುದನ್ನು ಗುರುತಿಸುವ ಪ್ರಯತ್ನ ಕವಿರಾಜಮಾರ್ಗ ಕೃತಿ ರಚನೆಯಲ್ಲಿ ಕಂಡು ಬಂದಿದೆ ಎಂದರು.

ಪ್ರೊ. ಸಿ.ನಾಗಣ್ಣ ಮಾತನಾಡಿ, ಪಂಪ, ವ್ಯಾಸ, ವಾಲ್ಮೀಕಿ ರಚಿಸಿರುವ ಮಹಾಕೃತಿಗಳು ನಮ್ಮ ನಾಲಿಗೆಯ ಮೇಲೆ ಹೇಗೆ ಹರಿದಾಡುತ್ತಿವೆಯೋ ಹಾಗೇ ಪಾಶ್ಚಾತ್ಯ ಮಹಾಕಾವ್ಯಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಸಲಹೆ ನೀಡಿದರು.

ವ್ಯಾಸಭಾರತ ಹಾಗೂ ಕುಮಾರವ್ಯಾಸ ಭಾರತ ಕುರಿತು ಮೈಸೂರು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಸಂದರ್ಶಕ ಪ್ರಾಧ್ಯಾಪಕಿ ಜ್ಯೋತಿಶಂಕರ್, ಆಧುನೀಕ ಕನ್ನಡ ವಿಮರ್ಶೆ ಸ್ವರೂಪ ಮತ್ತು ಬೆಳವಣಿಗೆ ಕುರಿತು ಮೈಸೂರು ಮಹಾರಾಣಿ ಕಾಲೇಜಿನ ಸಂದರ್ಶಕ ಪ್ರಾಧ್ಯಾಪಕ ಮಾ.ವರದರಾಜು ವಿಚಾರಮಂಡಿಸಿದರು.

ಸಂದರ್ಶಕ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿ ಹನೂರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಅಧ್ಯಾಪಕರು, ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಿಕ ಚಿತ್ರಲೋಕ



**ಚಾಮರಾಜನಗರದ ಮೈಸೂರು ವಿವಿಯ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಹಾಗೂ ಮಾದರಿಗಳು' ವಿಚಾರ ಸಂಕಿರಣಕ್ಕೆ ಮಂಗಳವಾರ ಚಾಲನೆ ನೀಡಲಾಯಿತು. ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್.ತಾರಾನಾಥ್, ಡಾ.ಕೃಷ್ಣಮೂರ್ತಿ ಹನೂರು, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಪ್ರೊ. ನಾಗಣ್ಣ ಮತ್ತಿತರರು ಹಾಜರಿದ್ದರು.**



**ಮೈಸೂರು ವಿವಿ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.**

ದಿನಾಂಕ:- 21/12/16

ದಿನಪತ್ರಿಕೆಗಳು:- ವಿಜಯವಾಣಿ ಮತ್ತು ಪ್ರಜಾವಾಣಿ

## ವಿಚಾರ ಸಂಕಿರಣ

**ವಿಜಯವಾಣಿ ಸುದ್ದಿಜಾಲ** ಚಾಮರಾಜನಗರ

ನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು ಕುರಿತು' ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಕನ್ನಡ ವಿಭಾಗದ ಆಶ್ರಯದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣವನ್ನು ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಕೃಷ್ಣ ಮೂರ್ತಿ ಹನೂರು ಉದ್ಘಾಟಿಸಿದರು. ಬಳಿಕ ಮಾತನಾಡಿ, ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು ಕುರಿತ ವಿಚಾರ ಸಂಕಿರಣ ಎಂಬುದು ಈಗಾಗಲೇ ಪಠ್ಯದಲ್ಲಿರುವ ವಿಚಾರದ ಪುನರ್‌ಮನನ ತರಗತಿಯಾಗಿದ್ದು, ಇದು ಪರೀಕ್ಷೆ ದೃಷ್ಟಿಯಿಂದ ಹೆಚ್ಚು ಅನುಕೂಲವಾಗಲಿದೆ ಎಂದರು. ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಮಾತನಾಡಿದರು. ಉಪನ್ಯಾಸಕರಾದ ಯು.ಪಿ. ತಮ್ಮೇಗೌಡ, ಎಂ.ಎಸ್. ಬಸವಣ್ಣ, ಕೆ.ಎಸ್.ಉಷಾರಾಣಿ, ಪಿ. ಮಹೇಶ್‌ಬಾಬು, ಎಂ.ಬೈರಪ್ಪ ಇದ್ದರು.




ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು ಕುರಿತ ವಿಚಾರ ಸಂಕಿರಣವನ್ನು ಅತಿಥಿಗಳು ಉದ್ಘಾಟಿಸಿದರು.

### ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಅಭಿಮತ

# ಹಳಗನ್ನಡದಲ್ಲಿ ಭಾಷೆಗೆ ಪ್ರಾಶಸ್ತ್ಯ ಹೆಚ್ಚು

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಳಗನ್ನಡ ಸಾಹಿತ್ಯವು ಮಹತ್ವದ ಕಾಲಘಟ್ಟವಾಗಿದೆ. ಈ ಕಾಲ ಘಟ್ಟಕ್ಕೆ ಆದಿಕಾವ್ಯವೆಂದು ಕರೆಯಲಾಗಿದೆ' ಎಂದು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಶೋಧನಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಿಂದ ಮಂಗಳವಾರ ಆಯೋಜಿಸಿದ್ದ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು' ಕುರಿತ ವಿಚಾರ ಸಂಕಿರಣದಲ್ಲಿ 'ಪ್ರಾಚೀನ ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಧೋರಣೆಗಳು' ವಿಷಯ ಕುರಿತು ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಹಳಗನ್ನಡ, ನಡುಗನ್ನಡ, ಹೊಸಗನ್ನಡದ ಉದಯದ ಪೂರ್ವಾವಧಿ ಮತ್ತು ಹೊಸಗನ್ನಡ ಎಂದು ವಿಭಾಗಿಸಬಹುದು. 10ನೇ ಶತಮಾನದಿಂದ 12ನೇ ಶತಮಾನದವರೆಗಿನ ಕಾಲಘಟ್ಟವನ್ನು ಪ್ರಾಚೀನ ಕನ್ನಡ ಅಥವಾ ಹಳಗನ್ನಡ ಎಂದು ಗುರುತಿಸಲಾಗಿದೆ ಎಂದರು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಭಾಷೆಗೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ. ಈ ಕಾಲ ಘಟ್ಟದಲ್ಲಿ ಜೈನ ಕವಿಗಳ ಅಧಿಪತ್ಯ ಹೆಚ್ಚಾಗಿತ್ತು. ಪಂಪ, ಪೊನ್ನ, ರನ್ನ, ನಾಗಚಂದ್ರ, ಶಿವಾಕೋಟ್ಯಾಚಾರ್ಯ, ಗುಣವರ್ಮ, ಗುಣಸೇನ ಕವಿಗಳು ಜೈನ ಧರ್ಮಕ್ಕೆ ಸೇರಿದ್ದರು. ಹಾಗಾಗಿ, ಹಳಗನ್ನಡ ಸಾಹಿತ್ಯವು ಜೈನ ಧರ್ಮವನ್ನು ಅವಲಂಬಿಸಿತು ಎಂದರು.



ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮಂಗಳವಾರ ನಡೆದ 'ತೌಲನಿಕ ಸಾಹಿತ್ಯ ಅಧ್ಯಯನ ಕ್ರಮ ಮತ್ತು ಮಾದರಿಗಳು' ಕುರಿತ ವಿಚಾರ ಸಂಕಿರಣವನ್ನು ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಉದ್ಘಾಟಿಸಿದರು. ಪ್ರೊ.ಜ್ಯೋತಿ ಶಂಕರ್, ಪ್ರೊ.ಶಿವಬಸವಯ್ಯ, ಪ್ರೊ.ಸಿ.ನಾಗಣ್ಣ, ಪ್ರೊ.ಎನ್.ಎಸ್. ತಾರಾನಾಥ್ ಇದ್ದಾರೆ

ಸಾಹಿತ್ಯದ ಹಿನ್ನೆಲೆಯಲ್ಲಿ ಚಂಪೂಯುಗ, ಧರ್ಮದ ಹಿನ್ನೆಲೆಯಲ್ಲಿ ಜೈನಯುಗ, ಸಂಸ್ಕೃತ ಸಾಹಿತ್ಯದ ಸ್ವರೂಪದ ಪರಿಭಾಷೆಯಲ್ಲಿ ಮಾರ್ಗಯುಗ, ಇಡೀ ಸಾಮ್ರಾಜ್ಯದ ಹಿನ್ನೆಲೆಯಲ್ಲಿ ಸಾಮ್ರಾಜ್ಯಶಾಹಿ ಯುಗವೆಂದು ಗುರುತಿಸಲಾಗಿದೆ ಎಂದು ವಿವರಿಸಿದರು.

ಹಳಗನ್ನಡ ಯುಗದಲ್ಲಿ ಯುದ್ಧವೀರ, ದಾನವೀರ, ದಯಾವೀರ ಹಾಗೂ ಧರ್ಮವೀರನ ಬಗ್ಗೆ ಪ್ರಶಂಸನೀಯವಾಗಿ ಕಾವ್ಯಕಟ್ಟುವ ಕ್ರಮ ನೋಡಬಹುದು. ರಾಜಗುಣ ಹಾಗೂ ಯುದ್ಧದಲ್ಲಿ ಜಯಗಳಿಸಿದ ಬಗ್ಗೆ ಕಾವ್ಯ ರಚಿಸಿರುವುದನ್ನು ಈ ಅವಧಿಯಲ್ಲಿ ಹೆಚ್ಚು ಕಾಣುತ್ತೇವೆ ಎಂದು ತಿಳಿಸಿದರು.

ರಾಷ್ಟ್ರಕೂಟರ ಕಾಲದಲ್ಲಿ 'ಕವಿರಾಜಮಾರ್ಗ' ಕೃತಿ ರಚನೆಯ ಮೂಲಕ ಕನ್ನಡ ಸಾಹಿತ್ಯ ಆರಂಭವಾಯಿತು. ಸಂಸ್ಕೃತ ಭಾಷೆಯನ್ನು ಎದುರಿಸಿ ಕನ್ನಡದ ವ್ಯಕ್ತಿತ್ವ ಗುರುತಿಸಲು ಕವಿರಾಜ ಮಾರ್ಗ ಕೃತಿ ರಚನೆಯು ದೊಡ್ಡ ಸಾಧನೆಯಾಗಿದೆ ಎಂದು ತಿಳಿಸಿದರು.

ಹಲ್ಮಿಡಿ ಶಾಸನದಲ್ಲಿ ಕದಂಬರು, ಪಲ್ಲವರು, ಬಾಣರು, ಸ್ಥಳೀಯ ರಾಜರು ಸೇರಿದಂತೆ ಹಲವು ರಾಜವಂಶದ ಬಗ್ಗೆ ಉಲ್ಲೇಖವಿದೆ. ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದಲ್ಲಿ ತ್ರಿಪದಿ ರಚನೆಯಾಗಿದೆ. ಇದು ಕಪ್ಪೆ ಅರಭಟ್ಟನ ಬಗ್ಗೆ ಸರಳ ಭಾಷೆಯಲ್ಲಿನ ಸ್ತುತಿಯಾಗಿದೆ ಎಂದರು.

ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಮಾತನಾಡಿ, ಸಾಹಿತ್ಯದಿಂದ ಅಂತರಂಗದ ಬೆಳವಣಿಗೆಯಾಗುತ್ತದೆ. ವಿಜ್ಞಾನದಿಂದ ಬಹಿರಂಗದ ಬೆಳವಣಿಗೆಯಾಗಲಿದೆ.

> ಪಂಪ, ರನ್ನ, ಕುಮಾರವ್ಯಾಸ ರಚಿಸಿರುವ ಹಳಗನ್ನಡ ಸಾಹಿತ್ಯ ಲಯಬದ್ಧ ಹಾಗೂ ಸತ್ವಭರಿತವಾದುದು. ವಿದ್ಯಾರ್ಥಿಗಳು ಅದನ್ನು ಓದಿ ಖುಷಿಪಡುವ ಹವ್ಯಾಸ ಬೆಳೆಸಿಕೊಳ್ಳಬೇಕು
>
> **ಪ್ರೊ.ಎನ್.ಎಸ್. ತಾರಾನಾಥ್**
> ಸಂದರ್ಶಕ ಪ್ರಾಧ್ಯಾಪಕ

ಇವೆರಡು ಜೊತೆಯಾಗಿ ಸಾಗಬೇಕಿದೆ ಎಂದು ಆಶಿಸಿದರು.

ಸಾಹಿತ್ಯ ಅಕಾಡೆಮಿಯು ಕಾಲೇಜಿನಲ್ಲಿ ಇಂಥಹ ಕಾರ್ಯಕ್ರಮ ಆಯೋಜಿಸಿರುವುದು ಅರ್ಥಪೂರ್ಣವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಎಲ್ಲ ಸ್ನಾತಕೋತ್ತರ ಕೇಂದ್ರದಲ್ಲಿಯೂ ಇಂಥ ವಿಚಾರ ಸಂಕಿರಣ ನಡೆಸಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳ ಪ್ರತಿಭೆ ಹೊರತರಲು ಅಕಾಡೆಮಿ ಸಹಾಯ ಮಾಡಬೇಕು. ಇದಕ್ಕಾಗಿ ಪ್ರತ್ಯೇಕವಾದ ಯೋಜನೆ ರೂಪಿಸಬೇಕು ಎಂದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕಿ ಪ್ರೊ.ಜ್ಯೋತಿ ಶಂಕರ್, ಮಹಾರಾಣಿ ಕಲಾ ಕಾಲೇಜಿನ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಮಾ. ವರದರಾಜು, ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಶೋಧನಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಸಿ. ನಾಗಣ್ಣ ಹಾಜರಿದ್ದರು.



ದಿನಾಂಕ :- 31/12/16

ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕಟ್ಟಡ ಉದ್ಘಾಟನೆ

# ಜಿಲ್ಲೆಯಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಒತ್ತು

■ ವಿಕ ಸುದ್ದಿಲೋಕ ಚಾಮರಾಜನಗರ

ಮೈಸೂರು ವಿಶ್ವ ವಿದ್ಯಾಲಯದ ಜಿಲ್ಲೆಯ ಉಪ ಕೇಂದ್ರವಾದ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನೂತನ ಕಟ್ಟಡದ ಉದ್ಘಾಟನೆ ಶುಕ್ರವಾರ ನೆರವೇರಿತು.



ವಿಕ ಚಿತ್ರಲೋಕ

## ಜಿಲ್ಲೆಗೊಂದು ವಿವಿ ಅಗತ್ಯ

**ಚಾಮರಾಜನಗರ:** ಉನ್ನತ ಶಿಕ್ಷಣವನ್ನು ಎಲ್ಲೆಡೆ ಲಭ್ಯವಾಗುವಂತೆ ಮಾಡಲು ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಪ್ರತಿ ಜಿಲ್ಲೆಗೂ ಪ್ರತ್ಯೇಕ ವಿಶ್ವವಿದ್ಯಾಲಯದ ಅಗತ್ಯವಿದೆ ಎಂದು ಮೈಸೂರು ವಿವಿಯ ಉಪ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ ಅಭಿಪ್ರಾಯಪಟ್ಟರು.

ನಗರದಲ್ಲಿ ವಿವಿಯ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದರು. ''ನಾವು ಪೂರ್ಣ ಸಾಕ್ಷರತೆ ಸಾಧಿಸಲು ಇನ್ನು ಸಾಧ್ಯವಾಗಿಲ್ಲ. ಆದರೆ ಇಂಗ್ಲೆಂಡ್ ನಲ್ಲಿ 1900ರ ವೇಳೆಗೆ ಪೂರ್ಣ ಸಾಕ್ಷರತೆ ಇತ್ತು. ಶಿಕ್ಷಣದ ವಿಚಾರದಲ್ಲಿ ನಾವು ಎಷ್ಟರಮಟ್ಟಿಗೆ ಹಿಂದುಳಿದಿದ್ದೇವೆ ಎಂಬುದನ್ನು ಈ ನಿದರ್ಶನ ಹೇಳುತ್ತದೆ,'' ಎಂದರು.

''ಇಂದು ಸರಕಾರಗಳು ಶೈಕ್ಷಣಿಕ ಪ್ರಗತಿಗೆ ಸಾಕಷ್ಟು ಅನುದಾನ ನೀಡುತ್ತಿದೆ. ಅದೇ ರೀತಿ ವಿಶ್ವವಿದ್ಯಾಲಯಗಳು ಸಹ ಹೆಚ್ಚಾಗಬೇಕು. ಬೆಂಗಳೂರು ವಿವಿಯ ವ್ಯಾಪ್ತಿಯಲ್ಲಿ 600ಕ್ಕೂ ಹೆಚ್ಚು ಕಾಲೇಜುಗಳಿವೆ. ಹೀಗಿದ್ದಾಗ ನಿರ್ವಹಣೆ ಕಷ್ಟವಾಗುತ್ತದೆ. ಉತ್ತಮ ನಿರ್ವಹಣೆ, ಗುಣಮಟ್ಟ ಹೆಚ್ಚಾಗಬೇಕಾದರೆ ವಿವಿಗಳ ವಿಕೇಂದ್ರೀಕರಣ ಗೊಳ್ಳಬೇಕು,'' ಎಂದು ಹೇಳಿದರು.

ಚಾಮರಾಜನಗರದ ಮೈಸೂರು ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಡಾ.ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಾಮಫಲಕವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಎಸ್ ಮಹದೇವಪ್ರಸಾದ್ ಉದ್ಘಾಟಿಸಿದರು. ಸಂಸದ ಆರ್.ಧ್ರುವನಾರಾಯಣ್ ಇದ್ದರು.

ಡಾ.ಬಿ.ಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ದಿನಾಂಕ : 31/12/16

# ಜಿಲ್ಲೆಯಲ್ಲಿ ವಿವಿ ಕೊರತೆ ಇದೆ

ಸಮಾರಂಭದಲ್ಲಿ ಸಚಿವ ಸಂಸದ ಆರ್.ಧ್ರುವನಾರಾಯಣ್ ಬೇಸರ

■ ವಿಜಯವಾಣಿ ಸುದ್ದಿಜಾಲ ಚಾಮರಾಜನಗರ

ಕೆಲ್ಲಂಬಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಹೊಸ ಕ್ಯಾಂಪಸನ್ನು ಸಚಿವ ಎಚ್.ಎಸ್.ಮಹದೇವಪ್ರಸಾದ್ ಉದ್ಘಾಟಿಸಿದರು.

ನೂತನ ಕೇಂದ್ರ ಕಟ್ಟಡಕ್ಕೆ ರಾಜ್ಯ ಸರ್ಕಾರದಿಂದ ₹ 9 ಕೋಟಿ ಅನುದಾನ

# ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಚಾಮರಾಜನಗರ:** 'ನಗರದ ಡಾ.ಬಿ. ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರವು ಜಿಲ್ಲೆಯ ವಿಶ್ವವಿದ್ಯಾನಿಲಯವಾಗಲಿ' ಎಂದು ಸಹಕಾರ ಮತ್ತು ಸಕ್ಕರೆ ಸಚಿವ ಎಚ್.ಎಸ್. ಮಹದೇವಪ್ರಸಾದ್ ಹೇಳಿದರು.

ಈ ಕೇಂದ್ರವು ವಿಶ್ವ ವಿದ್ಯಾನಿಲಯವಾಗಿ ರೂಪುಗೊಂಡು ಮೈಸೂರಿನ ಮಾನಸ ಗಂಗೋತ್ರಿ, ಬೆಂಗಳೂರು ಜ್ಞಾನ ಭಾರತಿಯಂಥ ಕ್ಯಾಂಪಸ್ ಆಗಿ ಹೊರಹೊಮ್ಮಬೇಕು

ಎಚ್.ಎಸ್.ಮಹದೇವಪ್ರಸಾದ್
ಸಹಕಾರ ಮತ್ತು ಸಕ್ಕರೆ ಸಚಿವ



ದಿನಾಂಕ: 04-04-2017
ಪತ್ರಿಕೆ: ಪ್ರಜಾವಾಣಿ

ಹಿರಿಯ ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಅಭಿಪ್ರಾಯ

# ‘ನೈಜ ಇತಿಹಾಸ ತಿಳಿಸುವ ಕೆಲಸ ಆಗಲಿ’

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ತರಗತಿಯಲ್ಲಿ ಕಲಿಯುವ ಇತಿಹಾಸ ಬದಲಾಗಬೇಕು. ವಿದ್ಯಾರ್ಥಿಗಳಿಗೆ ದೇಶದ ನೈಜ ಇತಿಹಾಸ ತಿಳಿಸುವ ಕೆಲಸವಾಗಬೇಕಿದೆ’ ಎಂದು ಹಿರಿಯ ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಅಂತರಸಂತೆ ಪ್ರಕಾಶನ, ಕನ್ನಡಿಗರ ಸಹಕಾರ ಜ್ಯೋತಿ ಪತ್ರಿಕೆ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಹಾಗೂ ರಂಗತರಂಗ ಟ್ರಸ್ಟ್‌ನಿಂದ ನಡೆದ ಟಿ. ನಾಗರಾಜು ಮತ್ತು ಡಿ. ಈರೇಶ್ ನಗರ್ಲೆ ಅವರ ಸಂಪಾದಕತ್ವದ ‘ಅರಿವಿನ ಬೆಳಕು ಸಾವಿತ್ರಿಬಾಯಿ ಫುಲೆ’ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಇಂದಿನ ಪಠ್ಯದಲ್ಲಿ ಯಾರೋ ಸೃಷ್ಟಿಸಿದ ಹಾಗೂ ವೈಭವೀಕರಿಸಿದ ಇತಿಹಾಸ ಅಳವಡಿಸಲಾಗಿದೆ. ಸಾಮಾನ್ಯರ ಇತಿಹಾಸವನ್ನು ಮರೆಮಾಚಲಾಗಿದೆ. ವಿದ್ಯಾರ್ಥಿಗಳು ಇಂಥಹ ಇತಿಹಾಸವನ್ನು ಬಿಟ್ಟು ನೈಜ ಹಾಗೂ ಸಾಮಾನ್ಯರ ಇತಿಹಾಸವನ್ನು ಹುಡುಕಿ ತಿಳಿಯಬೇಕು ಎಂದು ಸಲಹೆ ನೀಡಿದರು.

ಮೌಢ್ಯತೆಯಿಂದ ಹೆಣ್ಣಿನ ಮೇಲೆ ಹಲವು ಶೋಷಣೆ ನಡೆದಿರುವ ಬಗ್ಗೆ ಇತಿಹಾಸದಲ್ಲಿ ದಾಖಲಾಗಿದೆ. ಈ ವೇಳೆಯಲ್ಲಿ ಶಾಲೆ ಪ್ರಾರಂಭಿಸಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೋರಾಡಿದ ಸಾವಿತ್ರಿಬಾಯಿ ಫುಲೆ ಅವರು ವಿದ್ಯಾರ್ಥಿನಿಯರಿಗೆ ಸ್ಫೂರ್ತಿ ಎಂದು ತಿಳಿಸಿದರು.

ಶಿಕ್ಷಣದಿಂದ ಸಮಾಜದ ಅರಿವು ಪಡೆಯಲು ಸಾಧ್ಯ. ಶಿಕ್ಷಣ ಮತ್ತು ಜ್ಞಾನವನ್ನು ದಾಟಿದ್ದು ಅರಿವು. ಇದರ ಅರ್ಥ ವ್ಯಾಪಕವಾದದ್ದು, ಅರಿವು ಮತ್ತು ಬೆಳಕಿಗೆ ಕೊನೆಯಿಲ್ಲ. ಅರಿವಿನಿಂದ ಮೌಢ್ಯತೆ ಹಾಗೂ ಶೋಷಣೆಯಿಂದ ದೂರವಿರಲು ಸಾಧ್ಯ ಎಂದರು.

ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ.ವಿಜಯಕುಮಾರಿ ಎಸ್.ಕರಿಕಲ್ ಮಾತನಾಡಿ, ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರು 19ನೇ ಶತಮಾನದ ಧೀಮಾಂತ ಮಹಿಳೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೋರಾಡಿದ ಅವರು ವಿದ್ಯಾರ್ಥಿನಿಯರಿಗೆ ಆದರ್ಶವಾಗಿದ್ದಾರೆ ಎಂದು ತಿಳಿಸಿದರು.

ಸಾವಿತ್ರಿಬಾಯಿ ಅವರು 9ನೇ ವಯಸ್ಸಿನಲ್ಲಿಯೇ ಜ್ಯೋತಿಬಾ ಫುಲೆಯವರ ಧರ್ಮಪತ್ನಿಯಾದರು. ಪತಿಯ ಜೊತೆ ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗಿ ಅಕ್ಷರದಾಸೋಹಿಯಾದರು ಎಂದರು.

ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣ ಪಡೆಯುವ ಸಂದರ್ಭದಲ್ಲಿ ಹಲವು ಅಡ್ಡಿಯುಂಟಾಯಿತು. ಅದನ್ನು ಲೆಕ್ಕಿಸದೆ ಅವರು ಅಕ್ಷರಾಭ್ಯಾಸ ಮಾಡಿದರು. ಹೆಣ್ಣುಮಕ್ಕಳ ಶಾಲೆ ತೆರೆದು ದೀನರ, ದುಃಖಿತರ, ಶೋಷಿತರ ಪಾಲಿಗೆ ವಿದ್ಯಾ ದೇವತೆಯಾದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಉಮ್ಮತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಡಿ. ಸವಿತಾ, ರಂಗತರಂಗ ಟ್ರಸ್ಟ್‌ನ ಅಧ್ಯಕ್ಷ ಸೋಮಶೇಖರ ಬಿಸಲ್ವಾಡಿ, ಕನ್ನಡಿಗರ ಸಹಕಾರ ಜ್ಯೋತಿ ಪತ್ರಿಕೆ ಟಿ. ನಾಗರಾಜು, ಅಂತರಸಂತೆ ಪ್ರಕಾಶನದ ಡಿ. ಈರೇಶ್ ನಗರ್ಲೆ ಹಾಜರಿದ್ದರು.

ಚಾಮರಾಜನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ‘ಅರಿವಿನ ಬೆಳಕು ಸಾವಿತ್ರಿಬಾಯಿ ಫುಲೆ’ ಕೃತಿಯನ್ನು ಹಿರಿಯ ಸಾಹಿತಿ ಡಾ.ಕೃಷ್ಣಮೂರ್ತಿ ಹನೂರು ಅವರು ಲೋಕಾರ್ಪಣೆ ಮಾಡಿದರು. ಪ್ರೊ.ಶಿವಬಸವಯ್ಯ, ಡಾ.ವಿಜಯಕುಮಾರಿ ಎಸ್.ಕರಿಕಲ್ ಇತರರು ಹಾಜರಿದ್ದರು

**ಮುಖ್ಯಾಂಶಗಳು**

- ಇಂದಿನ ಪಠ್ಯದಲ್ಲಿ ಯಾರೋ ಸೃಷ್ಟಿಸಿದ, ವೈಭವೀಕರಿಸಿದ ಇತಿಹಾಸ ಅಳವಡಿಕೆ
- ದಲಿತರು ಹಾಗೂ ಶೋಷಿತರ ಪಾಲಿಗೆ ಆಶಾಕಿರಣವಾದ ಸಾವಿತ್ರಿಬಾಯಿ ಫುಲೆ

ಇತಿಹಾಸ ಅರಿಯದವನು ಇತಿಹಾಸ ಸೃಷ್ಟಿಸಲಾರ ಎಂದು ಬಾಬಾ ಸಾಹೇಬ ಅಂಬೇಡ್ಕರ್ ಅವರು ಹೇಳಿದ್ದಾರೆ. ಸುಳ್ಳು ಇತಿಹಾಸ ನಂಬದೆ ಸತ್ಯವನ್ನು ಪರಿಚಯಿಸುವ ಅಗತ್ಯತೆ ಇದೆ

**ಡಾ.ಕೃಷ್ಣಮೂರ್ತಿ ಹನೂರು**
ಹಿರಿಯ ಸಾಹಿತಿ



ದಿನಾಂಕ: 04-04-2017
ಪತ್ರಿಕೆ: ವಿಜಯ ಕರ್ನಾಟಕ

# ‘ಅರಿವಿನ ಬೆಳಕು ಸಾವಿತ್ರಿಬಾಫುಲೆ’ ಕೃತಿ ಬಿಡುಗಡೆ

■ ವಿಕ ಸುದ್ದಿಲೋಕ ಚಾಮರಾಜನಗರ

ಶಿಕ್ಷಣ, ಜ್ಞಾನದ ಜತೆಗೆ ಅದನ್ನು ಮೀರಿದ್ದು ಅರಿವು ಎಂದು ಚಾಮರಾಜನಗರ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ.ಕೃಷ್ಣಮೂರ್ತಿ ಹನೂರು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಸೋಮವಾರ ಮಧ್ಯಾಹ್ನ ಅಂತರಸಂತೆ ಪ್ರಕಾಶನ, ರಂಗತರಂಗ ಟ್ರಸ್ಟ್‌ನಿಂದ ಟಿ.ನಾಗರಾಜು ಮತ್ತು ನಗರ್ಲೆ ಡಿ.ಈರೇಶ್ ಸಂಪಾದಕತ್ವದ ‘ಅರಿವಿನ ಬೆಳಕು ಸಾವಿತ್ರಿಬಾಫುಲೆ’ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಇಂದು ನಾವು ಯಾರೋ ಬರೆದ ಇತಿಹಾಸವನ್ನು ಕೇಳಿ ತಿಳಿದುಕೊಳ್ಳುತ್ತಿದ್ದೇವೆ. ನಾವು ಉತ್ಪ್ರೇಕ್ಷೆಯ ಇತಿಹಾಸವನ್ನು ಬಿಟ್ಟು, ಸಾಮಾನ್ಯ ಜನರ ಇತಿಹಾಸವನ್ನು ಹುಡುಕುವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

200 ವರ್ಷಗಳ ಹಿಂದೆ ಸಾವಿತ್ರಿಬಾಫುಲೆ ಹೆಣ್ಣುಮಕ್ಕಳ ಶಿಕ್ಷಣಕ್ಕೆಂದು ಶಾಲೆಗಳನ್ನು ತೆರೆದು, ಉತ್ತಮ ಕೆಲಸ ಮಾಡಿದ್ದಾರೆ. ಶಿಕ್ಷಣ ಪಡೆದ ನಂತರ ಮುಂದೇನು ಮಾಡಬೇಕು ಎನ್ನುವುದು ನಿಮ್ಮ ಮುಂದೆ ಉದ್ಭವಿಸಬಹುದು. ಆ ಸಂದರ್ಭದಲ್ಲಿ ನೀವು ಪಡೆದಿರುವ ಶಿಕ್ಷಣದ ಮೂಲಕ ಮುಂದಿನ ಪೀಳಿಗೆಯು ಸರಿಯಾದ ದಾರಿಯಲ್ಲಿ ಮುನ್ನಡೆಸುವಂಥ ಮಾದರಿಯನ್ನು ತಿಳಿಸಬೇಕು ಎಂದು ಹೇಳಿದರು.

ಕೃತಿ ಕುರಿತು ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಾಪಕಿ ಡಾ. ವಿಜಯಕುಮಾರಿ ಎಸ್.ಕರಿಕಲ್ ಮಾತನಾಡಿ, ಅರಿತರೇ ಶರಣ, ಮರೆತರೇ ಮಾನವ ಎನ್ನುವ ಶರಣರ ವಾಣಿಯಂತೆ ಸಾವಿತ್ರಿಬಾಫುಲೆ ಅವರು ಬೆಳಕಿನೊಳಗೆ ಮಹಾ ಬೆಳಕಾಗಿದ್ದಾರೆ. ಅವರ ಕೃತಿಗಳಲ್ಲಿ ಹೊಸ ಪೀಳಿಗೆಗೆ ಸ್ಫೂರ್ತಿದಾಯಕ ಅಂತಃಸತ್ವ ಸಿಗುವ ಅಂಶಗಳನ್ನು ಚಿತ್ರಿಸಲಾಗಿದೆ. ಕೃತಿ ಪ್ರಕಟಿಸಿರುವ ಲೇಖಕರು ಪ್ರತಿ ವರ್ಷ ಜ.3 ಸಾವಿತ್ರಿಬಾಫುಲೆ ಜನ್ಮದಿನದ ಅಂಗವಾಗಿ ಪ್ರಶಸ್ತಿ ಸ್ಥಾಪಿಸಿ ನೀಡಬೇಕು ಎಂದು ಸಲಹೆ ನೀಡಿದರು.

ಉಮ್ಮತ್ತೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ಡಿ.ಸವಿತಾ ಅವರನ್ನು ಸನ್ಮಾನಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಶಿವಬಸವಯ್ಯ, ಅಂತರಸಂತೆ ಪ್ರಕಾಶನ ಸಂಸ್ಥೆಯ ಟಿ.ನಾಗರಾಜು ಮತ್ತು ನಗರ್ಲೆ ಡಿ.ಈರೇಶ್, ರಂಗತರಂಗ ಟ್ರಸ್ಟ್ ಅಧ್ಯಕ್ಷ ಸೋಮಶೇಖರ ಬಿಸಲ್ವಾಡಿ ಪಾಲ್ಗೊಂಡಿದ್ದರು.

ದೇವನೂರು ಮಹಾದೇವ ಅವರು ತಮ್ಮ ಕೃತಿಯೊಂದರಲ್ಲಿ ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲಕೊಡಲಿವೆ ಎಂದು ಚಿತ್ರಿಸಿದ್ದಾರೆ. ಶಿಕ್ಷಣ, ಜ್ಞಾನವನ್ನು ಮೀರಿಸುವ ಒಂದು ಶಕ್ತಿ ಎಂದರೆ ಅದು ‘ಅರಿವು’ ವಚನಕಾರರು ಕೂಡಾ ಇದೇ ಪದವನ್ನು ಬಳಸಿದ್ದಾರೆ. ಕೃತಿ ಪ್ರಕಾಶಕರು ಸಹ ಅರಿವಿನ ಬೆಳಕು ಎಂಬ ಪದ ಬಳಸಿ ಕೃತಿ ಪ್ರಕಟಿಸಿರುವುದು ಸ್ವಾಗತಾರ್ಹ.

**-ಡಾ.ಕೃಷ್ಣಮೂರ್ತಿ ಹನೂರು**
ಸಂದರ್ಶಕ ಪ್ರಾಧ್ಯಾಪಕ

ವಿಕ ಚಿತ್ರಲೋಕ

ಚಾಮರಾಜನಗರದ ಡಾ.ಬಿಆರ್ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಟಿ. ನಾಗರಾಜು ಮತ್ತು ನಗರ್ಲೆ ಡಿ. ಈರೇಶ್ ಅವರ ಸಂಪಾದಕತ್ವದ ಅರಿವಿನ ಬೆಳಕು ಸಾವಿತ್ರಿ ಬಾ ಫುಲೆ ಕೃತಿ ಬಿಡುಗಡೆ ಮಾಡಲಾಯಿತು.



ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ; ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಅಭಿಪ್ರಾಯ

# ಜಾತಿ ವ್ಯವಸ್ಥೆ ಇರುವವರೆಗೂ ಶೋಷಣೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ, ಮೇಲು-ಕೀಳು ಭೇದಭಾವ ಹೋಗುವುದಿಲ್ಲವೋ ಅಲ್ಲಿಯವರೆಗೂ ಶೋಷಣೆ ನಿಲ್ಲದು' ಎಂದು ಹಿರಿಯ ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ವಿಶ್ವಜ್ಞಾನಿ ಡಾ.ಬಿ.ಆರ್. ಅಂಬೇಡ್ಕರ್ ಅವರ 126ನೇ ಜನ್ಮದಿನಾಚರಣೆ ಅಂಗವಾಗಿ ನಡೆದ 'ಮಾತಿನ ಮಹಾಕಾವ್ಯ' ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು 'ಬುದ್ಧನಗೆಯ ತಾಯಿನದಿ' ಕಾವ್ಯ ಸಂಕಲನ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಸಮಾನತೆಗೆ ಮಾರಕವಾಗಿರುವ ಜಾತಿ ವ್ಯವಸ್ಥೆಯ ನಿರ್ಮೂಲನೆಯಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ದೊರೆಯಲಿದೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಕೇವಲ ರಾಜಕೀಯವಾಗಿ ಸ್ವಾತಂತ್ರ್ಯ ಕಲ್ಪಿಸಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಬೂಟಾಟಿಕೆಯಾಗಿದೆ' ಎಂದರು.

'ದೇಶದಲ್ಲಿ ಸಾವಿರಾರು ವರ್ಷಗಳಿಂದ ನಡೆಯುತ್ತಿದ್ದ ಶೋಷಣೆಯ ನಿರ್ಮೂಲನೆಗೆ ಹಾಗೂ ಶೋಷಿತರ ನೋವಿನ ಕೂಗಿನಿಂದ ಅಂಬೇಡ್ಕರ್ ಜನಿಸಿದರು. ಶೋಷಿತರಿಗೆ ಆಶಾಕಿರಣವಾದರು. ಹೊಸ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು ಎಂದು ತಿಳಿಸಿದರು.

20ನೇ ಶತಮಾನದ ಮಹಾನ್ ಚಿಂತಕರಲ್ಲಿ ಅಂಬೇಡ್ಕರ್ ಮೊದಲಿಗರು ಎಂದ ಅವರು, ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿ ಜಗತ್ತಿನ ಪ್ರಭಾವಿ ವ್ಯಕ್ತಿಗಳು. ಇವರ ನಡುವೆ ವೈಚಾರಿಕವಾಗಿ ಹಲವು ಭಿನ್ನಾಭಿಪ್ರಾಯಗಳಿದ್ದರೂ ಅವು ಪರಸ್ಪರ ಪೂರಕವಾಗಿವೆ' ಎಂದರು.

'ಅಂಬೇಡ್ಕರ್ ಅವರು ಅಲ್ಪಸಂಖ್ಯಾತರಿಗೂ ಸಮಾನತೆ ಕಲ್ಪಿಸಿದವರು. ಮಹಿಳಾ ಸಮಾನತೆಗಾಗಿ ಶ್ರಮಿಸಿದರು. ಹಿಂದೂ ಕೋಡ್ ಬಿಲ್ ಅನುಷ್ಠಾನಕ್ಕೆ ತಂದಿಲ್ಲ ಎಂಬ ಕಾರಣಕ್ಕಾಗಿ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು' ಎಂದು ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, 'ಅಕ್ಷರವನ್ನು ಪಡೆಯಲು ಸಾಧ್ಯವಿಲ್ಲದ ವರ್ಗದಲ್ಲಿ ಅಂಬೇಡ್ಕರ್ ಜನಿಸಿ, ವಿಶ್ವದ ಮಹಾನ್ ಜ್ಞಾನಿಯಾದರು. ದೇಶದ ವರ್ಣ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದರು' ಎಂದು ತಿಳಿಸಿದರು.

'ಹಿಂದೂ ತತ್ವ ಶ್ರೇಷ್ಠ ಎಂದು ನಂಬಿದ ಗಾಂಧೀಜಿ ಅವರನ್ನು ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ಬಿಳಿಯರು ರೈಲಿನಿಂದ ಹೊರಹಾಕಿ ಅವಮಾನಿಸಿ ದಾಗ ಅವರಿಗೆ ಭಾರತದಲ್ಲಿನ ಅಸ್ಪೃಶ್ಯತೆ ಬಗ್ಗೆ ಅರಿವಾಯಿತು. ಆದರೆ, ಅಂಬೇಡ್ಕರ್ ಹುಟ್ಟುವಾಗಲೇ ಅವಮಾನ ಮತ್ತು ಅಸ್ಪೃಶ್ಯತೆಯ ನೋವು ಅನುಭವಿಸಿದರು. ಹಾಗಾಗಿ, ಅವರು ಎಲ್ಲವನ್ನೂ ಪಡೆಯಬೇಕು ಎಂದು ಮುನ್ನುಗ್ಗಿದ್ದರು' ಎಂದರು.

'ಸಂಸ್ಕೃತ, ಇಂಗ್ಲಿಷ್ ಸೇರಿದಂತೆ ಜಗತ್ತಿನ ಹಲವು ಭಾಷೆ ಕಲಿತು ಮಹಾನ್ ಜ್ಞಾನಿಯಾದರು. ಹಿಂದೂ ಸಮಾಜದಲ್ಲಿನ ಶ್ರೇಣೀಕೃತ ಜಾತಿ ಪದ್ಧತಿಯ ವಿರುದ್ಧ ಹೋರಾಡಿದರು' ಎಂದ ಅವರು, 'ದೇಶದಲ್ಲಿ ಎಲ್ಲಿಯವರೆಗೆ ಜಾತಿ ಪದ್ಧತಿ ಇರುತ್ತದೆಯೋ ಅಲ್ಲಿಯವರೆಗೂ ಅಂಬೇಡ್ಕರ್ ಹಾಗೂ ಅವರ ಚಿಂತನೆ ಪ್ರಸ್ತುತವಾಗಿರುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ. ಕೃಷ್ಣಮೂರ್ತಿ ಹನೂರು, ದೀನಬಂಧು ಸಂಸ್ಥೆಯ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ, ಸ್ನಾತಕೋತ್ತರ ಕೇಂದ್ರದ ಉಪನಿರ್ದೇಶಕ ಪ್ರೊ.ಶಿವಬಸವಯ್ಯ, ಉಪನ್ಯಾಸಕ ಭೈರಪ್ಪ ಹಾಜರಿದ್ದರು.

ಡಾ.ಬಿ.ಆರ್. ಅಂಬೇಡ್ಕರ್ ಅವರ 126ನೇ ಜನ್ಮದಿನಾಚರಣೆಯಲ್ಲಿ 'ಬುದ್ಧನಗೆಯ ತಾಯಿನದಿ' ಕವನ ಸಂಕಲನವನ್ನು ಚಿಂತಕ ಪ್ರೊ.ಕೆ. ಮರುಳಸಿದ್ದಪ್ಪ ಬಿಡುಗಡೆ ಮಾಡಿದರು. ಭೈರಪ್ಪ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಶಿವಬಸವಯ್ಯ, ಪ್ರೊ. ಕೃಷ್ಣಮೂರ್ತಿ ಹನೂರು ಹಾಜರಿದ್ದರು

ಮುಖ್ಯಾಂಶಗಳು

- ಜಾತಿ ವ್ಯವಸ್ಥೆಯ ನಿರ್ಮೂಲನೆಯಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ
- ಶೋಷಿತರ ಬದುಕಿಗೆ ಆಶಾಕಿರಣವಾಗಿ ಬಂದ ಅಂಬೇಡ್ಕರ್

ಸಮುದಾಯ ಮತ್ತು ಸಮಾಜದಲ್ಲಿನ ಸವಾಲು, ಸಮಸ್ಯೆಗಳಿಗೆ ಅಂಬೇಡ್ಕರ್ ನೀಡಿರುವ ಸಂವಿಧಾನದಡಿ ಪರಿಹಾರವಿದೆ. ಈ ನಿಟ್ಟಿನಲ್ಲಿ ಜನರು ಆಲೋಚಿಸಬೇಕು

**ಪ್ರೊ.ಕೆ. ಮರುಳಸಿದ್ದಪ್ಪ**
ಹಿರಿಯ ಚಿಂತಕ

ಪತ್ರಿಕೆ : ಪ್ರಜಾವಾಣಿ
ದಿನಾಂಕ : 04-05-2017



# ಆಲೋಚನಾ ಕ್ರಮ ಬದಲಾದಲ್ಲಿ ಸುಧಾರಣೆ ಸಾಧ್ಯ

ಸ್ನಾತಕೋತ್ತರ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಕಾವ್ಯಸಂಕಲನ ಲೋಕಾರ್ಪಣೆ

# ಆಲೋಚನಾ ಕ್ರಮ ಬದಲಾದಲ್ಲಿ ಸುಧಾರಣೆ ಸಾಧ್ಯ

## ಸ್ನಾತಕೋತ್ತರ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಕಾವ್ಯಸಂಕಲನ ಲೋಕಾರ್ಪಣೆ

ಕಾವ್ಯದ ಜೀವಾಳವೇ ಅರ್ಥ, ಲಯ, ಧ್ವನಿ. ಇವು ಮೂರು ಇಂದು ಬಿಡುಗಡೆಯಾಗಿರುವ ಕಾವ್ಯಸಂಕಲನದಲ್ಲಿ ಅಡಕವಾಗಿವೆ. ಆರಾಧನೆ ಹಾಗೂ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ರಚನೆಗಳೇ ಜಾಸ್ತಿ ಇವೆ. 54 ಮಂದಿ ಬರೆದಿರುವ ಕಾವ್ಯಸಂಕಲನ ಅದ್ಭುತವಾಗಿ ಮೂಡಿಬಂದಿದೆ.
– ಕೆ.ಮರುಳಸಿದ್ದಪ್ಪ, ಸಾಹಿತಿ, ಸಂಸ್ಕೃತಿ ಚಿಂತಕ

■ ವಿಕ ಸುದ್ದಿಲೋಕ ಚಾಮರಾಜನಗರ

ವಾಕ್‌ಸ್ವಾತಂತ್ರ್ಯ, ಧಾರ್ಮಿಕ, ಶಿಕ್ಷಣ ಹಕ್ಕುಗಳನ್ನು ಸಂವಿಧಾನದಲ್ಲಿ ಅಳವಡಿ ಸಿದ್ದರೂ, ತಾರತಮ್ಯ ಮುಂದುವರಿ ಯುತ್ತಲೇ ಇದೆ ಎಂದು ಸಾಹಿತಿ, ಸಂಸ್ಕೃತಿ ಚಿಂತಕ ಕೆ.ಮರುಳಸಿದ್ದಪ್ಪ ವಿಷಾದ ವ್ಯಕ್ತಪಡಿಸಿದರು.

ನಗರದ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 126 ನೇ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಾತಿನ ಮಹಾಕಾವ್ಯ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ಕುಪ್ಪಳ್ಳಿ ಎಂ.ಭೈರಪ್ಪ ಮತ್ತು ಮಿತ್ರರು ಸಂಪಾದಿಸಿರುವ 'ಬುದ್ಧನೆಗೆಯ ಮಹಾನದಿ' ಕಾವ್ಯಸಂಕಲನ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದರು.





ಚಾಮರಾಜನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 126 ನೇ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಾತಿನಮಹಾಕಾವ್ಯ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ 'ಬುದ್ಧನೆಗೆಯ ಮಹಾನದಿ' ಕಾವ್ಯಸಂಕಲನ ಲೋಕಾರ್ಪಣೆ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು. (ಎರಡನೇ ಚಿತ್ರ).

ದೇಶದ ಪ್ರಸ್ತುತ ಸ್ಥಿತಿ ಹೇಗಿದೆ ಎಂದರೆ ಮನುಧರ್ಮಶಾಸ್ತ್ರಕ್ಕಿಂತ ಬೇರೆ ಒಂದು ಸಂವಿಧಾನ ಬೇಕೆ ಎಂಬುದು ಬಲಪಂಥೀಯರ ವಾದವಾಗಿದೆ. ಇದರಿಂದ ಹೊರಬರಬೇಕಾದರೆ ಜನರ ಆಲೋಚನೆ ಮಾಡುವ ವಿಧಾನದಲ್ಲಿ ಮಾರ್ಪಾಡಾಗುವ ಅಗತ್ಯವಿದೆ ಎಂದರು.

ಗಾಂಧೀಜಿ ಹಾಗೂ ಅಂಬೇಡ್ಕರ್ ಅವರ 40 ರಿಂದ 50 ವರ್ಷದ ಕಾಲಘಟ್ಟದಲ್ಲಿ ಇಬ್ಬರ ಆಲೋಚನ ವಿಧಾನಗಳು ಬೇರೆಬೇರೆಯಾಗಿವೆ. ಗಾಂಧೀಜಿ ಗ್ರಾಮಗಳು ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾಗಲಿದೆ ಎಂದು ಪ್ರತಿಪಾದಿಸಿದರೆ, ಅಂಬೇಡ್ಕರ್ ಅವರು ಗ್ರಾಮಗಳಲ್ಲಿ ಇಂದಿಗೂ ಜಾತೀಯತೆ, ಅಸ್ಪೃಶ್ಯತೆ ಇದೆ. ಇವು ಜೀವಂತವಾಗಿರುವಾಗ ಗ್ರಾಮಗಳು ಸ್ವರಾಜ್ಯ ಆಗಲು ಹೇಗೆ ಸಾಧ್ಯ ಎಂದಿದ್ದರು. ಯಂತ್ರಗಳು ಮಾನವನಪರಿಶ್ರಮವನ್ನು ತಿಂದು ಹಾಕಲಿವೆ ಎಂದು ಗಾಂಧೀಜಿ ಹೇಳಿದರೆ, ಅಂಬೇಡ್ಕರ್ 'ಆಧುನೀಕತೆಗೆ ತಕ್ಕಂತೆ ಯಂತ್ರಗಳ ಬಳಕೆ ಅಗತ್ಯವಾಗಿದೆ. ವಿಜ್ಞಾನ ಬೆಳೆಯಬೇಕಾದರೆ ಇವುಗಳು ಪರಸ್ಪರ ಪೂರಕ ಎಂಬುದಾಗಿ ಪ್ರತಿಪಾದಿಸಿದ್ದರು ಎಂದರು.

ಮಾತಿನ ಮಹಾಕಾವ್ಯ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಅಕ್ಷರ ತೆರೆಯದೇ ಇದ್ದ ಸಮುದಾಯದಲ್ಲಿ ಹುಟ್ಟಿದ ಅಂಬೇಡ್ಕರ್ ಅವರು ನಾನಾ ಸವಾಲುಗಳನ್ನು ಎದುರಿಸಿ ಮುಂದೆ ಬಂದರು. 12 ನೇ ಶತಮಾನದ ವಚನಕಾರರಾದ ಬಸವಣ್ಣ ಅವರು ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದರೂ, ಅಲ್ಲಿಯ ಕಂದಾಚಾರಗಳಿಗೆ ಬೇಸತ್ತು ಹೊರಬಂದು ಶ್ರಮಿಕವರ್ಗದವರ ಜತೆ ಸೇರಿ ಸ್ವಾಭಿಮಾನದ ಬದುಕನ್ನು ತೋರಿಸಿಕೊಟ್ಟರು. ಕೋಮುವಾದಿ ಮನಸ್ಸುಗಳು ಇಡೀ ಸಮುದಾಯವನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಲಿಪಶು ಮಾಡಲು ಯತ್ನಿಸುತ್ತಿವೆ. ಇದರ ಬಗ್ಗೆ ಜಾಗೃತಿವಹಿಸುವ ಅಗತ್ಯವಿದೆ ಎಂದರು.

ಕುಲಪುರಾಣಗಳು ಮನುಷ್ಯ ಕೇಂದ್ರಿತವಾಗಿದ್ದರೆ ಮಹಾಕಾವ್ಯಗಳು ಜೀವಕೇಂದ್ರಿತವಾಗಿರುತ್ತವೆ. ಕಾವ್ಯಗಳು ಎಷ್ಟು ಪ್ರಾಚೀನವೋ ಅಷ್ಟೇ ವರ್ತಮಾನದಲ್ಲೂ ಪ್ರಸ್ತುತವೆನಿಸುತ್ತವೆ ಎಂದರು.

ಸಂದರ್ಶಕ ಪ್ರಾಧ್ಯಾಪಕ ಕೃಷ್ಣಮೂರ್ತಿ ಹನೂರು, ವಿಮರ್ಶಾ ಲೇಖನ ಕುರಿತ ಸ್ಪರ್ಧೆಗಳಿಗೆ ಬಹುಮಾನ ವಿತರಿಸಿದರು. ಕೇಂದ್ರದ ನಿರ್ದೇಶಕ ಶಿವಬಸವಯ್ಯ, 'ಬುದ್ಧನೆಗೆಯ ಮಹಾನದಿ' ಕಾವ್ಯಸಂಕಲನ ಸಂಪಾದಕ ಕುಪ್ಪಳ್ಳಿ ಎಂ.ಭೈರಪ್ಪ ವಿದ್ಯಾರ್ಥಿಗಳು ಹಾಜರಿದ್ದರು.

---

ದಿನಾಂಕ: 29/09/17

# 'ಕೃಷಿ'ಯೇ ಧ್ಯಾನ–ಯೋಗವೆಂದ ವಚನಕಾರರು

## ಅಂಬೇಡ್ಕರ್ ಕೇಂದ್ರ ಕಾರ್ಯಕ್ರಮದಲ್ಲಿ ಡಾ.ವಿಜಯಕುಮಾರಿ ಕರಿಕಲ್

ಚಾಮರಾಜನಗರ,ಸೆ.೨೮– ಕೃಷಿ ಒಂದು ರೀತಿಯ ಧ್ಯಾನ ಮತ್ತು ಯೋಗವಿದ್ದಂತೆ. ಇದನ್ನು ಆಧ್ಯಾತ್ಮಿಕವಾಗಿ ಸ್ವೀಕರಿಸಬೇಕು ಮತ್ತು ಕಾಯಕನಿಷ್ಠೆ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಮಾನವ ಕುಲ ನೆಮ್ಮದಿಯಿಂದ ಇರಲು ಸಾಧ್ಯವೆಂದು ವಚನಕಾರರು ಬಹಳ ಹಿಂದೆಯೇ ಸಾರಿದ್ದಾರೆ ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಡಾ.ವಿಜಯಕುಮಾರಿ ಎಸ್.ಕರಿಕಲ್ ಹೇಳಿದರು.

ಮೈಸೂರು ವಿವಿಯ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಸಮೀಪದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ (ಸುವರ್ಣ ಗಂಗೋತ್ರಿ) ಸಭಾಂಗಣದಲ್ಲಿ 'ವಚನಗಳಲ್ಲಿ ಕೃಷಿ ರೂಪಕಗಳು' ಕುರಿತು ನಡೆದ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ವಚನ ಸಾಹಿತ್ಯದಲ್ಲಿ ಅಲ್ಲಮ ಪ್ರಭು, ಬಸವಣ್ಣ, ಕಾಡಸಿದ್ದೇಶ್ವರ, ಅರಿವಿನ ಮಾರಿ ತಂದೆ ಇನ್ನೂ ಮೊದಲಾದ ವಚನಕಾರರು ವಚನ ಸಾಹಿತ್ಯದಲ್ಲಿ ಕೃಷಿ ರೂಪಕಗಳನ್ನು ಬಳಸಿದ್ದಾರೆ. ಇವತ್ತಿನ ಆಧುನಿಕತೆಯ ಯುಗದಲ್ಲಿ ಲೌಕಿಕ ವ್ಯವಹಾರದಲ್ಲಿ ಕೃಷಿಯನ್ನು ಅನುಸರಿಸಿ ಬದುಕಬೇಕಾದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು, ಈ ಬಗ್ಗೆ ಗಂಭೀರ ಚಿಂತನೆ ನಡೆಯುತ್ತಿದೆ ಎಂದರು.




ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ವಿಶೇಷ ಉಪನ್ಯಾಸ ಮಾಲೆಯಲ್ಲಿ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿದರು. ಡಾ.ವಿಜಯಕುಮಾರಿ ಎಸ್.ಕರಿಕಲ್, ಡಾ.ಚಂದ್ರಶೇಖರಯ್ಯ, ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಮತ್ತಿತರರು ಚಿತ್ರದಲ್ಲಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಚನಕಾರರು ಕಾಯಕ ಜೀವಿಗಳಾಗಿಯೇ ಜೀವಿಸಿದವರು. ಕಾಯಕವೇ ಕೈಲಾಸ ಎಂಬುದು ವಚನಕಾರರ ಕಾಯಕ ನಿಷ್ಠೆಯನ್ನು ಅಭಿವ್ಯಕ್ತಪಡಿಸುತ್ತದೆ ಎಂದರಲ್ಲದೆ, ರೈತ ಎಂಬ ಶಬ್ದ ಜಾತಿ ಸೂಚಕವಲ್ಲ ವೃತ್ತಿ ಸೂಚಕವಾಗಿದೆ ಎಂದು ತಿಳಿಸಿದರು.

ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಡಾ.ಚಂದ್ರಶೇಖರಯ್ಯ ಮಾತನಾಡಿದರು.

ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಕೃಷ್ಣಮೂರ್ತಿ ಹನೂರು, ಕನ್ನಡ ವಿಭಾಗದ ಉಪನ್ಯಾಸಕರಾದ ಡಾ.ಭೈರಪ್ಪ, ಮಹೇಶ್‌ಬಾಬು, ಬಸವಣ್ಣ, ತಮ್ಮೇಗೌಡ, ರಾಣಿ ಮೊದಲಾದವರು ಭಾಗವಹಿಸಿದ್ದರು.

# ಚಾಮರಾಜನಗರದಲ್ಲಿ ವಿಶ್ವ ಪುಸ್ತಕ ದಿನ ಆಚರಣೆ

## ಓದುವ ಸಂಸ್ಕೃತಿ ಬೆಳೆಸಿಕೊಳ್ಳಲು ಯುವಜನಾಂಗಕ್ಕೆ ಕುಲಸಚಿವೆ ಡಿ.ಭಾರತಿ ಕರೆ



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ವಿಶ್ವಪುಸ್ತಕ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು. ಪ್ರೊ.ಕೃಷ್ಣಮೂರ್ತಿ ಹನೂರು, ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಸಿ.ಎಂ.ನರಸಿಂಹಮೂರ್ತಿ, ಬಸವರಾಜು ಇತರರು ಚಿತ್ರದಲ್ಲಿದ್ದಾರೆ.

ಚಾಮರಾಜನಗರ,ಏ.೨೪- ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಯುವ ಜನಾಂಗ ಹೆಚ್ಚು ಓದುವ ಹಾಗೂ ಬರೆಯುವ ಸಂಸ್ಕೃತಿಯನ್ನು ರೂಢಿಸಿಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಡಿ.ಭಾರತಿ ಕರೆ ನೀಡಿದರು.

ಸಮೀಪದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಸೋಮವಾರ ಏರ್ಪಡಿಸಲಾಗಿದ್ದ 'ಓದು ಮತ್ತು ಬರಹ ಕುರಿತ ಸಂವಾದ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾರ್ಯಕ್ರಮ ಬಹಳ ವಿಶೇಷವಾದುದು. ಇಂತಹ ಆಚರಣೆಗಳು ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ. ಪ್ರೇಮಿಗಳ ದಿನಾಚರಣೆ ಪರ-ವಿರೋಧಗಳ ನಡುವೆ ನಡೆಯುತ್ತದೆ. ಆದರೆ ವಿಶ್ವ ಪುಸ್ತಕ ದಿನಾಚರಣೆಗೆ ಯಾವುದೇ ಅಡ್ಡಿ ಆತಂಕಗಳಿಲ್ಲದಿದ್ದರೂ ಹೆಚ್ಚು ದಿನ ಪ್ರಚಲಿತವಾಗಿಲ್ಲ ಎಂದು ಬೇಸರಿಸಿದರು.

ಹೆಚ್ಚು ಪುಸ್ತಕಗಳನ್ನು ಓದಿದವರು ಡಾ.ಬಿ.ಆರ್.ಅಂಬೇಡ್ಕರ್. ಅವರಲ್ಲಿ ಅಗಾಧ ಪುಸ್ತಕ ರಾಶಿಯಿತ್ತು. ಅವರು ದೇಶ-ವಿದೇಶಗಳಲ್ಲಿ ಹೆಚ್ಚು ಓದು-ಬರಹದಲ್ಲಿ ತೊಡಗಿದ್ದರಿಂದಲೇ ವಿಶ್ವಜ್ಞಾನಿಯಾಗಲು ಸಾಧ್ಯವಾಯಿತು. ಅಲ್ಲದೆ ಅನೇಕ ಪದವಿ ಪಡೆಯಲು ನೆರವಾಯಿತು. ಅಂಬೇಡ್ಕರ್ ಅವರಷ್ಟು ಪದವಿ ಪಡೆದವರು ವಿಶ್ವದಲ್ಲೇ ಇಲ್ಲ ಎಂದು ನೆನೆದರು.

ಶೇ.೯೦ರಷ್ಟು ಯುವಕರು ಮೊಬೈಲ್, ಇಂಟರ್‌ನೆಟ್‌ನಲ್ಲಿ ಮುಳುಗಿದ್ದಾರೆ. ಇದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ವಿದ್ಯಾರ್ಥಿಗಳು, ಯುವ ಜನಾಂಗ ಓದು-ಬರಹ ರೂಢಿಸಿಕೊಂಡು ಒಳ್ಳೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿರಿಯ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಮುಖ್ಯ ಭಾಷಣ ಮಾಡಿ, ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದುದು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಲಂಬಿಯಾದಲ್ಲಿ ಹಗಲು-ರಾತ್ರಿ ನಿರಂತರವಾಗಿ ಪುಸ್ತಕಗಳನ್ನು ಹೆಚ್ಚು ಅಭ್ಯಾಸ ಮಾಡಿದ್ದರಿಂದಲೇ ಅವರು ವಿಶ್ವಜ್ಞಾನಿಯಾದರು. ಅವರಂತೆ ವಿದ್ಯಾರ್ಥಿಗಳು ಓದು-ಬರಹ ಮೈಗೂಡಿಸಿಕೊಂಡು ವಿಶ್ವ ಮಾನವರಾಗಬೇಕು ಎಂದರು.

ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಆಶಯ ನುಡಿಗಳನ್ನಾಡಿ, ಡಾ.ರಾಜ್‌ಕುಮಾರ್ ೪ನೇ ತರಗತಿ ಓದಿದ್ದರೂ ಅವರಲ್ಲಿದ್ದ ಭಾಷೆ, ನಟನಾ ಪ್ರೌಢಿಮೆಯನ್ನು ಜಗತ್ತಿನ ಯಾವ ಕಲಾವಿದರಲ್ಲೂ ಕಾಣಲು ಸಾಧ್ಯವಿಲ್ಲ ಎಂದು ಹೇಳಿದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕ ಡಾ.ಮಹದೇವಮೂರ್ತಿ ಉಪನ್ಯಾಸ ನೀಡಿದರು. ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್ ಹರದನಹಳ್ಳಿ, ರಂಗವಾಹಿನಿ ಪ್ರಧಾನ ಕಾರ್ಯದರ್ಶಿ ಶಿವಕುಮಾರ್‌ಕೆಂಪನಪುರ, ಸಿರಿಗನ್ನಡ ಪುಸ್ತಕ ಮಳಿಗೆ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್ ಮಾಂಬಳ್ಳಿ, ಡಾ.ಕುಪ್ಪನಹಳ್ಳಿ ಭೈರಪ್ಪ ಮತ್ತಿತರರು ಹಾಜರಿದ್ದರು.

> ಹೆಚ್ಚು ಓದು-ಬರಹ ಇಲ್ಲದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವ ವ್ಯವಸ್ಥೆ ಸರಿಯಿಲ್ಲ. ಸಂದರ್ಶನ ಸಂದರ್ಭಗಳಲ್ಲಿ ಎಂ.ಎ, ಎಂ.ಫಿಲ್ ನವರಿಗೂ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆದರೆ, ಕೆಲ ವಿದ್ಯಾರ್ಥಿಗಳು ಅಂಥ ಸಾಮಾನ್ಯ ಪ್ರಶ್ನೆಗಳಿಗೂ ಉತ್ತರಿಸುವಲ್ಲಿ ವಿಫಲರಾಗುತ್ತಿರುವುದು ವಿಪರ್ಯಾಸ.
>
> -ಡಿ.ಭಾರತಿ, ಕುಲಸಚಿವೆ.

> ಇಡೀ ಜಗತ್ತಿಗೆ ಹಂಚುವಷ್ಟು ಜ್ಞಾನಾರ್ಜನೆ ಭಾರತದಲ್ಲಿದ್ದರೂ ಅದು ಸರಿಯಾಗಿ ಹಂಚಿಕೆಯಾಗಲಿಲ್ಲ. ಜ್ಞಾನಾರ್ಜನೆ ಅಗ್ರಹಾರ ಬೀದಿಯ ಮನೆಗಳಲ್ಲೇ ಉಳಿದು ಬಿಟ್ಟಿತು. ಅದು ಗೋಡೆ ದಾಟಿ ಬರಲೇ ಇಲ್ಲ.
>
> -ಪ್ರೊ.ಕೃಷ್ಣಮೂರ್ತಿ ಹನೂರು, ಹಿರಿಯ ವಿದ್ವಾಂಸ.

# ದೊರಕದ ಸಂಸ್ಕಾರಯುತ ಶಿಕ್ಷಣ

## ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಡಿ.ಭಾರತಿ ವಿಷಾದ

■ ವಿಜಯವಾಣಿ ಸುದ್ದಿಜಾಲ ಚಾಮರಾಜನಗರ

ಪ್ರಸ್ತುತ ಪುಸ್ತಕದ ಓದು, ಬರಹ ಹಣ ಗಳಿಕೆಯ ವೃತ್ತಿಯಾಗಿದೆ. ಯುವ ಜನಾಂಗಕ್ಕೆ ಸಂಸ್ಕಾರಯುತ ಶಿಕ್ಷಣ ಸಿಗುತ್ತಿಲ್ಲ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಡಿ.ಭಾರತಿ ವಿಷಾದ ವ್ಯಕ್ತಪಡಿಸಿದರು.

ನಗರ ಹೊರವಲಯದ ಬೇಡರಪುರ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಓದು ಮತ್ತು ಬರಹ ಕುರಿತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಚಾಮರಾಜನಗರದ ಬೇಡರಪುರ ಬಳಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಿದ್ದ ಓದು ಮತ್ತು ಬರಹ ಕುರಿತ ಸಂವಾದ ಕಾರ್ಯಕ್ರಮವನ್ನು ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು.

ಓದು, ಬರಹ ವ್ಯಕ್ತಿಯನ್ನು ಬೆಳೆಸಲು ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಗ್ರಂಥಾಲಯದಲ್ಲಿಯೇ ಹೆಚ್ಚು ಹೊತ್ತು ಕಳೆಯಬೇಕು. ಓದುವ ಸಂಸ್ಕೃತಿಯಿಂದ ಒಳ್ಳೆಯ ಮೌಲ್ಯಗಳನ್ನು ರೂಢಿಸಿಕೊಳ್ಳಲು ಸಾಧ್ಯ. ಪ್ರಸ್ತುತ ಶಿಕ್ಷಣ ದೇಶದ ಯುವ ಜನಾಂಗದಲ್ಲಿ ಮೌಲ್ಯಗಳನ್ನು ಬೆಳೆಸುವಲ್ಲಿ ವಿಫಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತೀಯ ಪರಂಪರೆ ಶ್ರಮ ಸಂಸ್ಕೃತಿಯಾಗಿದೆ. ಅಮೆರಿಕಾದಲ್ಲಿನ ನಾಸಾ ಸೇರಿದಂತೆ ಇತರೆ ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಮೂವರಲ್ಲಿ ಒಬ್ಬರು ಭಾರತೀಯರಿದ್ದಾರೆ. 2016ರಲ್ಲಿ ವಿಶ್ವಸಂಸ್ಥೆಯು ವಿಶ್ವಜ್ಞಾನಿ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಗುರುತಿಸಿತು. ಅಂಬೇಡ್ಕರ್ ಅವರು ಓದು, ಬರಹ ಎರಡನ್ನು ಮಾಡಿದ್ದ ಪರಿಣಾಮ ವಿಶ್ವಜ್ಞಾನಿಯಾದರು ಎಂದರು.

ಡಾ.ಅಂಬೇಡ್ಕರ್ ಅವರು ತಮ್ಮ ಗ್ರಂಥಾಲಯದಲ್ಲಿ 50 ಸಾವಿರ ಪುಸ್ತಕವನ್ನು ಹೊಂದಿದ್ದರು. ಸಾವಿರಾರು ವರ್ಷ ಬದುಕಿ ಮಾಡುವ ಸಾಧನೆಯನ್ನು ಕಡಿಮೆ ಅವಧಿಯಲ್ಲಿ ಮಾಡಿದರು. ವಿದ್ಯಾರ್ಥಿಗಳು ಮೊಬೈಲ್‌ಗಳನ್ನು ಅಗತ್ಯವಿರುವಷ್ಟು ಮಾತ್ರ ಬಳಸಿ. ಇಂಟರ್‌ನೆಟ್, ಮೊಬೈಲ್ ಜೀವನವಲ್ಲ, ಅದಕ್ಕೂ ಮೀರಿದ ಜೀವನವನ್ನು ನಿಮ್ಮದಾಗಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಹಿರಿಯ ವಿದ್ವಾಂಸ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಎಲ್ಲ ಕ್ಷೇತ್ರಗಳಲ್ಲಿಯೂ ಹೆಣ್ಣು ಮಕ್ಕಳು ಸಾಧನೆಗೈಯುತ್ತಿರುವುದು ಸಂತಸದಾಯಕ. ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣದೆಡೆ ಮುಖಮಾಡಿರುವುದು ಅಭಿವೃದ್ಧಿಯ ಸಂಕೇತ ಎಂದರು.ಅಕ್ಷರ ಜ್ಞಾನ ಆತ್ಮ ಸಂತೋಷವನ್ನು ತಂದುಕೊಡುತ್ತದೆ. ಭಾಷೆಗಿಂತಲೂ ಅಕ್ಷರ ತುಂಬಾ ಕಷ್ಟ. ಪುಸ್ತಕ, ಜ್ಞಾನ, ಜ್ಯೋತಿ ಗಳು ಒಂದೇ ಆಗಿವೆ. ಜಿಲ್ಲೆಯಲ್ಲಿ ವೈ.ಜಿ.ಕೃಷ್ಣಮೂರ್ತಿ, ಡಾ.ರಾಜ್‌ಕುಮಾರ್, ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಇತರೆ ಮಹಾನ್ ಪುರುಷರ ಜನ್ಮ ತಾಳಿರುವುದು ನಮ್ಮೆಲ್ಲರ ಹೆಮ್ಮೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ತಾಲೂಕು ಕಸಾಪ ಅಧ್ಯಕ್ಷ ಬಿ.ಬಸವರಾಜು, ಗೋವಿಂದರಾಜು, ನಟರಾಜ್, ನಂಜುಂಡಸ್ವಾಮಿ, ಸೌಭಾಗ್ಯ, ಶಿವಕುಮಾರ್ ಇತರರಿದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಓದು ಮತ್ತು ಬರಹ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.



# ಜ್ಞಾನಾರ್ಜನೆಗೆ ಓದು, ಬರಹ ಪೂರಕ

## ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ.ಭಾರತಿ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ವಿದ್ಯಾರ್ಥಿ ದಿಸೆಯಿಂದಲೇ ಓದು, ಬರಹದ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಇದು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಪೂರಕವಾಗಿದೆ' ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ.ಭಾರತಿ ಹೇಳಿದರು.

ತಾಲ್ಲೂಕಿನ ಬೇಡರಪುರ ಗ್ರಾಮದ ಸಮೀಪದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ವಿಶ್ವಪುಸ್ತಕ ದಿನಾಚರಣೆ' ಅಂಗವಾಗಿ ಓದು ಮತ್ತು ಬರಹ ಕುರಿತು ನಡೆದ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಪುಸ್ತಕ ದಿನಾಚರಣೆ ಬಹಳ ವಿಶೇಷವಾಗಿದೆ. ಇಂತಹ ದಿನಾಚರಣೆ ಈಚಿನ ದಿನಗಳಲ್ಲಿ ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ ಎಂದರು.

ಅಂಬೇಡ್ಕರ್ ಅವರು ಹೆಚ್ಚು ಪುಸ್ತಕ ಓದುತ್ತಿದ್ದರು. ಹಾಗಾಗಿ, ಅವರು ವಿಶ್ವಜ್ಞಾನಿಯಾಗಲು ಸಾಧ್ಯವಾಯಿತು. ಹೆಚ್ಚು ಪದವಿ ಪಡೆಯಲು ನೆರವಾಯಿತು ಎಂದು ತಿಳಿಸಿದರು.

ದೇಶದಲ್ಲಿ ಶೇ 90ರಷ್ಟು ಯುವಜನರು ಮೊಬೈಲ್, ಇಂಟರ್‌ನೆಟ್‌ನಲ್ಲಿ ಕಾಲ ಕಳೆಯುತ್ತಿದ್ದಾರೆ. ಇದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಇದನ್ನು ತಪ್ಪಿಸಲು ಎಲ್ಲರೂ ವಿದ್ಯಾರ್ಥಿ ದಿಸೆಯಿಂದಲೇ ಹೆಚ್ಚು ಓದು-ಬರಹ ರೂಢಿಸಿಕೊಂಡು ಒಳ್ಳೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಇಡೀ ಜಗತ್ತಿಗೆ ಹಂಚಿಕೆ ಮಾಡುವಷ್ಟು ಜ್ಞಾನ ಭಾರತದಲ್ಲಿದೆ. ಆದರೆ, ಅದು ಸರಿಯಾಗಿ ಬಳಕೆಯಾಗುತ್ತಿಲ್ಲ. ಜ್ಞಾನಾರ್ಜನೆ ಅಗ್ರಹಾರ ಬೀದಿಯಲ್ಲಿರುವ ಮನೆಗಳಲ್ಲಿಯೇ ಉಳಿದುಬಿಟ್ಟಿದೆ ಎಂದು ವಿಷಾದಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಲಂಬಿಯಾದಲ್ಲಿ ಹಗಲು, ರಾತ್ರಿಯ ಅರಿವಿಲ್ಲದೆ ಓದು-ಬರಹದಲ್ಲಿ ಮಗ್ನರಾಗಿದ್ದರು. ಆದ್ದರಿಂದಲೇ ಅವರು ವಿಶ್ವಜ್ಞಾನಿಯಾದರು. ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದದ್ದು, ವಿದ್ಯಾರ್ಥಿಗಳು ಧೃಡ ಮನಸ್ಸಿನಿಂದ ಜ್ಞಾನ ಮಾರ್ಗದಲ್ಲಿ ಸಾಗಿ ವಿಶ್ವ ಮಾನವರಾಗಬೇಕು ಎಂದರು.

ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್ ಹರದನಹಳ್ಳಿ, ರಂಗವಾಹಿನಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಮಾರಾಟ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್‌ಮಾಂಬಳ್ಳಿ, ಉಪನ್ಯಾಸಕರಾದ ಮಹದೇವಮೂರ್ತಿ, ಕುಪ್ಪನಹಳ್ಳಿ ಭೈರಪ್ಪ ಹಾಜರಿದ್ದರು.

ಚಾಮರಾಜನಗರ ತಾಲ್ಲೂಕಿನ ಬೇಡರಪುರ ಗ್ರಾಮದ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ 'ವಿಶ್ವಪುಸ್ತಕ ದಿನಾಚರಣೆ' ಅಂಗವಾಗಿ ಓದು ಮತ್ತು ಬರಹ ಕುರಿತು ನಡೆದ ಸಂವಾದ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು



ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಡಿ.ಭಾರತಿ ಅಭಿಮತ

# ಓದು-ಬರಹದಿಂದ ಜ್ಞಾನಾರ್ಜನೆ ವೃದ್ಧಿ

● ವಿಶ್ವವಾಣಿ ಸುದ್ದಿಮನೆ ಚಾಮರಾಜನಗರ

ಹೆಚ್ಚು ಓದು-ಬರಹದಿಂದ ಪಾತಾಳದಿಂದ ಆಕಾಶದೆತ್ತರಕ್ಕೂ ಬೆಳೆಯಲು ಸಾಧ್ಯವಾಗುತ್ತದೆ ಎಂದು ಮೈಸೂರು ಮಾನಸ ಗಂಗೋತ್ರಿ ವಿಶ್ವವಿದ್ಯಾನಿಲಯದ ಕುಲಸಚಿವೆ ಡಿ. ಭಾರತಿ ಹೇಳಿದರು.

ತಾಲೂಕಿನ ಬೇಡರಪುರ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವಪುಸ್ತಕ ದಿನಾಚರಣೆ ಬಹಳ ವಿಶೇಷ ದಿನಾಚರಣೆಯಾಗಿದೆ. ಇಂತಹ ದಿನಾಚರಣೆ ದಿನವನ್ನು ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ. ಪ್ರೇಮಿಗಳ ದಿನಾಚರಣೆ ಪ್ರಚಲಿತವಾಗಿದ್ದು, ಅನೇಕ ಪರ-ವಿರೋಧಗಳ ನಡುವೆ ನಡೆಯುತ್ತದೆ. ಆದರೆ ವಿಶ್ವ ಪುಸ್ತಕ ದಿನಾಚರಣೆಗೆ ಯಾವುದೇ ಅಡ್ಡಿ ಆತಂಕವಿಲ್ಲ ಆದರೂ ಸಹ ವಿಶ್ವ ಪುಸ್ತಕ ದಿನಾಚರಣೆ ದಿನ ಪ್ರಚಲಿತವಾಗಿಲ್ಲ ಎಂದರು.

ಏ.14ರಂದು ಅಂಬೇಡ್ಕರ್ ಜಯಂತಿ ಏ. 23ರಂದು ವಿಶ್ವ ಪುಸ್ತಕ ದಿನಾಚರಣೆ. ಲಂಡನ್ ಗ್ರಂಥಾಲಯದಲ್ಲಿ ಹೆಚ್ಚು ಪುಸ್ತಕ ತೆಗೆದುಕೊಂಡು ಓದಿದ್ದು ಡಾ. ಬಿ.ಆರ್.ಅಂಬೇಡ್ಕರ್ ಅವರಲ್ಲಿ ಅಗಾಧ ಪುಸ್ತಕ ರಾಶಿಯಿತ್ತು. ಅಂಬೇಡ್ಕರ್ ದೇಶ-ವಿದೇಶಗಳಲ್ಲಿ ಹೆಚ್ಚು ಓದು-ಬರಹ ಮಾಡಿದ್ದರಿಂದಲೇ ಅಂಬೇಡ್ಕರ್ ವಿಶ್ವ ಜ್ಞಾನಿಯಾಗಲು ಸಾಧ್ಯವಾಯಿತು. ಅಲ್ಲದೆ ಅನೇಕ ಪದವಿ ಪಡೆಯಲು ನೆರವಾಯಿತು. ಅಂಬೇಡ್ಕರ್‌ರಷ್ಟು ಪದವಿ ಪಡೆದವರು ವಿಶ್ವದಲ್ಲೇ ಇಲ್ಲ ಎಂದರು.

ಹೆಚ್ಚು ಓದು-ಬರಹ ಇಲ್ಲದ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವ ವ್ಯವಸ್ಥೆ ಸರಿಯಲ್ಲ, ಸಂದರ್ಶನ ಸಂದರ್ಭಗಳಲ್ಲಿ ಎಸ್‌ಎಸ್‌ಎಲ್‌ಸಿ ವರಗಿನ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆದರೆ ಕೆಲವು ವಿದ್ಯಾರ್ಥಿಗಳು ಸಾಮಾನ್ಯ ಪ್ರಶ್ನೆಗಳಿಗೂ ಉತ್ತರಿಸುವಲ್ಲಿ ವಿಫಲರಾಗುತ್ತಿದ್ದಾರೆ ಎಂದರು.

ವಿಶ್ವ ಪುಸ್ತಕ ದಿನಾಚರಣೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ಓದುವ ಸಂಸ್ಕೃತಿ ಬೆಳೆಯಲು ಪ್ರತಿಜ್ಞೆ ಮಾಡಬೇಕು. ನಿತ್ಯ ಓದುವ. ಬರೆಯುವ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರಿಗೂ ಈ ಮೂಲಕ ವಿಶ್ವ ಪುಸ್ತಕ ದಿನಾಚರಣೆ ಶುಭಾಶಯ ತಿಳಿಸಿದರು.

ಹಿರಿಯ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ ಹನೂರು ಮುಖ್ಯ ಭಾಷಣ ಕಾರರಾಗಿ ಭಾಗವಹಿಸಿ ಮಾತನಾಡಿ, ಇಡೀ ಜಗತ್ತಿಗೆ ಹಂಚುವ ಜ್ಞಾನಾರ್ಜನೆ ಭಾರತದಲ್ಲಿತ್ತು. ಆದರೆ ಆ ಜ್ಞಾನ ಸರಿಯಾಗಿ ಹಂಚಿಕೆಯಾಗಿಲ್ಲ, ಜ್ಞಾನಾರ್ಜನೆ ಅಗ್ರಹಾರ ಬೀದಿಯಲ್ಲಿರುವ ಮನೆಗಳಲ್ಲಿ ಉಳಿದು ಬಿಟ್ಟು. ಅದು ಗೋಡೆ ದಾಟಿ ಬರಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಲಂಬಿಯಾದಲ್ಲಿ ಹಗಲು- ರಾತ್ರಿ ಗೊತ್ತಿಲ್ಲದೆ ಹೆಚ್ಚು ಓದು-ಬರಹ ಮಾಡಿದರಿಂದಲೇ ಅವರು ವಿಶ್ವ ಜ್ಞಾನಿಯಾದರು. ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದದ್ದು, ವಿದ್ಯಾರ್ಥಿಗಳು ಓದು-ಬರಹ ಮೈಗೂಡಿಸಿಕೊಂಡು ವಿಶ್ವಮಾನವರಾಗಬೇಕು ಎಂದರು.

ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಆಶಯ ನುಡಿಗಳನ್ನಾಡಿದರು. ಡಾ. ರಾಜ್‌ಕುಮಾರ್ ಅವರು 4ನೇ ತರಗತಿ ಓದಿದ್ದರೂ ಸಹ ಅವರ ಭಾಷೆ, ನಟನ ಪ್ರೌಢಿಮೆ ಜಗತ್ತಿನ ಯಾವ ಕಲಾವಿದರಲ್ಲೂ ಕಾಣಲು ಸಾಧ್ಯವಿಲ್ಲ.

ಚಾಮರಾಜನಗರ ಜಿಲ್ಲೆಯಲ್ಲಿ ಶ್ರೀಮಹದೇಶ್ವರ, ಮಂಟೇಸ್ವಾಮಿ, ನಿಜಗುಣಶಿವಯೋಗಿಗಳು, ಮುಪ್ಪಿನ ಷಡಕ್ಷರಿ, ಯಡಿಯೂರು ಸಿದ್ದಲಿಂಗೇಶ್ವರ. ಸಂಚಿಹೊನ್ನಮ್ಮ ಹಾಗೂ ಡಾ.ರಾಜ್‌ಕುಮಾರ್ ಅಂತಹ ಮಹನೀಯರು ಹುಟ್ಟಿರುವ ಜಿಲ್ಲೆ ನಮ್ಮದು. ಇಲ್ಲಿ ಹುಟ್ಟಿರುವ ನಾವೇ ಧನ್ಯರು ಎಂದು ಹೇಳಿದರು.

ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಧ್ಯಾಪಕ ಡಾ.ಮಹದೇವಮೂರ್ತಿ ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್‌ಹರದನಹಳ್ಳಿ, ರಂಗವಾಹಿನಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಕೆಂಪನಪುರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಮಾರಾಟ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್ ಮಾಂಬಳ್ಳಿ, ಡಾ. ಕುಪ್ಪನಹಳ್ಳಿಭೈರಪ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

### ಓದು-ಬರಹ ರೂಢಿಸಿಕೊಳ್ಳಿ

ಶೇ.90 ರಷ್ಟು ಯುವಕರು ಮೊಬೈಲ್ ಇಂಟರ್‌ನೆಟ್‌ನಲ್ಲಿ ಮುಳುಗಿದ್ದಾರೆ. ಇದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿದೆ. ಆದರಿಂದ ಕಾಲೇಜು ವಿದ್ಯಾರ್ಥಿಗಳು, ಯುವ ಜನಾಂಗವು ಹೆಚ್ಚು ಓದು-ಬರಹ ರೂಢಿಸಿಕೊಂಡು ಒಳ್ಳೆಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಸಮಾರಂಭವನ್ನು ಕುಲಸಚಿವೆ ಡಿ. ಭಾರತಿ ಉದ್ಘಾಟಿಸಿದರು.

# ಹೆಚ್ಚು ಓದು–ಬರಹದಿಂದ ಜ್ಞಾನಾರ್ಜನೆ ವೃದ್ಧಿ

## ವಿಶ್ವಪುಸ್ತಕ ದಿನಾಚರಣೆ ಓದು-ಬರಹ ಕುರಿತ ಸಂವಾದದಲ್ಲಿ ಮೈಸೂರು ವಿವಿ ಕುಲಸಚಿವೆ ಡಿ.ಭಾರತಿ



ಚಾ.ನಗರ ತಾಲೂಕಿನ ಬೇಡರಪುರ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಓದು–ಬರಹ ಕುರಿತು ಸಂವಾದವನ್ನು ಮೈಸೂರು ವಿವಿ ಕುಲಸಚಿವೆ ಡಿ.ಭಾರತಿ ಉದ್ಘಾಟಿಸಿದರು

ಚಾಮರಾಜನಗರ, ಏ.23– ಹೆಚ್ಚು ಓದು–ಬರಹದಿಂದ ಜ್ಞಾನಾರ್ಜನೆ ವೃದ್ಧಿಸುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವೆ ಡಿ.ಭಾರತಿ ಹೇಳಿದರು.

ತಾಲೂಕಿನ ಬೇಡರಪುರ ಸಮೀಪದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ, ರಂಗವಾಹಿನಿ ಸಂಸ್ಥೆ ಹಾಗೂ ಡಾ.ಬಿ. ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ವಿಶ್ವಪುಸ್ತಕ ದಿನಾಚರಣೆ ಅಂಗವಾಗಿ ಓದು ಮತ್ತು ಬರಹ ಕುರಿತು ಸಂವಾದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವಪುಸ್ತಕ ದಿನಾಚರಣೆ ಬಹಳ ವಿಶೇಷ ದಿನಾಚರಣೆಯಾಗಿದೆ. ಇಂತಹ ದಿನಾಚರಣೆ ಹೆಚ್ಚು ಪ್ರಚಲಿತವಾಗಿಲ್ಲದಿರುವುದು ದುರಂತ. ಪ್ರೇಮಿಗಳ ದಿನಾಚರಣೆ ಪ್ರಚಲಿತವಾಗಿದ್ದು, ಅನೇಕ ಪರ–ವಿರೋಧಗಳ ನಡುವೆ ನಡೆಯುತ್ತದೆ. ಆದರೆ ವಿಶ್ವಪುಸ್ತಕ ದಿನಾಚರಣೆಗೆ ಯಾವುದೇ ಅಡ್ಡಿ ಆತಂಕವಿಲ್ಲ. ಆದರೂ ಸಹ ವಿಶ್ವ ಪುಸ್ತಕ ದಿನಾಚರಣೆ ಪ್ರಚಲಿತವಾಗಿಲ್ಲ ಎಂದರು.

ಏ.14ರಂದು ಅಂಬೇಡ್ಕರ್ ಜಯಂತಿ, 23ರಂದು ವಿಶ್ವ ಪುಸ್ತಕ ದಿನಾಚರಣೆ. ಲಂಡನ್ ಗ್ರಂಥಾಲಯದಲ್ಲಿ ಹೆಚ್ಚು ಪುಸ್ತಕ ತೆಗೆದುಕೊಂಡು ಓದಿದ್ದು ಡಾ.ಬಿ.ಆರ್. ಅಂಬೇಡ್ಕರ್ ಬಳಿ ಅಗಾಧ ಪುಸ್ತಕ ರಾಶಿಯಿತ್ತು. ಅಂಬೇಡ್ಕರ್ ದೇಶ–ವಿದೇಶಗಳಲ್ಲಿ ಹೆಚ್ಚು ಓದು–ಬರಹ ಕಲಿತಿದ್ದರಿಂದಲೇ ವಿಶ್ವಜ್ಞಾನಿಯಾಗಲು ಸಾಧ್ಯವಾಯಿತು. ಅಲ್ಲದೇ ಅನೇಕ ಪದವಿ ಪಡೆಯಲು ನೆರವಾಯಿತು ಎಂದರು.

ಹಿರಿಯ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ ಹನೂರು ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡಿ, ಇಡೀ ಜಗತ್ತಿಗೆ ಹಂಚುವ ಜ್ಞಾನಾರ್ಜನೆ ಭಾರತದಲ್ಲಿತ್ತು. ಆದರೆ ಆ ಜ್ಞಾನ ಸರಿಯಾಗಿ ಹಂಚಿಕೆಯಾಗಿಲ್ಲ. ಜ್ಞಾನಾರ್ಜನೆ ಅಗ್ರಹಾರ ಬೀದಿಯಲ್ಲಿರುವ ಮನೆಗಳಲ್ಲಿ ಉಳಿದು ಬಿಟ್ಟಿತು. ಅದು ಗೋಡೆ ದಾಟಿ ಬರಲಿಲ್ಲ. ಜ್ಞಾನಾರ್ಜನೆ ಮಾರ್ಗ ಬಹಳ ಕಠಿಣವಾದದ್ದು, ವಿದ್ಯಾರ್ಥಿಗಳು ಓದು–ಬರಹ ಮೈಗೂಡಿಸಿಕೊಂಡು ವಿಶ್ವ ಮಾನವರಾಗಬೇಕು ಎಂದರು. ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಆಶಯ ನುಡಿಗಳನ್ನಾಡಿದರು. ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಧ್ಯಾಪಕ ಡಾ. ಮಹದೇವಮೂರ್ತಿ ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ತಾಲೂಕು ಕಸಾಪ ಅಧ್ಯಕ್ಷ ಬಿ.ಬಸವರಾಜು, ಗೌರವ ಕಾರ್ಯದರ್ಶಿ ನಟರಾಜ್ ಹರದನಹಳ್ಳಿ, ರಂಗವಾಹಿನಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಕೆಂಪನಪುರ, ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಮಾರಾಟ ಪ್ರತಿನಿಧಿ ಗೋವಿಂದರಾಜು, ಗಾಯಕ ಅರುಣ್ ಮಾಂಬಳ್ಳಿ, ಡಾ.ಕುಪ್ಪನಹಳ್ಳಿ ಭೈರಪ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

---

29.04.18

# ಜ್ಞಾನದಿಂದ 'ವಿಶ್ವರತ್ನ'ಕ್ಕೇರಿದ ಅಂಬೇಡ್ಕರ್

## ಅಂಬೇಡ್ಕರ್ ಜನ್ಮದಿನಾಚರಣೆ ಸಮಾರಂಭದಲ್ಲಿ ಪ್ರೊ.ಬಿ.ಹನುಮಯ್ಯ ಅಭಿಮತ





ಬೇಡರಪುರ ಬಳಿಯಿರುವ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸುವರ್ಣಗಂಗೋತ್ರಿ ಆವರಣದಲ್ಲಿನಡೆದ ಅಂಬೇಡ್ಕರ್ ಅವರ 127 ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳು. ಲಕ್ನೋ ಬಾಬಾ ಸಾಹೇಬ್ ಅಂಬೇಡ್ಕರ್ ಕೇಂದ್ರಿಯ ವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಿ.ಹನುಮಯ್ಯ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

▪ ವಿಕ ಸುದ್ದಿಲೋಕ ಚಾಮರಾಜನಗರ

ಡಾ.ಬಿ.ಆರ್.ಅಂಬೇಡ್ಕರ್ ಅವರ ಸತತ ಅಧ್ಯಯನ ಶೀಲತೆ ಭಾರತರತ್ನವಾಗಿದ್ದ ಅವರನ್ನು 'ವಿಶ್ವರತ್ನ'ದ ಮಟ್ಟಕ್ಕೇರಿಸುವಂತೆ ಮಾಡಿತು ಎಂದು ಮಂಗಳೂರುವಿವಿ ಹಾಗೂ ಲಕ್ನೋ ಬಾಬಾಸಾಹೇಬ್ ಅಂಬೇಡ್ಕರ್ ಕೇಂದ್ರಿಯ ವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಬಿ.ಹನುಮಯ್ಯ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಬೇಡರಪುರ ಬಳಿಯಿರುವ ಮೈಸೂರು ವಿವಿ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸುವರ್ಣಗಂಗೋತ್ರಿ ಆವರಣದಲ್ಲಿಶನಿವಾರ ನಡೆದ ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 127 ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ಅಂಬೇಡ್ಕರ್ ತಮ್ಮ ಅಧ್ಯಯನದ ವೇಳೆ ನಾನಾ ಜನರಿಂದ ಶೋಷಣೆಗೊಳಗಾದರು. ಆದರೂ ಛಲಬಿಡದೇ, ದಿನಕ್ಕೆ 20 ಗಂಟೆಗಳವರೆಗೂ ಓದುವ ಮೂಲಕ ನಾನಾ ಪದವಿ ಪಡೆದು, ಶೋಷಿತರು ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ ಶಿಕ್ಷಣವೇ ಅಸ್ತ್ರ' ಅದನ್ನು ಪಡೆಯದ ಹೊರತೂ, ಅನ್ಯಮಾರ್ಗವೇ ಇಲ್ಲ ಎಂದು ಜಾಗೃತಿಮೂಡಿಸಿದರು ಎಂದು ಹೇಳಿದರು.

> ನಾವು ಅಂದುಕೊಂಡ ಗುರಿತಲುಪಲು ದೊಡ್ಡಮಟ್ಟದ ಸಿದ್ಧತೆಯನ್ನು ಈಗಿನಿಂದಲೇ ಮಾಡಿಕೊಳ್ಳಬೇಕು. ಜತೆಗೆ ಸರಳವಾಗಿ ಬದುಕುವುದನ್ನು ಕಲಿಯಬೇಕು. ಜೀವನದಲ್ಲಿ ಆಶಾವಾದಿಗಳಾಗಬೇಕೆ ಹೊರತೂ, ನಿರಾಶಾವಾದಿಗಳಾಗಬಾರದು.
>
> –ಪ್ರೊ. ಪದ್ಮಶೇಖರ್, ಬೆಂಗಳೂರು ಸಂಸ್ಕೃತ ವಿವಿ ಕುಲಪತಿ.

ಯಾವುದಾದರೊಂದು .ವಿದ್ಯಾ ಸಂಸ್ಥೆಗೆ ಅಂಬೇಡ್ಕರ್ ಅವರ ಹೆಸರನ್ನಿಟ್ಟರೇ, ಅದು ದಲಿತ ಸಮುದಾಯದವರಿಗೆ ಮಾತ್ರ ಎಂಬ ಮಾತು ಕೇಳಿಬರುತ್ತಿದೆ. ಇಂತಹ ಬೆಳವಣಿಗೆ ಸರಿಯಲ್ಲ, ಅಂಬೇಡ್ಕರ್ ಅವರ ಹೋರಾಟ ಕೇವಲ ದಲಿತ ಸಮುದಾಯದವರಿಗೆ ಸೀಮಿತವಾಗಿರಲಿಲ್ಲ, ಹಿಂದುಳಿದ ಎಲ್ಲಸಮುದಾಯದವರಿಗೂ ಶಿಕ್ಷಣ ಸವಲತ್ತು ಸಿಗಬೇಕು ಎಂಬುದು ಅವರ ಆಶಯವಾಗಿತ್ತು ಎಂದರು.

ಅಂಬೇಡ್ಕರ್ ದೇಶದ ಅಭಿವೃದ್ಧಿಗೆ ಅಪಾರವಾದ ಕೊಡುಗೆಗಳನ್ನು ನೀಡಿದರ ಫಲವಾಗಿ ಭಾರತರತ್ನ ಪ್ರಶಸ್ತಿ ನೀಡಲಾಯಿತು. ಅದನ್ನು ಅವರು ಬದುಕಿದ್ದಾಗ ನೀಡಲಿಲ್ಲ, ಅದನ್ನು ಹೋರಾಟ ಮಾಡಿ, ಪಡೆಯಬೇಕಾದ ಅನಿವಾರ್ಯತೆ ಉಂಟಾಯಿತು ಎಂದರು.

ಇಂದು ಎಲ್ಲ ಪಕ್ಷಗಳು ತಮಗೆ ಬೇಕಾದ ರೀತಿಯಲ್ಲಿ ಅಂಬೇಡ್ಕರ್ ಅವರನ್ನು ಬಳಕೆ ಮಾಡಿಕೊಳ್ಳುತ್ತಿವೆ. ನಂತರ ಅವರನ್ನು ನೆನಪಿನಿಂದ ದೂರಉಳಿಯುವಂತೆ ಮಾಡುತ್ತವೆ ಎಂದು ವಿಷಾಧಿಸಿ, ಗಡಿಜಿಲ್ಲೆ ಚಾಮರಾಜನಗರದಲ್ಲಿ ಅಂಬೇಡ್ಕರ್ ಅವರ ಹೆಸರಿನಲ್ಲಿ ಸುಸಜ್ಜಿತ ಸ್ನಾತಕೋತ್ತರ ಕೇಂದ್ರ ಆರಂಭವಾಗಿ, ಗುಣಮಟ್ಟದಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ವಿಚಾರ. ಕೇಂದ್ರಕ್ಕೆ ಪೂರ್ಣಾವಧಿ ಅಧ್ಯಾಪಕರನ್ನು ನೇಮಕ ಮಾಡಿ, ಮೂಲಸೌಲಭ್ಯ ಒದಗಿಸಿದರೆ ಕೇಂದ್ರ ವಿಶ್ವವಿದ್ಯಾಲಯವಾಗಿ ಮಾರ್ಪಾಡಾಗುತ್ತದೆ ಎಂದರು.

ಬೆಂಗಳೂರು ಸಂಸ್ಕೃತ ವಿವಿ ಕುಲಪತಿ ಪ್ರೊ.ಪದ್ಮಶೇಖರ್ ಮಾತನಾಡಿ, ಅಂಬೇಡ್ಕರ್ ಅವರ ಬದುಕು ಎಂಬುದೇ ಮಂತ್ರಶಕ್ತಿ. ದಲಿತ, ಹಿಂದುಳಿದ ವರ್ಗದ ನಾಯಕರಷ್ಟೇ ಅಲ್ಲದೇ ಪ್ರಸ್ತುತ ವಿಶ್ವರತ್ನವಾಗಿದ್ದಾರೆ.

ಸಂವಿಧಾನ ರಚನೆಯ ಸಂದರ್ಭದಲ್ಲಿ ಸುಮಾರು 3 ಸಾವಿರ ಪ್ರಶ್ನೆಗಳಿಗೆ ಉತ್ತರ ನೀಡಿದ್ದು ಅವರು ಹೊಂದಿದ್ದ ಜ್ಞಾನಕ್ಕೆ ಸಾಕ್ಷಿಯಾಗಿದೆ. ವಾದ ಪ್ರತಿವಾದಗಳಿಗೆ ಸೊಪ್ಪುಹಾಕದ ಅಂಬೇಡ್ಕರ್ ಶಿಕ್ಷಣ, ಸಂಘಟನೆಗೆ ಹೆಚ್ಚು ಒತ್ತು ನೀಡಿದರು. ಅವರ ಆಲೋಚನೆಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಬೌದ್ಧಬಿಕ್ಕುಗಳ ಮಹಾಸಂಘದ ಕಾರ್ಯದರ್ಶಿ ಬಂತೇಬೋಧಿದತ್ತ ತೇರಾ, ಮೈಸೂರು ನಗರಪಾಲಿಕೆ ಸದಸ್ಯ ಪುರುಷೋತ್ತಮ್, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ, ರಾಜ್ಯಶಾಸ್ತ್ರ ಸಂದರ್ಶಕ ಪ್ರಾಧ್ಯಾಪಕ ಪರಮಶಿವಯ್ಯ ಸೇರಿದಂತೆ ಅಧ್ಯಾಪಕರು ಹಾಜರಿದ್ದರು.

# ಆಡಳಿತಗಾರರಿಗೆ ಸಾಮಾಜಿಕ ಬದ್ಧತೆ ಅಗತ್ಯ

## ನಾಡು, ನುಡಿ, ಗಡಿಸಮಸ್ಯೆ ನಿವಾರಣೆ ಆಡಳಿತ-ಸಾಂಸ್ಕೃತಿಕ ಶಾಖೆಯ ಜವಾಬ್ದಾರಿ: ಪ್ರೊ.ಮಲೆಯೂರು

**ವಿಕ ಸುದ್ದಿಲೋಕ** ಚಾಮರಾಜನಗರ

ನಾಡು, ನುಡಿ, ಗಡಿಸಮಸ್ಯೆ ನಿವಾರಣೆ ಮಾಡುವುದು ಆಡಳಿತ ಮತ್ತು ಸಾಂಸ್ಕೃತಿಕ ಶಾಖೆಯ ಪ್ರಮುಖ ಜವಾಬ್ದಾರಿ ಎಂದು ಸಾಹಿತಿ, ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮಲೆಯೂರು ಗುರುಸ್ವಾಮಿ ತಿಳಿಸಿದರು.

ನಗರದ ಹೊರವಲಯದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ಕನ್ನಡ ವಿಭಾಗದ ವತಿಯಿಂದ ಆಯೋಜಿಸಿದ್ದ 63 ನೇ ಕನ್ನಡರಾಜ್ಯೋತ್ಸವ, ಸಾವಿತ್ರಿಬಾಯಿ ಬಾಫುಲೆ ಗ್ರಂಥಾಲಯ ನಾಮಫಲಕ ಅನಾವರಣ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

''ಸ್ವಾತಂತ್ರ್ಯಾನಂತರವೂ ಆದ್ಯತೆಯೇ ದೊರೆಯದ ಕ್ಷೇತ್ರಗಳೆಂದರೆ ಅದು ಶಿಕ್ಷಣ ಹಾಗೂ ಸಾಂಸ್ಕೃತಿಕ ಶಾಖೆ,''ಎಂದರು.

''ಅಧಿಕಾರ, ತಾನು ಗಳಿಸಿದ ಸಂಪತ್ತು ಎಂದಿಗೂ ಮಾಜಿಗಳೇ, ಆದರೆ ನಾವು ಬಳಕೆ ಮಾಡಿದಷ್ಟು ಹೆಚ್ಚಳವಾಗುವ ಜ್ಞಾನಸಂಪತ್ತು ಶಾಶ್ವತ. ನಾಡು ನುಡಿಗಳ ಸಮಸ್ಯೆ ನಿವಾರಣೆ ಮಾಡುವ ಆಡಳಿತಶಾಹಿಗೆ ನೈತಿಕ ಭಯ ಇರಬೇಕು. ಅದರಂತೆ ಅವರು ಕೆಲಸಮಾಡಬೇಕು. ಮೊದಲನೆಯದಾಗಿ ಆಡಳಿತಗಾರರು ಸಾಮಾಜಿಕ ಬದ್ಧತೆ ರೂಢಿಸಿಕೊಳ್ಳಬೇಕು,'' ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಡಾ. ಕೃಷ್ಣಮೂರ್ತಿ ಹನೂರು, ''ಕನ್ನಡ ರಾಜ್ಯೋತ್ಸವ ಆಚರಿಸುವುದರ ಜತೆಗೆ ಗಡಿಸಮಸ್ಯೆಗಳು ಕರ್ನಾಟಕವನ್ನು ಆವರಿಸಿಕೊಂಡಿವೆ. ಇದು ಚಾಮರಾಜನಗರದ ಸಮಸ್ಯೆಯಲ್ಲ, ರಾಯಚೂರು, ಕೋಲಾರ, ಬೀದರ್, ಬೆಳಗಾವಿ ಜಿಲ್ಲೆಗಳಲ್ಲೂ ಇದೆ. ಇನ್ನು ಬುಡಕಟ್ಟು ಜನರನ್ನೇ ತೆಗೆದುಕೊಂಡರೆ ಅವರ ಭಾಷೆಯೇ ಬೇರೆ. ಶಾಲೆಗಳಲ್ಲಿ ಬೋಧಿಸುವ ಕನ್ನಡ ಸೇರಿದಂತೆ ಇತರೇ ಭಾಷೆಗಳು ಅವರನ್ನು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿಸಿವೆ. ಇನ್ನು ಭಾಷಾ ಸಮಸ್ಯೆ ನಿವಾರಣೆಯಾಗುವುದು ಹೇಗೆ?,''ಎಂದು ಪ್ರಶ್ನಿಸಿದರು.

''ಕುವೆಂಪು, ಕೋಟ ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರಂಥವರು ಸ್ಥಳೀಯವಾಗಿ ಕಾವ್ಯ ರಚಿಸಿ ವಿಶ್ವಮಟ್ಟದಲ್ಲಿ ಪ್ರಸಿದ್ಧಿಯಾದರು. 19 ನೇ ಶತಮಾನದಲ್ಲಿ ಇಂಗ್ಲಿಷ್ ವಿದ್ವಾಂಸ ಬಿ.ಎಲ್. ರೈಸ್ ಕರ್ನಾಟಕದಾದ್ಯಂತ ಪ್ರವಾಸ ಮಾಡಿ, ಶಾಸನಗಳ ಬಗ್ಗೆ ಮಾಹಿತಿ ಕಲೆಹಾಕಿ, ಓದುವಂತೆ ಜಾಗೃತಿ ಮೂಡಿಸಿದರು. ಇಂದು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹಳಗನ್ನಡ ಓದುವುದು ಬೇಡ ಎಂಬ ಕೂಗು ಎದ್ದಿರುವುದು ಆತಂಕಕಾರಿ ಬೆಳವಣಿಗೆ,''ಎಂದು ವಿಷಾದಿಸಿದರು.

ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಎಂ.ಜಿ.ಮಂಜುನಾಥ್, ''ಚಾಮರಾಜನಗರ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಎಲ್ಲ ಸೌಲಭ್ಯವಿದ್ದು, ಮುಂದಿನ ದಿನಗಳಲ್ಲಿ ಇದು ವಿಶ್ವವಿದ್ಯಾನಿಲಯವಾಗುವ ಎಲ್ಲಲಕ್ಷಣಗಳನ್ನು ಹೊಂದಿದೆ. ವಿದ್ಯಾರ್ಥಿಗಳ ಜ್ಞಾನಾರ್ಜನೆಗಾಗಿ ಮೈಸೂರು ವಿವಿ ಪ್ರಸಾರಾಂಗ 2 ಲಕ್ಷ ರೂ.ಗಳ ಪುಸ್ತಕಗಳನ್ನು ನೀಡಿದೆ. ಅಮೂಲ್ಯವಾದ ಜ್ಞಾನ ಸಂಪತ್ತನ್ನು ಹೆಚ್ಚಳ ಮಾಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ,''ಎಂದರು.

ಕಾರ್ಯಕ್ರಮದಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಅವರು ಗ್ರಂಥಾಲಯಕ್ಕೆ ಜಿಲ್ಲೆಯ 250 ಕವಿಗಳನ್ನು ಒಳಗೊಂಡು ರಚಿಸಿರುವ ಸಾಹಿತ್ಯ ಸುವರ್ಣಾವತಿ ಸೇರಿದಂತೆ ನಾನಾ ಪುಸ್ತಕಗಳನ್ನು ದೇಣಿಗೆಯಾಗಿ ನೀಡಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನಾ ಕೇಂದ್ರದ ಆವರಣದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿದರು.

ಮೈಸೂರು ಸಂತ ಫಿಲೋಮಿನಾ ಕಾಲೇಜಿನ ಪ್ರಾಂಶುಪಾಲೆ ಡಾ.ರೂತ್ ಶಾಂತಕುಮಾರಿ, ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.



ಚಾಮರಾಜನಗರದ ಹೊರವಲಯದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ಸಾವಿತ್ರಿಬಾಯಿಬಾಫುಲೆ ಗ್ರಂಥಾಲಯ ನಾಮಫಲಕ ಅನಾವರಣ ಮಾಡಿದ ಗಣ್ಯರು.

> ರಾಜ್ಯದ ಗಡಿಭಾಗಗಳಲ್ಲಿ ಕನ್ನಡ ನೆಲಜಲ ಭಾಷೆ ಸಮಸ್ಯೆ ಆವರಿಸಿದ್ದು, ಇದು ಸರಕಾರಗಳ ನಡುವಣ ಸಮಸ್ಯೆ. ಗಡಿಯಲ್ಲಿ ಕನ್ನಡ ಮಾತ ನಾಡುವ ವಾತಾವರಣ ನಿರ್ಮಾಣವಾಗಬೇಕು. ಸರಕಾರಗಳ ಜತೆ ಸಾರ್ವಜನಿಕರು ಇದಕ್ಕೆ ಕೈಜೋಡಿಸಿದಾಗ ಅನೇಕ ಸಮಸ್ಯೆ ನಿವಾರಣೆ ಯಾಗುತ್ತವೆ.
>
> **-ಡಾ.ಕೃಷ್ಣಮೂರ್ತಿ ಹನೂರು,**
> ಸಂದರ್ಶಕ ಪ್ರಾಧ್ಯಾಪಕರು.

# ಗುಣಮಟ್ಟದ ಶಿಕ್ಷಣ ನೀಡಲು ವಿವಿ ಸ್ಥಾಪನೆಯಾಗಲಿ

## ಪ್ರಸರಾಂಗ ನಿರ್ದೇಶಕ ಮಂಜುನಾಥ ಅಭಿಪ್ರಾಯ | ಗ್ರಂಥಾಲಯ ನಾಮಫಲಕ ಅನಾವರಣ

ವಿಜಯವಾಣಿ ಸುದ್ದಿಜಾಲ ಚಾಮರಾಜನಗರ

ಪ್ರತಿ ಜಿಲ್ಲೆಗಳಲ್ಲಿಯೂ ವಿಶ್ವವಿದ್ಯಾಲಯ ಗಳು ಸ್ಥಾಪನೆಯಾದಾಗ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಜಿ.ಮಂಜುನಾಥ ಅಭಿಪ್ರಾಯಪಟ್ಟರು.

ನಗರದ ಹೊರವಲಯದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಕನ್ನಡ ರಾಜ್ಯೋತ್ಸವ, ನಿಜಗುಣ ಸಭಾಂಗಣ ಹಾಗೂ ಸಾವಿತ್ರಿ ಬಾಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಸಮಾರಂಭದಲ್ಲಿ ಮಾತನಾಡಿದರು.

ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ವಿಶ್ವವಿದ್ಯಾಲಯ ಇದ್ದರೂ ಕುಲಪತಿಗಳ ನೇಮಕವಾಗದ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ಕುಂಠಿತಗೊಳ್ಳುತ್ತಿದೆ. ರಾಜ್ಯದ ಗಡಿ ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯ ನಿರ್ಮಾಣವಾದರೆ ಆ ಭಾಗದ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲಿದೆ ಎಂದರು.

ಸ್ನಾತಕೋತ್ತರ ಕೇಂದ್ರದಲ್ಲಿ ನೂತನವಾಗಿ ಆರಂಭವಾಗಿರುವ ಗ್ರಂಥಾಲಯಕ್ಕೆ ಪ್ರಸರಾಂಗದಿಂದ 2 ಲಕ್ಷ ರೂ.ಗಳ ಪುಸ್ತಕಗಳನ್ನು ನೀಡಲಾಗಿದ್ದು, ಇದರಲ್ಲಿ ಕುವೆಂಪು, ದ.ರಾ. ಬೇಂದ್ರೆ ಸೇರಿದಂತೆ ಇತರೆ ಮಹಾನ್ ಕವಿಗಳು ಬರೆದಿರುವ ಪುಸ್ತಕಗಳಿವೆ. ಇವುಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುವ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ರಾಜ್ಯದ ಗಡಿ ಜಿಲ್ಲೆಗಳಲ್ಲಿ ಕನ್ನಡದ ಸಮಸ್ಯೆ ಹೆಚ್ಚಾಗಿದೆ. ಅನ್ಯ ಭಾಷೆಗಳು ರಾಜ್ಯದೊಳಗೆ ಪ್ರವೇಶ ಮಾಡುತ್ತವೆ. ಆದರೆ ಕನ್ನಡ ಭಾಷೆ ಹೊರಗೆ ಹೋಗಲ್ಲ. ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ನೆರೆ ರಾಜ್ಯಗಳಿಂದ ಜನರು ಇಲ್ಲಿಗೆ ಬಂದು ಬದುಕು ಕಟ್ಟಿಕೊಳ್ಳುತ್ತಾರೆ. ಆದರೆ ಇಲ್ಲಿಂದ ಹೋಗುವಾಗ ಎಲ್ಲವನ್ನು ಖಾಲಿ ಮಾಡಿ ಹೋಗುತ್ತಾರೆ ಎಂದರು.

ವಿಶ್ವವಿದ್ಯಾಲಯವು ಹೊಸಗನ್ನಡವನ್ನು ಜಾರಿಗೊಳಿಸುವ ಉದ್ದೇಶದಿಂದ ಹಳೆಗನ್ನಡವನ್ನು ತೆಗೆಯಲು ಪ್ರಯತ್ನಿಸುತ್ತಿದೆ. ಹಳೆಗನ್ನಡವು ಶಾಸನಗಳನ್ನು ಓದಲು ಹಾಗೂ ಭಾಷಾ ಪ್ರೌಢಿಮೆಯನ್ನು ಬೆಳೆಸಲು ಸಹಕಾರಿಯಾಗಿದ್ದು, ಇದನ್ನು ತೆಗೆಯಬಾರದು ಎಂದರು.

ಸಾಹಿತಿ ಮಲೆಯೂರು ಗುರುಸ್ವಾಮಿ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿಕ್ಷಣ ಇಲಾಖೆಗಳು ಕನ್ನಡ ಭಾಷೆಯ ಉಳಿವಿಗೆ ಪ್ರಾಮುಖ್ಯತೆ ನೀಡಬೇಕು. ಜಿಲ್ಲೆಯವರಾದ ಡಾ.ರಾಜಕುಮಾರ್ ಅವರ ಸ್ಮಾರಕ ನಿರ್ಮಾಣ ಹಾಗೂ ರಸ್ತೆಗಳಿಗೆ ಅವರ ಹೆಸರು ಇಡಬೇಕು ಎಂದು ಒತ್ತಾಯಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಪ್ರಾಂಶುಪಾಲರಾದ ಡಾ.ರೂತ್ ಶಾಂತಕುಮಾರಿ, ಇತರರಿದ್ದರು.

ವಿಜಯವಾಣಿ ಚಿತ್ರ



ನಗರದ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ ಉದ್ಘಾಟಿಸಿದರು.



ಕರ್ನಾಟಕ ರಾಜ್ಯೋತ್ಸವ, ನಿಜಗುಣ ಸಭಾಂಗಣ ಉದ್ಘಾಟನೆ: ಪ್ರೊ.ಎಂ.ಜಿ.ಮಂಜುನಾಥ್ ಆಗ್ರಹ

# ಗಡಿಜಿಲ್ಲೆಗೆ ವಿಶ್ವವಿದ್ಯಾಲಯ ಸ್ಥಾಪಿಸಲಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಗಡಿಜಿಲ್ಲೆಯಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪನೆಯಾದರೆ ಗ್ರಾಮೀಣ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ಜಿ. ಮಂಜುನಾಥ್ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ, ನಿಜಗುಣ ಸಭಾಂಗಣ ಮತ್ತು ಸಾವಿತ್ರಿಬಾಯಿ ಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರತಿ ಜಿಲ್ಲೆಯಲ್ಲೂ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು. ಇದರಿಂದ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಮುಖ್ಯವಾಗಿ ಗಡಿಜಿಲ್ಲೆಗಳಲ್ಲಿ ಇಂತಹ ಕೆಲಸಗಳು ನಡೆಯಬೇಕಿದೆ. ಕೆಲವೆಡೆ ಒಂದೇ ಊರಿನಲ್ಲಿ ನಾಲ್ಕು ವಿ.ವಿ.ಗಳಿರುತ್ತವೆ. ಆದರೆ, ಕುಲಪತಿಗಳೇ ನೇಮಕ ಆಗಿರುವುದಿಲ್ಲ. ಅಂತಹ ಕಟ್ಟಡಗಳು ಪ್ರಯೋಜನಕ್ಕೆ ಬಾರದೆ ವ್ಯರ್ಥವಾಗುತ್ತವೆ ಎಂದರು.

**₹2 ಲಕ್ಷ ಮೌಲ್ಯದ ಪುಸ್ತಕ:** 'ನಮ್ಮ ಪ್ರಸಾರಾಂಗವು ವಿಶ್ವವಿದ್ಯಾಲಯದಿಂದ ಅನುಮತಿ ಪಡೆದೇ ಸ್ನಾತಕೋತ್ತರ ಕೇಂದ್ರಗಳಿಗೆ ಪುಸ್ತಕ ನೀಡಬೇಕು. ಈ ಬಾರಿ ಕೇಂದ್ರಕ್ಕೆ ₹2 ಲಕ್ಷ ಮೌಲ್ಯದ ಪುಸ್ತಕಗಳನ್ನು ನೀಡಲಾಗಿದೆ' ಎಂದರು.

ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಕೃಷ್ಣಮೂರ್ತಿ ಹನೂರು ಮಾತನಾಡಿ, 'ಗಡಿನಾಡಿನಲ್ಲಿ ಕನ್ನಡದ ಸಮಸ್ಯೆ ಇದೆ. ಅನ್ಯಭಾಷೆ ರಾಜ್ಯದೊಳಗೆ ಪ್ರವೇಶ ಪಡೆಯುತ್ತದೆ. ಆದರೆ, ಕನ್ನಡ ಭಾಷೆ ಗಡಿಬಿಟ್ಟು ಆಚೆ ಹೋಗುವುದಿಲ್ಲ. ಇದು ಚಾಮರಾಜನಗರ ಮಾತ್ರವಲ್ಲ, ಮಡಿಕೇರಿ, ಕೋಲಾರದಂತಹ ಗಡಿ ಪ್ರದೇಶಗಳಲ್ಲೂ ಇದೇ ಸ್ಥಿತಿ ಇದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಮಲೆಯೂರು ಗುರುಸ್ವಾಮಿ ಮಾತನಾಡಿ, 'ರಾಜಕಾರಣಿಗಳು ಕನ್ನಡ ಭಾಷೆ ಉಳಿವಿಗೆ ಪ್ರಾಮುಖ್ಯ ನೀಡಿದ್ದರೆ ರಾಜ್ಯದಲ್ಲಿ ಕನ್ನಡದ ಸಮಸ್ಯೆ ಬಗೆಹರಿಸಲು 60 ವರ್ಷ ಬೇಕಿರಲಿಲ್ಲ' ಎಂದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಮೈಸೂರು ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲರಾದ ಡಾ.ಶಾಂತಕುಮಾರಿ ಇದ್ದರು.

ಹಳೆಗನ್ನಡ ಬೇಡ, ಹೊಸ ಕನ್ನಡದಲ್ಲೇ ಪತ್ರಗಳನ್ನು ನೀಡಬೇಕು ಎಂದು ವಿ.ವಿ.ಗಳು ಹೇಳುತ್ತಿವೆ. ಹೀಗಾದರೆ, ಶಾಸನಗಳನ್ನು ಓದುವವರು ಯಾರು?
ಪ್ರೊ.ಕೃಷ್ಣಮೂರ್ತಿ ಹನೂರು ಕನ್ನಡ ವಿಭಾಗದ ಮುಖ್ಯಸ್ಥ

ಸ್ನಾತಕೋತ್ತರ ಕೇಂದ್ರದ ಸಾವಿತ್ರಿಬಾಯಿ ಫುಲೆ ಗ್ರಂಥಾಲಯಕ್ಕೆ ಪ್ರೊ.ಎಂ.ಜಿ. ಮಂಜುನಾಥ ಪುಸ್ತಕಗಳನ್ನು ನೀಡಿದರು

## ರಾಜ್‌ಕುಮಾರ್ ಸ್ಮಾರಕ ಮಾಡಲಿಲ್ಲ

'ಕನ್ನಡದ ವರನಟ ಡಾ.ರಾಜ್‌ಕುಮಾರ್ ಅವರಂತಹ ಕಲಾವಿದರು ಭರತ ಖಂಡದಲ್ಲೇ ಇಲ್ಲ. ಮುಂದೆಯೂ ಹುಟ್ಟುವುದಿಲ್ಲ. ಅವರು ನಮ್ಮ ಜಿಲ್ಲೆಯವರು. ಆದರೆ, ಜಿಲ್ಲಾ ಕೇಂದ್ರದಲ್ಲಿ ಅವರ ಸ್ಮಾರಕವೂ ನಿರ್ಮಾಣವಾಗಲಿಲ್ಲ. ಯಾವುದೇ ರಸ್ತೆಗಳಿಗೂ ಅವರ ಹೆಸರನ್ನು ಇಟ್ಟಿಲ್ಲ' ಎಂದು ಮಲೆಯೂರು ಗುರುಸ್ವಾಮಿ ಬೇಸರ ವ್ಯಕ್ತಪಡಿಸಿದರು.

'ರಾಜ್‌ಕುಮಾರ್ ಅವರು ಜಿಲ್ಲಾ ಕೇಂದ್ರದ ಸಂತೇಮರಹಳ್ಳಿ ವೃತ್ತದಿಂದ ಸತ್ತಿ ರಸ್ತೆಯಲ್ಲಿ ನಡೆದಾಡುತ್ತಿದ್ದರು. ಇದೇ ಮಾರ್ಗವಾಗಿ ಅವರ ಊರಿಗೆ (ಗಾಜನೂರು) ಹೋಗುತ್ತಿದ್ದರು. ಅವರ ನೆನಪಿಗಾಗಿ ಸಂತೇಮರಹಳ್ಳಿ ವೃತ್ತಕ್ಕೆ ಅವರ ಹೆಸರನ್ನು ಇಡಬೇಕು' ಎಂದು ಒತ್ತಾಯಿಸಿದರು.

## ಚಾಮರಾಜನಗರ ವಿ.ವಿ ಸ್ಥಾಪನೆ ಆಗಲಿ

ಗಡಿಜಿಲ್ಲೆಯಲ್ಲಿ 50 ಎಕರೆ ಜಾಗವಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮುಂದೊಂದು ದಿನ 'ಚಾಮರಾಜನಗರ ವಿಶ್ವವಿದ್ಯಾಲಯ' ಸ್ಥಾಪನೆ ಆಗಬೇಕು. ಇಲ್ಲಿ 10ಕ್ಕೂ ಹೆಚ್ಚು ವಿಭಾಗಗಳಿವೆ. ಇನ್ನೂ15 ವಿಭಾಗಗಳನ್ನು ಸ್ಥಾಪಿಸುವುದು ಕಷ್ಟವಲ್ಲ. ರಾಜಕಾರಣಿಗಳು, ಸ್ಥಳೀಯರು ಬದ್ಧತೆ ತೋರಿಸಬೇಕು. ಹೋರಾಟ ಮಾಡಿ ವಿ.ವಿ.ಯನ್ನು ಪಡೆಯುವ ಹಂಬಲ ಇರಬೇಕು ಎಂದು ಎಂ.ಜಿ.ಮಂಜುನಾಥ್ ಹೇಳಿದರು.

ಪತ್ರಿಕೆ: ಪ್ರಜಾವಾಣಿ
ದಿನಾಂಕ: 15/11/18

# ವಿದ್ಯಾರ್ಥಿಗಳು ಭಾಷಾ ಬದ್ಧತೆ ಮೆರೆಯಲಿ

## ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕನ್ನಡ ರಾಜ್ಯೋತ್ಸವದಲ್ಲಿ ಪ್ರೊ.ಮ.ಗುರುಸ್ವಾಮಿ

ಚಾಮರಾಜನಗರ,ನ.೧೪-ವಿದ್ಯಾರ್ಥಿಗಳು ಶಿಕ್ಷಣದ ಮಹತ್ವ ಅರಿತುಕೊಳ್ಳಬೇಕು. ಸಾಮಾಜಿಕ ಜವಾಬ್ದಾರಿ, ಭಾಷಾ ಬದ್ಧತೆಯನ್ನು ಮೆರೆಯಬೇಕು ಎಂದು ವಿದ್ವಾಂಸ ಪ್ರೊ.ಮಲೆಯೂರು ಗುರುಸ್ವಾಮಿ ಹೇಳಿದರು.

ಸಮೀಪದ ಸುವರ್ಣ ಗಂಗೋತ್ರಿ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದ ವತಿಯಿಂದ ಬುಧವಾರ ಆಯೋಜಿಸಲಾಗಿದ್ದ ಕನ್ನಡ ರಾಜ್ಯೋತ್ಸವ ಹಾಗೂ ನಿಜಗುಣ ಸಭಾಂಗಣ ಮತ್ತು ಸಾವಿತ್ರಿ ಬಾಯಿಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಜ್ಞಾನದ ಬಯಕೆ ಹೆಚ್ಚಾಗಬೇಕು. ಆಗ ಮಾತ್ರ ಉನ್ನತ ಶಿಕ್ಷಣಕ್ಕೆ ಮಹತ್ವ ಬರುತ್ತದೆ ಎಂದು ಗುರುಸ್ವಾಮಿ ನುಡಿದರು. ಸಾವಿತ್ರಿ ಬಾಯಿ ಫುಲೆ ಅವರು ಪೂರ್ವದಲ್ಲೇ ಶಿಕ್ಷಣದ ಮಹತ್ವ ಸಾರಿದವರು. ಹಾಗೆಯೇ ನಿಜಗುಣ ಶಿವಯೋಗಿಗಳು ವಿಶ್ಲೇಷಿಸಿದ್ದಂತೆ. ಇಂತಹ ಮಹನೀಯರ ಹೆಸರನ್ನು ಗ್ರಂಥಾಲಯಕ್ಕೆ ಮತ್ತು ಸಭಾಂಗಣಕ್ಕೆ ನಾಮಕರಣ ಮಾಡಿರುವುದು ಅರ್ಥಪೂರ್ಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ್ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಸ್ನಾತಕೋತ್ತರ ವಿದ್ಯಾರ್ಥಿಗಳು ಓದಿಗೆ ಸೀಮಿತರಾಗದೆ ಸಾಧಕರಾಗಬೇಕು. ಶ್ರಮವಹಿಸಿ ವ್ಯಾಸಂಗ ಮಾಡುವ ಮೂಲಕ ಶಿಕ್ಷಣದಲ್ಲಿ ಉನ್ನತಿ ಸಾಧಿಸಬೇಕು ಎಂದು ತಿಳಿಹೇಳಿದರು.

ಇದೇವೇಳೆ ಸಾವಿತ್ರಿ ಬಾಯಿಫುಲೆ ಗ್ರಂಥಾಲಯಕ್ಕೆ ೨ ಲಕ್ಷ ರೂ.ಗಳ ಪುಸ್ತಕಗಳನ್ನು ಪ್ರೊ.ಮಂಜುನಾಥ್ ನೀಡಿ ಸ್ನಾತಕೋತ್ತರ ವಿದ್ಯಾರ್ಥಿಗಳು ಪುಸ್ತಕಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಕೃಷ್ಣಮೂರ್ತಿ ಹನೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮೈಸೂರಿನ ಸಂತ ಫಿಲೋಮಿನಾ ಕಾಲೇಜು ಪ್ರಾಂಶುಪಾಲರಾದ ಡಾ.ರೂತ್ ಶಾಂತಕುಮಾರಿ ಸಾವಿತ್ರಿ ಬಾಯಿ ಫುಲೆ ಗ್ರಂಥಾಲಯದ ನಾಮಫಲಕ ಅನಾವರಣ ಮಾಡಿದರು. ಕನ್ನಡ ವಿಭಾಗದ ಉಪನ್ಯಾಸಕರಾದ ಮಹೇಶ್ ಬಾಬು, ಬಸವಣ್ಣ, ತಮ್ಮೇಗೌಡ, ಗುರುರಾಜು, ರಾಣಿ ಮತ್ತಿತರರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಜ್ಞಾನದ ಬಯಕೆ ಹೆಚ್ಚಾಗಬೇಕು. ಆಗ ಮಾತ್ರ ಉನ್ನತ ಶಿಕ್ಷಣಕ್ಕೆ ಮಹತ್ವ ಬರುತ್ತದೆ.
- ಪ್ರೊ.ಮ.ಗುರುಸ್ವಾಮಿ

ಚಾಮರಾಜನಗರ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರೊ.ಮಲೆಯೂರು ಗುರುಸ್ವಾಮಿ ಮಾತನಾಡಿದರು. ಪ್ರೊ. ಕೃಷ್ಣಮೂರ್ತಿ ಹನೂರು, ಪ್ರೊ. ಶಿವಬಸವಯ್ಯ, ಡಾ. ರೂತ್ ಶಾಂತಕುಮಾರ ಚಿತ್ರದಲ್ಲಿದ್ದಾರೆ.

ಪತ್ರಿಕೆ: ಆಂದೋಲನ
ದಿನಾಂಕ: 15/11/18



ಕರ್ನಾಟಕ ರಾಜ್ಯೋತ್ಸವ, ನಿಜಗುಣ ಸಭಾಂಗಣ ಉದ್ಘಾಟನೆ: ಪ್ರೊ.ಎಂ.ಜಿ.ಮಂಜುನಾಥ್ ಆಗ್ರಹ
ಗಡಿಜಿಲ್ಲೆಗೆ ವಿಶ್ವವಿದ್ಯಾಲಯ ಸ್ಥಾಪಿಸಲಿ
ರಾಜ್‌ಕುಮಾರ್ ಸ್ಮಾರಕ ಮಾಡಲಿಲ್ಲ
ಚಾಮರಾಜನಗರ ವಿ.ವಿ ಸ್ಥಾಪನೆ ಆಗಲಿ
ಪತ್ರಿಕೆ: ಪ್ರಜಾವಾಣಿ ದಿನಾಂಕ: 15/11/18
ವಿದ್ಯಾರ್ಥಿಗಳು ಭಾಷಾ ಬದ್ಧತೆ ಮೆರೆಯಲಿ
ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಕನ್ನಡ ರಾಜ್ಯೋತ್ಸವದಲ್ಲಿ ಪ್ರೊ.ಮ.ಗುರುಸ್ವಾಮಿ
ಪತ್ರಿಕೆ: ಆಂದೋಲನ ದಿನಾಂಕ: 15/11/18

# ಹೊಸ ಸಾಹಿತ್ಯದಿಂದ ಚಳವಳಿಗೆ ಮರುಜೀವ

■ **ವಿಕ ಸುದ್ದಿಲೋಕ** ಚಾಮರಾಜನಗರ

**ಸಾಹಿತಿ ಪ್ರೊ. ಎಚ್. ಗೋವಿಂದಯ್ಯ ಅಭಿಮತ**

ಸಾಹಿತ್ಯ, ಕಾವ್ಯಾದ ಗೊಂದಲದಿಂದ ಯಾರು ಹೊರಗೆ ಬರುತ್ತಾರೋ ಅವರು ಹೊಸ ಸಾಹಿತ್ಯ ಚಳವಳಿ ಕಟ್ಟಿಕೊಡಲು ಸಾಧ್ಯವಲ್ಲದೇ ಹೊಸ ಸಾಹಿತ್ಯ ಚಳವಳಿ ಕಟ್ಟಿದಾಗ ಮಾತ್ರ ದಲಿತ ಚಳವಳಿಗೆ ಪುನರ್ಜೀವ ಬರಲು ಸಾಧ್ಯ ಎಂದು ಸಾಹಿತಿ ಪ್ರೊ. ಎಚ್. ಗೋವಿಂದಯ್ಯ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿಜಗುಣ ಶಿವಯೋಗಿ ಸಭಾಂಗಣದಲ್ಲಿ ಸಾಹಿತ್ಯ ಅಕಾಡೆಮಿ, ನವದೆಹಲಿ ಚಾಮರಾಜನಗರ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ ಸಹಯೋಗದಲ್ಲಿ ನಡೆದ 'ದಲಿತ ಚೇತನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದಲಿತ ಕಾವ್ಯಾಮತ್ತು ಸಾಹಿತ್ಯದ ಬಗ್ಗೆ ಗಂಭೀರವಾದ ಚರ್ಚೆಗಳು ಇದುವರೆಗೂ ನಡೆದಿಲ್ಲ ಈಗ ಆ ಬಗ್ಗೆ ಗಂಭೀರವಾದ ಚರ್ಚೆಗಳು ನಡೆಸಲು ಸಕಾಲ. ಈಗಲೂ ಅದು ಸಾಧ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಕೆಟ್ಟದಿನಗಳು ಕಾದಿವೆ ಎಂದರು.

ದಲಿತ ಪರಂಪರೆ ಕಾವ್ಯಗಳು: ''ಮಲೆ ಮಹದೇಶ್ವರ ಮತ್ತು ಮಂಟೇಸ್ವಾಮಿ ಕುರಿತ ಕಾವ್ಯಾಗಳು ದಲಿತ ಪರಂಪರೆಯವು. ದಲಿತರು ಈ ಎರಡು ಮಹಾಕಾವ್ಯಗಳಿಗೆ ನಮಿಸಿ ಶರಣಾಗಬೇಕು. ಈ ಮಹಾಕಾವ್ಯಗಳು ದಲಿತ ಪರಂಪರೆಯವಾಗಿದ್ದರೂ, ಅವುಗಳ ಕಡೆಗೆ ದಲಿತರು ತಿರುಗಿಯೂ ನೋಡಿಲ್ಲ, ಅದಕ್ಕೆ ನಮಿಸಿ ಶರಣಾಗಿ ನಮ್ಮ ಅಕ್ಷರ ಅಹಂಕಾರವನ್ನು ಬದಿಗಿಟ್ಟು ಒಳಗೆ ಹೋದಾಗ ಅದರ ಸಾರ ತಿಳಿಯಲಿದೆ ಎಂದರು.

ನೋವು ಅನಾವರಣ: ಪ್ರಾಧ್ಯಾಪಕ ಎಸ್. ಕೃಷ್ಣಮೂರ್ತಿ ಹನೂರು ಮಾತನಾಡಿ,''ಮಲೆ ಮಹದೇಶ್ವರ ಮಹಾಕಾವ್ಯ ಮತ್ತು ಮಂಟೇಸ್ವಾಮಿ ಮಹಾಕಾವ್ಯಗಳಲ್ಲಿರುವ ಹಾಡುಗಳು ನೋವಿನ ಸಂಗತಿಗಳನ್ನು ತಿಳಿಸುತ್ತದೆ. ಆದರೆ, ದಕ್ಷಿಣ ಭಾಗದ ಕರ್ನಾಟಕದಲ್ಲಿ ಆ ಕಲೆಗಳು ಉಳಿದಿಲ್ಲ'' ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ, ಕವಿ, ಸಂಸ್ಕೃತಿ ಚಿಂತಕ ಮಹಾದೇವ ಶಂಕನಪುರ, ಮೈಸೂರು ಸಂಶೋಧಕ ಎಸ್.ಕೆ. ಮಂಜುನಾಥ, ಬಂಗಾರಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಎಚ್. ಎನ್. ಪುಷ್ಪಲತಾ ಹಾಜರಿದ್ದರು.



ಚಾಮರಾಜನಗರ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ದಲಿತ ಚೇತನ ಕಾರ್ಯಕ್ರಮದಲ್ಲಿ ಮೈಸೂರು ಹಿರಿಯ ಕವಿ ಪ್ರೊ. ಎಚ್. ಗೋವಿಂದಯ್ಯ ಮಾತನಾಡಿದರು.

# ಹೊಸ ತಲೆಮಾರಿಗೆ ಕುಮಾರಪ್ಪ ಚಿಂತನೆ ಅವಶ್ಯ

## ಅಂಬೇಡ್ಕರ್ ಕೇಂದ್ರದಲ್ಲಿ ನಡೆದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮೈ.ವಿ.ವಿ. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಜಿ.ಎಂ. ಬಸವರಾಜು ಅಭಿಮತ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಪ್ರಕೃತಿಯನ್ನು ಶೋಷಿಸದೆ ಅದರ ಕೊಡುಗೆಗಳನ್ನು ಬಳಸಿಕೊಳ್ಳಬೇಕೆಂಬುದು ಕುಮಾರಪ್ಪನವರ ನಿಲುವಾಗಿತ್ತು. ಭಾರತದ ಹೊಸ ತಲೆಮಾರಿಗೆ ಕುಮಾರಪ್ಪ ಮತ್ತು ಗಾಂಧಿ ಚಿಂತನೆಗಳು ಅತ್ಯವಶ್ಯಕ ಎಂದು ಮೈವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಜಿ.ಎಂ. ಬಸವರಾಜು ಹೇಳಿದರು.

ನಗರದ ಸಮೀಪವಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಂಗ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ಗಾಂಧಿ ಅರ್ಥಶಾಸ್ತ್ರ ತಂದವರು ಕುಮಾರಪ್ಪ:** ಭಾರತವೂ ಸೇರಿದಂತೆ ಆಧುನಿಕ ಜಗತ್ತು ಗುರುತಿಸಿರುವ ಗಾಂಧಿ ಆರ್ಥಶಾಸ್ತ್ರವನ್ನು ಪ್ರಯೋಗ ಮತ್ತು ಫಲಿತಾಂಶಗಳ ಮೂಲಕ ಜಾರಿಗೆ ತಂದವರು ಜೆ.ಸಿ. ಕುಮಾರಪ್ಪ. ಈ ಮೂಲಕ ಗಾಂಧೀಜಿಯವರ ಚಿಂತನೆಗಳಿಗೆ ಮೂರ್ತ ಸ್ವರೂಪ ನೀಡಿ ಗಾಂಧಿ ಅರ್ಥಶಾಸ್ತ್ರ ಎಂಬ ಜ್ಞಾನ ಶಾಖೆಯನ್ನು ಅಸ್ತಿತ್ವಕ್ಕೆ ತಂದವರು ಜೆ.ಸಿ. ಕುಮಾರಪ್ಪ. ಆಧುನಿಕ ಜಗತ್ತು ಅವಲಂಬಿಸಿದ್ದ ವಸ್ತುಗಳ ಬದಲಾಗಿ ಪರ್ಯಾಯ ವಸ್ತುಗಳ ಹುಡುಕಾಟದಲ್ಲಿ ತೊಡಗಿ ಕೃಷಿಯಲ್ಲಿ ರಸಾಯನಿಕ ಗೊಬ್ಬರಗಳ ಬದಲಾಗಿ ಹಸಿರಲೆ ಗೊಬ್ಬರ, ಸೀಮೆಎಣ್ಣೆ ಬದಲಾಗಿ, ನೈಸರ್ಗಿಕವಾಗಿ ಹೊಂಗೆ, ಬೇವು ಬೀಜಗಳಿಂದ ತಯಾರಿಸಿದ ತೈಲಗಳನ್ನು ದೀಪಗಳಿಗೆ ಬಳಸಲು ಉತ್ತೇಜನ ನೀಡಿದರು ಎಂದು ತಿಳಿಸಿದರು.



ಚಾಮರಾಜನಗರದ ಸಮೀಪವಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮೈ.ವಿ.ವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಜಿ.ಎಂ. ಬಸವರಾಜು ಮಾತನಾಡಿದರು.

**ಸುಧಾರಿತ ನೇಗಿಲು ಆವಿಷ್ಕಾರ:** ಟ್ರ್ಯಾಕ್ಟರ್ ಬದಲಾಗಿ ರೈತರಿಗೆ ಅನೇಕ ಸುಧಾರಿತ ನೇಗಿಲು ಗಳನ್ನು ಆವಿಷ್ಕರಿಸಿದರು. ಸಾಬೂನು ಬಳಸುವ ಬದಲು ವನಸ್ಪತಿ ಬಳಸಲಾರಂಭಿಸಿದರು. ಉರವಲಿ ನಂತೆ ಬಳಕೆಯಾಗುತ್ತಿದ್ದ ಕಬ್ಬಿನ ಸಿಪ್ಪೆಯನ್ನು ಕಾಗದ ಉತ್ಪಾದನೆಗೆ ಬಳಸಿ ಇತರರಿಗೆ ಪ್ರೇರಣೆಯಾದರು ಎಂದರು.

**ತಂತ್ರಜ್ಞಾನ 10 ವರ್ಷಕ್ಕೆ ದ್ವಿಗುಣ:** ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತ ಮುಖ್ಯ ಗ್ರಂಥ ಪಾಲಕ ಡಾ. ಸಿ.ಪಿ. ರಾಮಶೇಷ ಗೃಹ ಪುಸ್ತಕ ಭಂಡಾರ ಕುರಿತು ಮಾತನಾಡಿ, ಸಂಶೋಧನೆಗಳಿಗೆ ಬಹಳ ಮುಖ್ಯವಾಗಿ ಮುದ್ರಿತ ಗ್ರಂಥಗಳ ಅವಶ್ಯಕ. ಪ್ರತಿಯೊಂದು ಪುಸ್ತಕ ವ್ಯಕ್ತಿತ್ವ ರೂಪುಗೊಳ್ಳಲು ಸಹಾಯ ಮಾಡುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಪ್ರತಿ 10 ವರ್ಷಕ್ಕೆ ದ್ವಿಗುಣಗೊಳ್ಳುತ್ತದೆ. ಓದು ನಿರಂತರ ಒಂದು ತಪಸ್ಸು ಇದ್ದಂತೆ ಹಾಗೂ ಒಂದು ಸಾಹಸ ಇದ್ದಂತೆ ಅದಕ್ಕೆ ಮುಕ್ತಾಯ ಇರುವುದಿಲ್ಲ ಎಂದರು.

ವಿದ್ಯುನ್ಮಾನಗಳ ಅಭಿವೃದ್ಧಿಯಾದ ಮೇಲೆ ಗ್ರಂಥಾಲಯಗಳಲ್ಲಿ ಪುಸ್ತಕ ಓದುವುದು ಕಡಿಮೆಯಾಗುತ್ತಾ ಬಂದಿದ್ದು, ಪುಸ್ತಕ ಪ್ರಾಧಿಕಾರ ಹಾಗೂ ಸರ್ಕಾರ ವೈಯಕ್ತಿಕ ಗ್ರಂಥ ಸಂಗ್ರಹಕ್ಕೆ ಯೋಜನೆಗಳನ್ನು ರೂಪಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮವನ್ನು ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಕೃಷ್ಣಮೂರ್ತಿ ಹನೂರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ದೀನಬಂಧು ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ್, ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ.ಜಿ. ಮಂಜುನಾಥ, ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ. ಶಿವಬಸವಯ್ಯ ಇದ್ದರು.

## ಮೈಸೂರು ವಿವಿ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ್ ಅಭಿಮತ

# ಜ್ಞಾನದ ಪ್ರಸಾರಕ್ಕಾಗಿ ಪ್ರಚಾರೋಪನ್ಯಾಸ

■ ವಿಜಯವಾಣಿ ಸುದ್ದಿಜಾಲ ಚಾಮರಾಜನಗರ

ಜ್ಞಾನವನ್ನು ಪ್ರಸಾರ ಮಾಡುವ ಉದ್ದೇಶದಿಂದ ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ಜಿ.ಮಂಜುನಾಥ್ ತಿಳಿಸಿದರು.

ನಗರದ ಹೊರವಲಯದ ಬೇಡರಪುರ ಬಳಿ ಇರುವ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾಲಯ 100 ವರ್ಷಗಳಿಂದಲೂ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಪ್ರೊ.ರಾಲೋ ಅವರು ಅಮೆರಿಕ ವಿಶ್ವವಿದ್ಯಾಲಯದ ಸಮ್ಮೇಳನದಲ್ಲಿ ಭಾಗವಹಿಸಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಇದಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸ್ಪಂದನೆ ದೊರಕಿತು ಎಂದು ತಿಳಿಸಿದರು.



ಬೇಡರಪುರ ಬಳಿಯ ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಆಯೋಜಿಸಿದ್ದ ಪ್ರಚಾರೋಪನ್ಯಾಸದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಎಂ.ಜಿ.ಬಸವರಾಜು ಮಾತನಾಡಿದರು. ಮಂಜುನಾಥ್, ಜಯದೇವ, ಸಿ.ಪಿ.ರಾಮಶೇಷ ಇದ್ದರು.

> ಪ್ರಚಲಿತ ವಿದ್ಯಮಾನಗಳನ್ನು ತಿಳಿಯಲು ಪತ್ರಿಕೆಗಳು ಅವಶ್ಯಕ. ಸಾಹಿತ್ಯ ಆಕರಗಳು, 160 ವಿದೇಶಿ ಹಾಗೂ 530 ದೇಶೀಯ ನಿಯತಕಾಲಿಕೆಗಳನ್ನು ತರಿಸಲಾಗುತ್ತಿತ್ತು. ಈಗ ಅವುಗಳನ್ನು ತರಿಸುತ್ತಿಲ್ಲ. ಮುದ್ರಿತ ಗ್ರಂಥಗಳು ಹಾಗೂ ಪತ್ರಿಕೆಗಳು ನಮಗೆ ಆನಂದ ನೀಡುತ್ತವೆ. ಸಂಶೋಧಕರಿಗೆ ಮುದ್ರಿತ ಗ್ರಂಥಗಳು ಬಹಳ ಮುಖ್ಯ.
>
> । ಡಾ.ಸಿ.ಪಿ.ರಾಮಶೇಷ ನಿವೃತ್ತ ಮುಖ್ಯ ಗ್ರಂಥಪಾಲಕ, ಮೈಸೂರು ವಿವಿ

ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಹಿಂದೆ ಜ್ಞಾನದ ಪ್ರಸಾರ ಹಾಗೂ ವಿಚಾರ ವಿನಿಮಯಗಳು ಹಳ್ಳಿಗಳಲ್ಲಿ ಹೆಚ್ಚಾಗಿ ನಡೆಯುತ್ತಿತ್ತು. ಇಂದು ವಿಶ್ವವಿದ್ಯಾಲಯಗಳು ಸಂಶೋಧನಾಂಗ, ಬೋಧನಾಂಗ ಹಾಗೂ ಪ್ರಸಾರಾಂಗ ಎಂಬ ಮೂರು ಜ್ಞಾನದ ಪ್ರಚಾರವನ್ನು ಕೈಗೊಂಡಿವೆ ಎಂದು ತಿಳಿಸಿದರು.

ಗೃಹಪುಸ್ತಕ ಭಂಡಾರ ಕುರಿತು ಉಪನ್ಯಾಸ ನೀಡಿದ ನಿವೃತ್ತ ಮುಖ್ಯ ಗ್ರಂಥಪಾಲಕ ಡಾ.ಸಿ.ಪಿ.ರಾಮಶೇಷ, ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ನಿಘಂಟುಗಳನ್ನು ಇಟ್ಟುಕೊಂಡು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಜಿ.ಬಸವರಾಜು, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ದೀನಬಂಧು ಸಂಸ್ಥೆಯ ಪ್ರೊ.ಜಿ.ಎಸ್.ಜಯದೇವ ಇತರರಿದ್ದರು.

# ಅಂಬೇಡ್ಕರ್ ಬದುಕು ಎಲ್ಲರಿಗೂ ದಾರಿದೀಪ

## ಸ್ನಾತಕೋತ್ತರ ಕೇಂದ್ರದಲ್ಲಿ ನಡೆದ ಪರಿನಿರ್ವಾಣ ದಿನಾಚರಣೆಯಲ್ಲಿ ಪ್ರೊ.ಶಿವಬಸವಯ್ಯ ಅಭಿಮತ

ಚಾಮರಾಜನಗರ, ಡಿ.9 - ಡಾ.ಬಿ.ಆರ್.ಅಂಬೇಡ್ಕರ್‌ರ ಜೀವನವೇ ಎಲ್ಲರಿಗೂ ದಾರಿದೀಪ. ಹೀಗಾಗಿ ಇಂತಹ ಶ್ರೇಷ್ಠರ ಆದರ್ಶಗಳನ್ನು ಯುವ ಸಮುದಾಯ ಅಳವಡಿಸಿಕೊಳ್ಳಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಪ್ರೊ.ಶಿವಬಸವಯ್ಯ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸುವರ್ಣ ಗಂಗೋತ್ರಿ ಆವರಣದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 63ನೇ ಮಹಾ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ದೇಶದಲ್ಲಿ ನೆಲೆಯೂರಿದ್ದ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಹಾಗೂ ಅಸಮಾನತೆ ವಿರುದ್ಧ ಹೋರಾಡಿ, ಪ್ರತಿಯೊಬ್ಬರಿಗೂ ಸಮಾನ ಹಕ್ಕು ಸ್ಥಾಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಜಗತ್ತಿನಲ್ಲೇ ಮಾದರಿಯಾದ ಸಂವಿಧಾನ ರಚಿಸಿ, ತನ್ಮೂಲಕ ದೇಶಕ್ಕೊಂದು ದಿಕ್ಸೂಚಿ ತೋರಿಸಿದ್ದಾರೆ. ಸಾಮಾಜಿಕ ಹೋರಾಟಗಾರರಾಗಿ, ದಾರ್ಶನಿಕ, ತತ್ವಜ್ಞಾನಿ, ಆರ್ಥಿಕ ಹಾಗೂ ಕಾನೂನು ತಜ್ಞರಾಗಿ ಅಂಬೇಡ್ಕರ್ ದೇಶಕ್ಕೆ ನೀಡಿದ ಕೊಡುಗೆ ಅಪಾರ. ಮುಂದಿನ ಪೀಳಿಗೆಗೆ ಅವರ ಬದುಕು ಅನುಕರಣೀಯ ಎಂದರು.

ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಮಾತನಾಡಿ, ಅಂಬೇಡ್ಕರ್ ದೇಶದ ಅನನ್ಯ ಚೇತನಗಳಲ್ಲಿ ಒಬ್ಬರು. ಭಾರತದ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಇಂಥ ಅಪ್ರತಿಮರು ಎಲ್ಲರಿಗೂ ಮಾದರಿ. ಹೀಗಾಗಿ ವಿದ್ಯಾರ್ಥಿಗಳು ಅಂಬೇಡ್ಕರ್ ವಿಚಾರಧಾರೆಗಳನ್ನು ಜೀವನದಲ್ಲಿ ರೂಢಿಸಿಕೊಂಡು, ಅವರ ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.

ಕನ್ನಡ ಉಪನ್ಯಾಸಕ ಬಸವಣ್ಣ ಅಂಬೇಡ್ಕರ್ ಕುರಿತು ಮಾತನಾಡಿದರು. ಅರ್ಥಶಾಸ್ತ್ರ ಉಪನ್ಯಾಸಕ ಮಲ್ಲಿಕಾರ್ಜುನ ಸ್ವಾಮಿ ಬುದ್ಧವಂದನೆಯನ್ನು ಬೋಧಿಸಿದರು. ಉಪನ್ಯಾಸಕರಾದ ಸೌಮ್ಯ, ಡಾ.ಸುನಿಲ್‌ಕುಮಾರ್, ಎಂ.ಮಹೇಶ್‌ಕುಮಾರ್, ಸಂಗಪ್ಪ, ಚೇತನ್, ವಾಣಿಶ್ರೀ, ಬಾಲಕೃಷ್ಣ, ಸಚಿನ್, ಚಾಮರಾಜು, ಮಹದೇವಮೂರ್ತಿ, ಪಿ.ರಾಣಿ ಮತ್ತಿತರರು ಭಾಗವಹಿಸಿದ್ದರು.



ಚಾಮರಾಜನಗರ ಸಮೀಪದ ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 63ನೇ ಮಹಾ ಪರಿನಿರ್ವಾಣ ದಿನ ಆಚರಿಸಲಾಯಿತು. ಕೇಂದ್ರದ ನಿರ್ದೇಶಕ ಪ್ರೊ.ಶಿವಬಸವಯ್ಯ, ಉಪನ್ಯಾಸಕರಾದ ಬಸವಣ್ಣ, ಡಾ.ಮಲ್ಲಿಕಾರ್ಜುನಸ್ವಾಮಿ, ಸೌಮ್ಯ, ಡಾ.ಸುನಿಲ್‌ಕುಮಾರ್, ಎಂ. ಮಹೇಶ್‌ಕುಮಾರ್ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 13 ಮಾರ್ಚ್ 2018

## ಮೈಸೂರು ವಿವಿ 98ನೇ ಘಟಿಕೋತ್ಸವ

# 207 ಮಂದಿಗೆ 348 ಚಿನ್ನದ ಪದಕ, 168 ನಗದು ಪುರಸ್ಕಾರ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ ಘಟಿಕೋತ್ಸವದಲ್ಲಿ ಹೆಚ್ಚು ಪದಕ ಮತ್ತು ನಗದು ಬಹುಮಾನ ಗಳಿಸಿದ ವಿದ್ಯಾರ್ಥಿನಿಯರಾದ (ಎಡದಿಂದ) ಕೆ.ಜಿ.ವನಜಾ, ವರ್ಷಾ ರಾಜ್‌ಕುಮಾರ್, ಡಿ.ಪಿ.ಮಾನಸ, ಸಿ.ಎನ್.ಶಾಂಭವಿ, ಆರ್.ಧನಲಕ್ಷ್ಮೀ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.12(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 207 ಮಂದಿ 348 ಚಿನ್ನದ ಪದಕ ಹಾಗೂ 168 ನಗದು ಬಹುಮಾನಗಳಿಗೆ ಭಾಜನರಾದರು.

ಈ ಪೈಕಿ ಎಂಎಸ್‌ಸಿ ರಸಾಯನಶಾಸ್ತ್ರ ವಿಭಾಗದ ಸಿ.ಎನ್.ಶಾಂಭವಿ ಸೇರಿದಂತೆ ಅನೇಕರು ಹೆಚ್ಚು ಪದಕ ಮತ್ತು ನಗದು ಬಹುಮಾನ ಮುಡಿಗೇರಿಸಿಕೊಳ್ಳುವ ಮೂಲಕ ಶೈಕ್ಷಣಿಕ ಸಾಧನೆ ಮೆರೆದರು. ಸೋಮವಾರ ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ನಡೆದ ಘಟಿಕೋತ್ಸವದಲ್ಲಿ ಪದಕ ಮತ್ತು ನಗದು ಬಹುಮಾನದೊಂದಿಗೆ ಸಾಧನೆ ತೋರಿದವರ ಸಂಭ್ರಮ ಮನೆ ಮಾಡಿತ್ತು.

ಪದಕಗಳು ಮತ್ತು ಬಹುಮಾನಗಳನ್ನು ಬಾಚಿಕೊಳ್ಳುವಲ್ಲಿ ಶೇ.70ರಷ್ಟು ವಿದ್ಯಾರ್ಥಿನಿಯರೇ ಆಗಿರುವುದು ವಿಶೇಷ. ಈ ಪೈಕಿ ಸ್ನಾತಕೋತ್ತರ ವಿಜ್ಞಾನ ವಿಭಾಗದಲ್ಲಿ ಮೈಸೂರು ವಿವಿಯ ಮಾನಸಗಂಗೋತ್ರಿಯ ರಸಾಯನ ಶಾಸ್ತ್ರ ವಿಭಾಗದ ಸಿ.ಎನ್.ಶಾಂಭವಿ ಹೆಚ್ಚು ಪದಕ ಮತ್ತು ಬಹುಮಾನ ಪಡೆದ ಕೀರ್ತಿಗೆ ಭಾಜನರಾಗಿದ್ದಾರೆ. ಪದವಿ ಹಂತದ ವಿಜ್ಞಾನ ವಿಭಾಗದಲ್ಲಿ ಟೆರಿಷಿಯನ್ ಕಾಲೇಜಿನ ಬಿಎಸ್‌ಸಿ (ಪಿಸಿಎಂ) ವಿದ್ಯಾರ್ಥಿನಿ ಡಿ.ಪಿ.ಮಾನಸ ಹೆಚ್ಚು ಪದಕ ಮತ್ತು ಬಹುಮಾನ ತಮ್ಮದಾಗಿಸಿಕೊಂಡಿದ್ದಾರೆ.

ಸ್ನಾತಕೋತ್ತರ ಕಲಾ ವಿಭಾಗದಲ್ಲಿ ಚಾಮರಾಜನಗರದ ಮೈಸೂರು ವಿವಿ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿನಿ ಕೆ.ಜಿ.ವನಜಾ ಹಾಗೂ ಪದವಿ ಹಂತದ ಕಲಾ ವಿಭಾಗದಲ್ಲಿ ಮರಿಮಲ್ಲಪ್ಪ ಕಾಲೇಜಿನ ವಿದ್ಯಾರ್ಥಿನಿ ಆರ್.ಧನಲಕ್ಷ್ಮೀ ಹೆಚ್ಚು ಪದಕ ಮತ್ತು ಬಹುಮಾನ ಪಡೆದುಕೊಂಡಿದ್ದಾರೆ.

> “ ಶೈಕ್ಷಣಿಕ ಸಾಧನೆ ಮಾಡಬೇಕೆಂಬ ಗುರಿ ಇತ್ತು. ಹೀಗಾಗಿ ಏಕಾಗ್ರತೆ ಮತ್ತು ಆಸಕ್ತಿಯಿಂದ ಓದುವುದನ್ನು ರೂಢಿಸಿಕೊಂಡಿದ್ದೆ. ನನ್ನ ಶೈಕ್ಷಣಿಕ ಸಾಧನೆಗೆ ಪೋಷಕರೇ ಬೆನ್ನೆಲುಬು. ಪೋಷಕರು ಅಂತಹ ವಿದ್ಯಾವಂತರೇನಲ್ಲ. ನಮ್ಮ ತಂದೆ ಎಸ್‌ಎಸ್‌ಎಲ್‌ಸಿಯಷ್ಟೇ ಓದಿದ್ದು, ವ್ಯವಸಾಯದೊಂದಿಗೆ ಊರಿನಲ್ಲಿ ಹೋಟೆಲ್ ನಡೆಸುತ್ತಿದ್ದಾರೆ. ಪಿಹೆಚ್.ಡಿ ಮಾಡಬೇಕು, ಜತೆಗೆ ಐಐಟಿಗೆ ಸೇರಬೇಕೆಂಬ ಆಕಾಂಕ್ಷೆ ಇದೆ. ಬೋಧನಾ ಕ್ಷೇತ್ರ ನನ್ನ ಆಸಕ್ತಿಯಾಗಿದ್ದು, ಮೂಲ ವಿಜ್ಞಾನವನ್ನು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ಪಸರಿಸಬೇಕು ಎಂಬ ಅಭಿಲಾಷೆಯೂ ಇದೆ.
>
> –ಸಿ.ಎನ್.ಶಾಂಭವಿ

**ಸಿ.ಎನ್.ಶಾಂಭವಿ:** ಮೈಸೂರು ವಿವಿ ಮಾನಸಗಂಗೋತ್ರಿಯ ರಸಾಯನಶಾಸ್ತ್ರದ ವಿಭಾಗದಲ್ಲಿ (ಎಂಎಸ್‌ಸಿ) ಸಿ.ಎನ್.ಶಾಂಭವಿ ತೋರಿದ ಶೈಕ್ಷಣಿಕ ಸಾಧನೆಗೆ 13 ಚಿನ್ನದ ಪದಕಗಳು ಹಾಗೂ 4 ನಗದು ಬಹುಮಾನಗಳು ಸಂದಿವೆ. ಮೂಲತಃ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಚಿಕ್ಕಬಾಗಿಲು ಗ್ರಾಮದ ಶಾಂಭವಿ, ನಾಗರಾಜು ಮತ್ತು ರಾಜಮ್ಮ ದಂಪತಿಯ ಹಿರಿಯ ಪುತ್ರಿ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕೆಎಂ ದೊಡ್ಡಿಯ ಭಾರತೀ ಕಾಲೇಜಿನಲ್ಲಿ ಬಿಎಸ್‌ಸಿ ವ್ಯಾಸಂಗ ಮಾಡಿರುವ ಇವರು ಪದವಿಯನ್ನು 3 ಪದಕ ಮತ್ತು 3 ನಗದು ಬಹುಮಾನದೊಂದಿಗೆ ಪೂರೈಸಿದ ಹಿರಿಮೆಗೂ ಪಾತ್ರರಾಗಿದ್ದಾರೆ.

**ಡಿ.ಪಿ.ಮಾನಸ:** ಟೆರಿಷಿಯನ್ ಕಾಲೇಜಿನ ಪಿಸಿಎಂನಲ್ಲಿ ಡಿ.ಪಿ.ಮಾನಸ ಅವರ ಶೈಕ್ಷಣಿಕ ಸಾಧನೆಗೆ 7 ಚಿನ್ನದ ಪಕದ ಹಾಗೂ 9 ನಗದು ಬಹುಮಾನ ದಕ್ಕಿವೆ. ಮೈಸೂರು ಲಲಿತಮಹಲ್ ನಗರದ ನಿವಾಸಿಯಾದ ಇವರು ಡಿ.ಪ್ರಕಾಶ್ ಮತ್ತು ವೈ.ಎನ್.ನೀಲು ದಂಪತಿ ಪುತ್ರಿ, ಪ್ರಸ್ತುತ ಇವರ ಮಾನಸಗಂಗೋತ್ರಿಯಲ್ಲಿ ಎಂಎಸ್‌ಸಿ ರಸಾಯನಶಾಸ್ತ್ರ ವಿಭಾಗದಲ್ಲಿ ವ್ಯಾಸಂಗ ಮುಂದುವರೆಸಿದ್ದಾರೆ.

> “ ಶೈಕ್ಷಣಿಕ ಸಾಧನೆಯ ಹಿಂದಿನ ಪ್ರೇರಣೆ ಪ್ರಶಸ್ತಿಯಲ್ಲ. ಪ್ರಾಮಾಣಿಕ ಮತ್ತು ಪರಿಶ್ರಮದಿಂದ ಓದಿನಲ್ಲಿ ತೊಡಗಿಕೊಳ್ಳುತ್ತಿದ್ದೆ. ಪ್ರಶಸ್ತಿಗೆಂದು ಓದದೇ ಜ್ಞಾನಕ್ಕಾಗಿ ಓದಿದೆ. ಇದೀಗ ತಂತಾನೇ ಪ್ರಶಸ್ತಿ ಒಲಿದು ಬಂದಿದೆ. ನನ್ನ ಈ ಸಾಧನೆಗೆ ಪೋಷಕರು ಮಹತ್ವದ ಪಾತ್ರ ವಹಿಸಿದ್ದಾರೆ. ಪಿಯುನಲ್ಲೂ ಶೇ.90ರಷ್ಟು ಅಂಕ ಗಳಿಸಿ, ತೇರ್ಗಡೆಯಾಗಿದ್ದೇನೆ. ಬಿಎಸ್‌ಸಿ ವೇಳೆಯಲ್ಲಿ ನನ್ನ ಶೈಕ್ಷಣಿಕ ಚಟುವಟಿಕೆ ಗಮನಿಸಿದ್ದ ಶಿಕ್ಷಕರು ಹೇಳುತ್ತಿದ್ದಂತೆ ಇಂದು ಹಲವು ಪ್ರಶಸ್ತಿಗಳು ಸಂದಿದ್ದು, ತುಂಬಾ ಸಂತಸ ಉಂಟು ಮಾಡಿದೆ.
>
> –ಡಿ.ಪಿ.ಮಾನಸ

**ಕೆ.ಜಿ.ವನಜಾ:** ಚಾಮರಾಜನಗರದ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರದ ಕನ್ನಡ ವಿಭಾಗದಲ್ಲಿ ಕೆ.ಜಿ.ವನಜಾ ಅವರ ಸಾಧನೆಗೆ 8 ಪದಕ ಮತ್ತು 4 ನಗದು ಬಹುಮಾನ ಒಲಿದಿವೆ. ಇವರು ಚಾಮರಾಜನಗರ ಜಿಲ್ಲೆಯ ಕಾಗಲವಾಡಿ ಗ್ರಾಮದ ಎನ್.ಗುರುಸ್ವಾಮಿ ಮತ್ತು ಡಿ.ವಿ.ರತ್ನಮ್ಮ ದಂಪತಿ ಪುತ್ರಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಕಾಗಲವಾಡಿ ಗ್ರಾಮದಲ್ಲಿ ಪೂರೈಸಿದ ಇವರು ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪಿಯು ಹಾಗೂ ಪದವಿ ಶಿಕ್ಷಣ ಪಡೆದರು.

> “ ಕುಟುಂಬ ಸದಸ್ಯರ ಬೆಂಬಲದಿಂದ ಇಂದು ಈ ಮಟ್ಟಕ್ಕೇರಿದ್ದೇನೆ. ಮುಂದೆ ಕೆಎಎಸ್, ಐಎಎಸ್ ಪರೀಕ್ಷೆಯಲ್ಲಿ ಯಶಸ್ಸು ಗಳಿಸಬೇಕೆಂಬ ಹಂಬಲವಿದೆ. ಆದರೆ ಇದಕ್ಕೆ ಅಗತ್ಯವಿರುವ ತರಬೇತಿಗೆ ದುಬಾರಿ ಶುಲ್ಕ ಭರಿಸುವಷ್ಟು ನಮ್ಮ ಕುಟುಂಬ ಆರ್ಥಿಕವಾಗಿ ಸಬಲವಾಗಿಲ್ಲ. ನಮ್ಮ ಕುಟುಂಬದಲ್ಲಿ ಇಷ್ಟು ಓದಿದ್ದು ನಾನೊಬ್ಬಳೆ. ಪ್ರತಿದಿನ 4 ತಾಸು ಓದುತ್ತಿದ್ದೆ. ಪರೀಕ್ಷಾ ಸಂದರ್ಭದಲ್ಲಿ ಮಾತ್ರ 8 ಗಂಟೆ ಅಧ್ಯಯನದಲ್ಲಿ ತೊಡಗುತ್ತಿದ್ದೆ.
>
> –ಕೆ.ಜಿ.ವನಜಾ

**ಆರ್.ಧನಲಕ್ಷ್ಮೀ:** ಮೈಸೂರಿನ ಮರಿಮಲ್ಲಪ್ಪ ಪ್ರಥಮ ದರ್ಜೆ ಕಾಲೇಜಿನ ಬಿಎ ವ್ಯಾಸಂಗದಲ್ಲಿ ಆರ್.ಧನಲಕ್ಷ್ಮೀ ತೋರಿದ ಶೈಕ್ಷಣಿಕ ಸಾಧನೆಗೆ 9 ಚಿನ್ನದ ಪದಕ ಹಾಗೂ 8 ನಗದು ಬಹುಮಾನಗಳು ಸಂದಿವೆ. ಇದೀಗ ಇವರು ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ತಮ್ಮ ವಿದ್ಯಾಭ್ಯಾಸ ಮುಂದುವರೆಸಿದ್ದಾರೆ.

# ಪದವಿ ಸ್ವೀಕರಿಸಿದ 27502 ಅಭ್ಯರ್ಥಿಗಳು

## 575 ಮಂದಿಗೆ ಪಿಎಚ್‌ಡಿ ಪ್ರದಾನ



ಮೈಸೂರು: ಶತಮಾನೋತ್ಸವ ಸಂಭ್ರಮ ಆಚರಿಸಿಕೊಂಡ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೋಮವಾರ ಜರುಗಿದ 98ನೇ ಘಟಿಕೋತ್ಸವದಲ್ಲಿ ವಿವಿ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲ ವಜುಭಾಯಿ ರೂಢಾಬಾಯಿ ವಾಲಾರ ಅನುಪಸ್ಥಿತಿಯಲ್ಲಿ 575 ಪಿಎಚ್.ಡಿ ಸೇರಿ 27502 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವಿಶ್ವವಿದ್ಯಾನಿಲಯದ ಕಾರ್ಯಸೌಧದಲ್ಲಿ ಸೋಮವಾರ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ವಾಲಾ, ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಗೈರುಹಾಜರಿಯಲ್ಲೇ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಪದವಿ ಪ್ರದಾನ ಮಾಡಿದರು. ಮೂರು ದಶಕಗಳ ಬಳಿಕ ಗೌರವ ಡಾಕ್ಟರೇಟ್‌ಅನ್ನು ಯಾರಿಗೂ ಕೊಡಮಾಡಲಿಲ್ಲ. ವಿವಿ ಸಿಂಡಿಕೇಟ್ ಸಭೆಯಲ್ಲಿ ಪರಿಣಿತರ ಸಮಿತಿ ಕಳುಹಿಸಿದ್ದ ಪಟ್ಟಿಗೆ ಕೊನೆಯ

4ನೇ ಪುಟಕ್ಕೆ ▶▶

ಮೈಸೂರು ವಿವಿಯ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ನಿವೃತ್ತ ನ್ಯಾ.ಎನ್.ಸಂತೋಷ್ ಹೆಗ್ಡೆ ಅಭಿಮತ

# ಸಮಾಜ ಹೊಂದಿರುವ ಧೋರಣೆ ಭ್ರಷ್ಟಾಚಾರಕ್ಕೆ ಕಾರಣ

**ವಿಶ್ವವಾಣಿ ಸುದ್ದಿಮನೆ ಮೈಸೂರು**

ದೇಶದಲ್ಲಿ ಭ್ರಷ್ಟಾಚಾರ ಈ ಪ್ರಮಾಣದಲ್ಲಿ ಬೆಳೆಯಲು ಭ್ರಷ್ಟಾಚಾರದ ಬಗ್ಗೆ ಸಮಾಜ ಹೊಂದಿರುವ ಧೋರಣೆಯೇ ಕಾರಣ. ಇವತ್ತಿನ ಸಮಾಜಕ್ಕೆ ನ್ಯಾಯಯುತವಾದ ಸಂಪತ್ತು ಯಾವುದು, ಅನ್ಯಾಯದ ದ್ರವ್ಯ ಯಾವುದು ಎಂಬ ವಿವೇಚನೆಯೇ ಇಲ್ಲದಂತಾಗಿದೆ ಎಂದು ನಿವೃತ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದರು. ಸಮಾಜದಲ್ಲಿ ಯಾರೊಬ್ಬರೂ ಭ್ರಷ್ಟಾಚಾರ ಒಂದು ಕೇಡು ಎಂದು ಬಗೆಯುವುದೇ ಇಲ್ಲ.

ಎಲ್ಲಿಯವರೆಗೆ ಸಮಾಜ ನ್ಯಾಯಯುತ ಸಂಪತ್ತು ಮತ್ತು ನ್ಯಾಯ ಬಾಹಿರ ಸಂಪತ್ತಿನ ನಡುವಿನ ವ್ಯತ್ಯಾಸವನ್ನು ಗುರುತಿ ಸುವುದಿಲ್ಲವೋ ಅಲ್ಲಿಯವರೆಗೆ ನಾವು ಭ್ರಷ್ಟಚಾರದ ವಿರುದ್ಧದ ನಮ್ಮ ಸಮರದಲ್ಲಿ ಜಯಗಳಿಸಲು ಸಾಧ್ಯವಾಗದು ಎಂದು ಅಭಿಪ್ರಾಯಪಟ್ಟರು.

ಇವತ್ತಿನ ಸಮಾಜ ಅಲ್ಲೋಲಕಲ್ಲೋಲ ಪರ್ವದಲ್ಲಿ ಸಾಗುತ್ತಿದೆ.ನಮಗೆ ಮಾರ್ಗದರ್ಶಕರಾಗಿ ಒಬ್ಬ ಮುತ್ಸದ್ದಿಯೂ ಇಲ್ಲ. ರಾಜಕಾರಣಿಗಳು ಯಥೇಚ್ಛವಾಗಿದ್ದಾರೆ. ಆದರೆ, ಮುತ್ಸದ್ದಿಗಳ ಕೊರತೆಯಿದೆ ಎಂದು ವಿಷಾದಿಸಿದರು. ಇಂದು ಸಮಾಜ ಧರ್ಮ, ಜಾತಿ, ಶ್ರೀಮಂತಿಕೆ ಮತ್ತು ಬಡತನವೆಂಬ ದ್ವಂದ್ವಗಳಲ್ಲಿ ಸಿಲುಕಿಕೊಂಡಿದೆ. ಈ ರಾಷ್ಟ್ರದ ಭಾವಿ ರಕ್ಷಕರು ನೀವೇ. ಹಾಗಾಗಿ, ರಾಷ್ಟ್ರದ ಸೂತ್ರ ಹಿಡಿಯಲು ನೀವೆಲ್ಲ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಕರೆ ನೀಡಿದರು.

**ಅಸಮಾನತೆ ತೊಡೆದು ಹಾಕಿ:** ಸಾಮಾಜಿಕ ಸ್ನಾವೇಶಕ್ಕೆ ನೀವೆಲ್ಲ ಪ್ರವೇಶ ಮಾಡುತ್ತಿರುವುರಿ, ಇಂಥ ತಾರತಮ್ಯವುಳ್ಳ ಸಮಾಜದ ಅಸಮಾನತೆಗಳನ್ನು ತೊಡೆದುಹಾಕಿ ಹಸಿವು ಮತ್ತು ಕಣ್ಣೀರನ್ನು ಹೋಗಲಾಡಿಸುವ ದಿಸೆಯಲ್ಲಿ ಕಂಕಣಬದ್ಧರಾಗಬೇಕು ಎಂದರು.

**ಮೌಲ್ಯಾಧಾರಿತ ಸಮಾಜ ನಿರ್ಮಾಣ:** ಮೌಲ್ಯಾಧಾರಿತ ಸಮಾಜ ನಿರ್ಮಾಣ ಮಾಡಬೇಕು. ನಮ್ಮ ಸಂವಿಧಾನದಲ್ಲಿ ಕೊಡಮಾಡಿರುವಂಥ ಮೌಲ್ಯಗಳವು. ಭಾರತದ ಸಂವಿಧಾನವೆಂಬುದು ಕೇವಲ ಹಕ್ಕುಗಳ ಮಸೂದೆಯಲ್ಲ, ಅದು ಒಂದು ಪವಿತ್ರವಾದ ದಸ್ತಾವೇಜು. ಯಾವುದೇ ಧರ್ಮಗ್ರಂಥದಷ್ಟೇ ಪವಿತ್ರ ಅದು. ಭಾರತದ ಐಕ್ಯತೆ ಕಾಪಾಡಿ,ಧಾರ್ಮಿಕ ಹಾಗೂ ಭಾಷಿಕ ಸೌಹಾರ್ದತೆ ಬೆಳೆಸಿಕೊಳ್ಳಬೇಕು .

ನೀವು ಎಷ್ಟೇ ಬಿಡುವಿಲ್ಲದವರಾಗಿದ್ದರೂ ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸುವ ದಿಸೆಯಲ್ಲಿ ಸ್ವಲ್ಪ ಆಲೋಚಿಸಿ ಎಂದರು. ದೇಶ ಸಾಧಿಸಿರುವ ಬೆಳವಣಿಗೆಯಿಂದ ಏನು ಪ್ರಯೋಜನವಾದಂತಾಯಿತು. ವಾಸ್ತವವಾಗಿ ನಗರ ಪ್ರದೇಶದವರು ಮತ್ತು ಗ್ರಾಮೀಣ ಜನ, ಶ್ರೀಮಂತರು-ಬಡವರ ನಡುವೆ ಇಷ್ಟೊಂದು ವ್ಯತ್ಯಾಸವಿದೆ.

ಈ ಅಂತರವನ್ನು ಕಡಿಮೆ ಮಾಡಬೇಕು ಎಂದರು. ಸಿರಿವಂತಿಕೆಯೆಂಬುದು ಯಶಸ್ಸಿನ ದ್ಯೋತಕ ಎಂದು ಇಂದಿನ ಸಮಾಜ ಪುರಸ್ಕರಿಸುತ್ತದೆ. ಸಿರಿವಂತಿಕೆ ಪ್ರಾಪ್ತವಾದದ್ದು, ಹೇಗೆ ಎಂಬುದರ ಬಗ್ಗೆ ಅದು ತಲೆಕೆಡಿಸಿಕೊಳ್ಳುವುದಿಲ್ಲ, ಶ್ರಮದಿಂದ ದುಡಿದು ನ್ಯಾಯಯುತವಾಗಿ ಶ್ರೀಮಂತರಾದವರೂ ಒಂದೇ.

ಅಡ್ಡದಾರಿ ಹಿಡಿದು ಹಣ ಸಂಪಾದಿಸಿದವರೂ ಒಂದೇ. ಈ ರೀತಿ ಸಮಾಜದಲ್ಲಿ ವಿವೇಚನೆ ಗೈರು ಹಾಜರಾಗಿರುವುದರಿಂದ ಜನರು ಹೆಚ್ಚು ಭ್ರಷ್ಟಾಚಾರದ ಕಡೆ ವಾಲುತ್ತಿದ್ದಾರೆ ಎಂದು ಹೇಳಿದರು.




ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ ತೊಂಬತ್ತೆಂಟನೆಯ ವಾರ್ಷಿಕ ಘಟಿಕೋತ್ಸವದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ. ಎನ್.ಸಂತೋಷ್ ಹೆಗ್ಡೆ ಅವರನ್ನು ಅಭಿನಂದಿಸಲಾಯಿತು.

## ಮಾನವಶಾಸ್ತ್ರ ವಿಭಾಗದಲ್ಲಿ 1 ಚಿನ್ನ

ಪದವಿ, ಪದಕ, ನಗದು ಬಹುಮಾನ ನನ್ನ ಮುಂದಿನ ಗುರಿಯನ್ನು ನನಸಾಗಿಸಲು ಪ್ರೋತ್ಸಾಹದಾಯಕವಾಗಿದೆ. ನಿರೀಕ್ಷೆಯಿರಲಿಲ್ಲ ಆ ಕಾರಣಕ್ಕಾಗಿ ಹೆಚ್ಚು ಸಂತಸವಾಗುತ್ತಿದೆ ಎಂದು ಮೈಸೂರು ವಿವಿ ಮಾನವಶಾಸ್ತ್ರ ವಿಭಾಗದಲ್ಲಿ 1 ಚಿನ್ನದ ಪದಕ, 1 ನಗದು ಬಹುಮಾನ ಸ್ವೀಕರಿಸಿದ ಪಿರಿಯಾಪಟ್ಟಣ ತಾಲೂಕಿನ ತೆಂಗಿನಕುಪ್ಪೆ ರಾಮೇಗೌಡ, ರತ್ನಮ್ಮ ದಂಪತಿಗಳ ಪುತ್ರ ಟಿ.ಆರ್.ಸುನೀಲ್ ಸಂತಸವ್ಯಕ್ತಪಡಿಸಿದರು.

## ಚಿನ್ನದ ಪದಕ ಸಿಗುವ ನಿರೀಕ್ಷೆಯಿರಲಿಲ್ಲ

ಪಠ್ಯಪುಸ್ತಕಗಳ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದೆ. ಅದರೊಂದಿಗೆ ಪ್ರಾಯೋಗಿಕವಾಗಿ ಅಭ್ಯಾಸ ಮಾಡಿದ್ದರಿಂದ ನೆರವಾಗಿಬಿಎಸ್ಸಿ ಪದವಿಯಲ್ಲಿ 7 ಚಿನ್ನದ ಪದಕ ಹಾಗೂ 9 ನಗದು ಬಹುಮಾನಗಳ ಪಡೆಯಲು ಸಾಧ್ಯವಾಯಿತು ಎಂದು ಡಿ.ಪಿ.ಮಾನಸ ಸಂತಸ ವ್ಯಕ್ತಪಡಿಸಿದರು. ಅಪ್ಪ ಪ್ರಕಾಶ್, ಅಮ್ಮ ನೀಲು ಅವರ ಒಬ್ಬಳೆ ಮಗಳು ಹಾಗಾಗೀ ನನ್ನ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದರು. ಮೈಸೂರಿನ ಲಲಿತಮಹಲ್‌ನಗರದವರಾಗಿದ್ದು, ತಂದೆ ಪ್ರಕಾಶ್ ತಿ.ನರಸಿಪುರದ ವಿದ್ಯೋದಯ ಕಾಲೇಜಿನ ಶಿಕ್ಷಕರಾಗಿದ್ದಾರೆ. ನನಗೆ ಬಿಎಸ್ಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಬಂದಿದ್ದು, ಖುಷಿಯಾಗಿತ್ತು. ಚಿನ್ನದ ಪದಕ ಸಿಗುವ ನಿರೀಕ್ಷೆಯಿರಲಿಲ್ಲ ತುಂಬ ಸಂತಸವಾಗುತ್ತಿದೆ ಎಂದು ತಿಳಿಸಿದರು.

## ಅಪ್ಪನ ಆಸೆ ಈಡೇರಿಸಿದ ಸಂತಸ

ನನ್ನ ಓದಿನ ಪರಿಶ್ರಮಕ್ಕೆ ಫಲ ಸಿಕ್ಕಿದೆ. ನನ್ನ ಓದಿಗೆ ಸ್ಫೂರ್ತಿಯಾದ ಗೆಳತಿ ತ್ರಿವೇಣಿ ಪ್ರೋತ್ಸಾಹ ಹೆಚ್ಚು ಹಾಗಾಗೀ ನನ್ನ ಪದಕವನ್ನು ಅವಳ ಹೆಸರಿನಲ್ಲಿ ಪಡೆಯಲು ನಾನು ಬಯಸುತ್ತೇನೆ ಎಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ 4 ಚಿನ್ನದ ಪದಕ ಹಾಗೂ 1 ನಗದು ಬಹುಮಾನ ಪಡೆದುಕೊಂಡ ಅಕ್ಷತಾ.ಜೆ ಸಂತಸವನ್ನು ವ್ಯಕ್ತಪಡಿಸಿದರು. ಮಧ್ಯಮ ಕುಟುಂಬ ನನ್ನ ಹಾಗೂ ಅಕ್ಕನ ವಿದ್ಯಾಭ್ಯಾಸಕ್ಕೆ ಅಪ್ಪ ಹೆಚ್ಚು ಶ್ರಮಿಸುತ್ತಿದ್ದರು. ಅದರಂತೆಯೇ ಅಕ್ಕ ಉತ್ತಮ ಶಿಕ್ಷಣ ಪಡೆದುಕೊಂಡರು ಅಕ್ಕನಿಗಿಂತ ನನ್ನ ಓದಿನ ಮೇಲೆ ಅಪ್ಪ ಹಾಗೂ ಅಮ್ಮ ಇಬ್ಬರಿಗೂ ಹೆಚ್ಚಿನ ನೀರಿಕ್ಷೆಯಿತು.

## ಬಡತನದಲ್ಲಿಯೇ ಅರಳಿದ ಚಿನ್ನದ ಹುಡುಗಿ

ಕನ್ನಡ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಚಾಮರಾಜನಗರ ಜಿಲ್ಲೆಯ ಕಾಗಲವಾಡಿ ಗ್ರಾಮದ ನಿವಾಸಿ ಎನ್.ಗುರುಸ್ವಾಮಿ, ಡಿ.ವಿ.ರತ್ನಮ್ಮ ಅವರ ಕಿರಿಯ ಪುತ್ರಿ ಕೆ.ಜಿ.ವನಜಾ ಅವರು 8 ಚಿನ್ನದ ಪದಕ, 4 ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡರು. ರೇಷ್ಮೆ ಇಲಾಖೆ ನಿವೃತ್ತ ನೌಕರರ ಮಗಳಾದ ಇವರು ಅಪ್ಪನ ನಿವೃತ್ತಿ ಭತ್ಯದ ಹಣದಲ್ಲಿಯೇ ಅಮ್ಮನ ಕೂಲಿಯ ಹಣ ಹಾಗೂ ವಿಶೇಷ ಚೇತನ ಅಣ್ಣನ ಆರೋಗ್ಯ ಹೀಗೆ ಕುಟುಂಬಕ್ಕೆ ಆಧಾರವಾದ ನಿವೃತ್ತಿವೇತನದ ಹಣದಲ್ಲಿಯೇ ಉತ್ತಮ ಶಿಕ್ಷಣ ಪಡೆದವರಾಗಿದ್ದಾರೆ.



ಚಿನ್ನದ ಪದಕ ಮುಡಿಗೇರಿಸಿಕೊಂಡ ವನಿತೆಯರು.